# ಅಪರಂಜಿ

ತಿಳಿನಗೆಯ ಕಾರಂಜಿ

ಡಿಸೆಂಬರ್ - 2015



**ಸಂಪಾದಕ ಮಂಡಳಿ**

**ಸಂಪಾದಕರು**

ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**

ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**

ಶ್ರೀ ಎಚ್.ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**

ಶ್ರೀ ಎಂ. ಶಿವಕುಮಾರ್

**ಟ್ರಸ್ಟಿಗಳು**

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ವಿ.ಆರ್. ನಾಥ್

ಶ್ರೀ ಎಚ್.ಎನ್. ಆನಂದ

ಶ್ರೀ ಸಿ.ಆರ್. ಸತ್ಯ

ಶ್ರೀ ಕೆ. ರವೀಂದ್ರ ರಾವ್

**ಚಂದಾ ವಿವರ:**
**ಬಿಡಿ ಪ್ರತಿ: ರೂ. 10/-**
**ವಾರ್ಷಿಕ ಚಂದಾ: ರೂ. 100/-**
**ಹತ್ತು ವರ್ಷದ ಚಂದಾ:ರೂ. 750/-**

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳಿಸಿ.
ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ.



# ಅಪರಂಜಿ

ತಿಳಿನಗೆಯ ಕಾರಂಜಿ

**ಸಂಪುಟ 33**
**ಸಂಚಿಕೆ - 3**
**ಡಿಸೆಂಬರ್ - 2015**

## ಈ ಸಂಚಿಕೆಯಲ್ಲಿ .....

| | | |
|---|---|---|
| ಅಪರಂಜಿ ಕಿಡಿ | **ಪ್ರಕಾಶ್** | 2 |
| ಆ ರಾತ್ರಿಗಳು.... | **ಶ್ರೀನಿವಾಸ ವೈದ್ಯ** | 3 |
| ಗಾಣದ ಎತ್ತು | **ಪ್ರಕಾಶ್** | 11 |
| ಕೃಷ್ಣ ಯಾವತ್ತು ಹುಟ್ಟಿದ? | **ನುಗ್ಗೆಹಳ್ಳಿ ಪಂಕಜ** | 13 |
| ಕೆಲವು ಸಾರಿ ಹೀಗೂ.... | **ವೈ.ಎನ್. ಗುಂಡೂರಾವ್** | 16 |
| ಮೊಸರನ್ನದ ಡಬ್ಬಿ! | **ಚಿತ್ರಾ ರಾಮಚಂದ್ರನ್** | 22 |
| ಮಾತಿನ ಮಹತ್ತು | **ಬೇಲೂರು ರಾಮಮೂರ್ತಿ** | 27 |
| ತುಂತುರು | **ದಂನಾಳ** | 30 |
| ಕಡಲೆ ಸ್ವಗತ | **ಗುಂಡುರಾವ್ ದೇಸಾಯಿ** | 31 |
| ಹರಕು ಮಾರಿಯವ... | **ಎಚ್. ಶಾಂತರಾಜ ಐತಾಳ** | 36 |
| ವಾಟ್ಸಪ್ ಪಂಚಾಂಗ | **ಪ್ರಶಾಂತ ಅಡೂರ** | 39 |

**ಮುಖಪುಟ ವ್ಯಂಗ್ಯಚಿತ್ರ - ಗುಜ್ಜಾರ್**

ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560 003. email: koravanji42@hotmail.com

*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ, ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್, ಬೆಂಗಳೂರು - 560 068. ದೂರವಾಣಿ: 080-26688488. email: belururamamurthy@gmail.com

*ಮುದ್ರಣ : ರವಿ ಗ್ರಾಫಿಕ್ಸ್ - ಅಕ್ಷರ ಜೋಡಣೆ : ಒಮೇಗಾ ಲೇಸರ್‌ಟೆಕ್*

# ಅಪರಂಜಿ ಕಿಡಿ

● ಪ್ರಕಾಶ್



ರಾಜ್ಯದಲ್ಲಿ ಮಳೆ ಮುಂದುವರಿಕೆ – ಪತ್ರಿಕೆ

***● ಪಾಪಿಗಳ ಸಂಖ್ಯೆ ಕಡಿಮೆಯಾಗಿದೆ !!***

★★★

ಬಿ.ಬಿ.ಎಂ.ಪಿ.ಯಲ್ಲಿ ಬೆಂಬಲ ಖಾಯಂ ಅಲ್ಲ – ಶ್ರೀ ಕುಮಾರಸ್ವಾಮಿ

***● ಅಶಾಶ್ವತ ರಾಜಕೀಯ !!***

★★★

ತನ್ನ ಮನೆಗೇ ಕನ್ನ ಹಾಕಿಸಿದ ಮಹಿಳೆ – ಸುದ್ದಿ

***● ಇದಕ್ಕೆ ಒಂದು ಗಾದೆ ಮಾಡಬೇಕಲ್ಲ !!***

★★★

ಸಿ.ಎಂ. ನಿವಾಸಕ್ಕೆ ಚಾಕು ತಂದ ವ್ಯಕ್ತಿಯ ಬಂಧನ – ಪತ್ರಿಕೆ

***● ಪಾಪ, ರೆಡ್ ಟೇಪ್ ಕತ್ತರಿಸಲು ಬಂದವನಿರಬೇಕು !?***

★★★

ಲೋಕಾಯುಕ್ತ ಬಲೆಗೆ ಮಹದೇವ ಎಂಬ ಎಂಜಿನಿಯರ್ – ಸುದ್ದಿ

***● ಹರ, ಹರಾ !!***

★★★

ಶೋಯೆಬ್ ಮಲ್ಲಿಕ್ ಕ್ರಿಕೆಟ್‌ನಿಂದ ನಿವೃತ್ತಿ – ಕ್ರೀಡಾ ಸುದ್ದಿ

***● ಅವರು ಟೆನಿಸ್ ಶುರು ಮಾಡುವುದು ಖಚಿತವಲ್ಲವಂತೆ !!***

★★★

ಸಚಿವರು ಹಾರಿ ಬಿಟ್ಟ ಪಾರಿವಾಳ ಅವರ ತಲೆಯ ಮೇಲೆ ಕುಳಿತು ಬಿಟ್ಟಿತು – ಬೀದರ್ ಸುದ್ದಿ

***● ಅದಕ್ಕೆ ಏನು ಅಸಮಾಧಾನವೋ ?!***

★★★

ಕುಸಿದ ರಾಜಕೀಯ ವಾಗ್ವಾದ ಮಟ್ಟ – ಪತ್ರಿಕೆ

***● ಕುಸಿಯಲು ಜಾಗ ಇದ್ದದ್ದೇ ಆಶ್ಚರ್ಯ !!***

★★★

# ಆ ರಾತ್ರಿಗಳು.........

**- ಶ್ರೀನಿವಾಸ ವೈದ್ಯ**

**ಧಾ**ರವಾಡದ ಕಾಮನಕಟ್ಟೀ ಭಾಗಕ್ಕ ಸಂಜೆ ಕಳೆದು ರಾತ್ರಿ ಯಾವಾಗ ಸುರು ಆಗತsದ ಅಂತ ನಿಖರವಾಗಿ ಹೇಳೋದು ತ್ರಾಸದ ಕೆಲಸ. ಬೇಂದ್ರೆಯವರ ಮನೀಮುಂದು ''ದನಕರದ ಕಾಲಿನ ಧೂಳಿ.. ಸಂಜೆಯ ಹೂಳಿ...'' ಯಾವಾಗ ಸಾಧನಕೇರಿಯಿಂದ ಕೆಲಗೇರಿ ಕಡೆ ದಟ್ಟವಾಗಿ ಹಬ್ಬಲಿಕ್ಕೆ ಸುರು ಆಗತದೋ, ಆವಾಗ ಧಾರವಾಡದ ಉಳಿದ ಭಾಗಗಳಾದ ಸಪ್ತಾಪುರ, ಮಾಳಮಡ್ಡಿ, ಮದಿಹಾಳ, ಕಾಮನ ಕಟ್ಟೆಗಳಿಗೆಲ್ಲ ಮೆಲ್ಲಮೆಲ್ಲನೆ ಮೆಲ್ಲ ಮೆಲ್ಲನೆ ಸಂಜೆ ಆವರಿಸಿಕೊಳ್ಳಲಿಕ್ಕೆ ಸುರೂ ಆಗತsದ ಅಂತ ಹೇಳಬಹುದು.

ಇತ್ತ ಕಾಮನಕಟ್ಟೆಯಲ್ಲಿ ಗಂಗಕ್ಕನ ವಠಾರದ ಗೋಡೆಗೆ ತಟ್ಟಿದ ಪೇಲವ ಹಳದೀ ಇಳಿ ಬಿಸಿಲು ಮೆಟ್ಟಲು ಮೆಟ್ಟಲು ಇಳಿದು ಮ್ಲಾನ ಸಂಜೆಗಳಲ್ಲಿ ಕರಗಿ ಹೋಗುತ್ತಿದ್ದಂತೆಯೇ, ವಠಾರದ ಸುತ್ತಲ ಕಟ್ಟೆಗೆ ತಮ್ಮ ತಮ್ಮ ದಿನಗಳೆಣಿಕೆಯ ಹರಟೆಗೆ ಕುಳಿತ ಮಹಿಳಾಮಣಿಗಳು, ''ಹುಡುಗರು ಬರೋ ಹೊತ್ತಾತರೆವ್ವ'' ಎನ್ನುತ್ತ ಒಬ್ಬೊಬ್ಬರಾಗಿ ಕರಗತೊಡಗುತ್ತಿದ್ದರು. ಮುಗಿಲು ಟೆಕ್ನಿಕಲರ್‌ದಿಂದ ಈಸ್ಟ್‌ಮನ್ ಕಲರ್‌ಗೆ ತಿರುಗಿ ಹುಸಿಗೆಂಪು ಆಗ ತೊಡಗಿರುತ್ತಿತ್ತು. ಇಷ್ಟಾದರೂ ರಂಗಕ್ಕ ಮತ್ತು ಯಮುನಕ್ಕ ಮಾತ್ರ ''ನಾಳಿನ ಗೋಮಯ''ದ ಚಿಂತೀ ಮಾಡತs ಅಲ್ಲೇ ಕೂತಿರತಿದ್ದರು. ಇತ್ತ ಕಾಮನಕಟ್ಟಿ ಮುಖ್ಯ ರಸ್ತೇಕ್ಕ ಕಡಕೊಳ ಓಣಿ ರಸ್ತೆ ಕೂಡುವ ಕ್ರಾಸಿಗೆ, ಗೌಡರ ರುದ್ರವ್ವಕ್ಕರು (ಅಥವಾ ರುದ್ರಕ್ಕವ್ವರು) ಟೊಂಕದ ಮ್ಯಾಲ ಕೈ ಇಟಗೊಂಡು, ಇತ್ತಲಾಗ ಗಾಂಧಿಚೌಕದ ಕಡೆ ನೋಡಕೋತ ನಿಂತಿರತಿದ್ದರು. ರುದ್ರವ್ವಕ್ಕ (ಅಥವಾ ರುದ್ರಕ್ಕವ್ವ)ರ ಮಾರಿ ಮ್ಯಾಲ ಕಿತ್ತೂರ ಚೆನ್ನಮ್ಮಂದೋ ಅಥವಾ ಬೆಳವಡಿ ಮಲ್ಲಮ್ಮಂದೋ ಆದ ಆಢ್ಯ ಕಳೆ ಇರತಿತ್ತು. ಆಕೆಗೆ ಊರವರೆಲ್ಲ ''ಗ್ರಾಮದೇವತೆ'' ಅಂತಿದ್ದರು.

ಇಷ್ಟೊತ್ತಿಗೆ ಗೌಡರ ಆಳು ಚಂಬಸ್ಸೂ ಬೆಳಗ್ಗೆ ಮೇಯಿಸಲಿಕ್ಕೆಂದು ಮೈಲಾರ ಗುಡ್ಡಕ್ಕೆ ಹೋದ ದನಗಳನ್ನು ಹೊಡಕೊಂಡು ಮರಳಿ ಮನೆಗೆ ಬರುತ್ತಿದ್ದ. ನೊಗಕ್ಕೆ ಕಟ್ಟೋ ಎರಡೆತ್ತು, ನಾಲ್ಕು ಹಿಂಡೋ ಯಮ್ಮೀ, ಒಂದೆರಡು ಉಲಕೋಚಿ ಮಣಕ ಇಷ್ಟೂದನ ಇಡೀ ರಸ್ತೇದ ತುಂಬ ಒಂದನೊಂದು ಅಟ್ಟಿಸಿಕೊಂಡು, ಆರ್ಭಟಿಸುತ್ತ, 'ಅಂಬಾ' ಎಂದು ಉತ್ಸಾಹದಿಂದ ಅರಚುತ್ತ ಝುಗ್‌ಝುಗ್ ಉಚ್ಚೀ ಹೊಯ್ಕೋತ ಮನೆ ಸೇರುವ ಸಂತೋಷದಲ್ಲಿ ಓಡೋಡಿ ಬರುತ್ತಿದ್ದವು. ದನಗೋಳ ಹಿಂದಿನಿಂದ ಚಂಬಸ್ಸೂ ಕೈಯಾಗಿನ ಬಾರಕೋಲು ನೆಲಕ್ಕೆ ಝುಳಪಿಸುತ್ತ ''ಹೇ..ಹೇ...ಈರೀ...ಬಸಣ್ಯಾ. ನಿನಾಪನ'' ಎನ್ನುತ್ತ ಪಶುಭಾಷೆಯಲ್ಲಿ ಅವುಗಳೊಡನೆ ಸರಸವಾಡುತ್ತ ಚಿತ್ರ ವಿಚಿತ್ರ ಕೇಕೆಯ ಧ್ವನಿ ಹೊರಡಿಸುತ್ತ ತಾನೂ ದನಗಳೊಳಗೊಂದು ದನವಾಗಿ ಹೊಯ್ದಾಡಿಕೋತ ಬರತಿದ್ದ.

ಅಷ್ಟೊತ್ತಿಗೆ ಅವ ಊರ ಹೊರಗಿನ ಲಂಬಾಣಿ ತಾಂಡೇ ಹೊಕ್ಕು ಒಂದೆರಡು ನೌಟಾಕ ಹಾಕಿಕೊಂಡೇ ಬಂದಿರುತ್ತಿದ್ದ. ಹಿಂಗಾಗಿ ಅವನ ಆ ಉನ್ಮತ್ತ ಕೇಕೆಗಳು ಆ ಚತುಷ್ಪಾದಿಗಳ ಹೇಷಾರವದಲ್ಲಿ ಸಮ್ಮಿಳಿತವಾಗಿ ಚಂಬಸ್ಸೂ ದನಾನ ಹೊಡಕೊಂಡು ಬರತಿದ್ದನೋ, ಏನು ದನಾನs ಚಂಬಸ್ಸೂನ ಎಳಕೊಂಡು ಬರತಿದ್ದವೋ ಹೇಳೋದು ಕಠಿಣ.

ಪ್ರತಿನಿತ್ಯ ಗಂಗಕ್ಕನ ವಠಾರದ ಎದುರು ಓಡುವಾಗ ಒಂದು ಅಲಿಖಿತ ನಿಯಮವೇ ಎಂಬಂತೆ ಒಂದಲ್ಲೊಂದು ದನ ಯಥೇಚ್ಛ ಶಗಣಿ ಹಾಕುತಿತ್ತು. ಈ ರೀತಿ ಸಮೃದ್ಧ ಶಗಣಿಯನ್ನು ಕಂಡೊಡನೆ, ಇನ್ನೂ ವಠಾರದ ಕಟ್ಟೆಗೆ ಕುಳಿತಿರುತ್ತಿದ್ದ ರಂಗಕ್ಕ ಯಮುನಕ್ಕ ಅತ್ಯಂತ ಸಂಭ್ರಮದಿಂದ ಸಂತೋಷ ಉತ್ಸಾಹಗಳಿಂದ ಹಿಂದಿನ ಕಚ್ಚೆ ಸರಿಪಡಿಸಿಕೊಳ್ಳುತ್ತ ಟಣ್ಣಂತ ಬೀದಿಗೆ ಜಿಗಿದು ಆ ಶಗಣಿಯನ್ನೆಲ್ಲಾ ಬಾಚಿ ಬಾಚಿ ಬಳಕೊಂಡು ''ನಾಳಿನ ಗ್ವಾಮದ ಚಿಂತಿ ತಪ್ಪಿತರೆವ್ವ'' ಎನುತ್ತ ವಠಾರದೊಳಗೆ ನಡೆಯುತ್ತಿದ್ದರು.

ಇತ್ತ ದನಗಳೆಲ್ಲ ಓಡೋಡಿ ಬಂದು ರುದ್ರವ್ವಕ್ಕರ ಮುಂದ ಕುಣಿದು ಕುಪ್ಪಳಿಸಿ ಅವರಿಗೆ ಕೊರಳು ಕೊಟ್ಟು ಗಂಗೆದೊಗಲು ನೇವರಿಸಿಕೊಂಡು, ಅವರ ಜತೆ ಮನೆಗೆ ಮರಳುತ್ತಿದ್ದವು.

ಇಷ್ಟಾದರ ರಾತ್ರಿ ನಾಟಕದ ಮೊದಲನೇ ಬೆಲ್ ಆಧಂಗ.

ಈಗ ಸಂಜೆ, ಕೊನೆಯ ಹಂತದ ಮಕಮಕ ಮೂರು ಸಂಜೆಗೆ ಜಾರಿರುತ್ತಿತ್ತು. ದಿನದ ಈ ಇಳಿಮುಖಕ್ಕೆ ಏನೋ ಒಂದು ರಹಸ್ಯಮಯ ಮ್ಲಾನತೆಯೂ ಜತೆಜತೆಗೇ ಒಂದು ನಿಗೂಢ eerie ಹೆದರಿಕೆಯೂ ಅಂಟಿಕೊಂಡಿರುತ್ತಿತ್ತು. ಆವಾಗ ಮನೆಯೊಳಗಿನ ಹೆಣ್ಣು ಮಕ್ಕಳು ಈ ಹೆದರಿಕೆಯಿಂದ ತಪ್ಪಿಸಿಕೊಳ್ಳಲು ಕೆಟ್ಟ ಕೆಟ್ಟ ಧನೀಲೇ ದೇವರನಾಮ ಹಾಡಲಿಕ್ಕೆ ಸುರು ಮಾಡತಿದ್ದರು. ಆವಾಗ ಒಂದು ಹೊಸ ಹೆದರಿಕೆ ಹುಟ್ಟಿಕೊಂಡು ಈ ಹಳೇ ಹೆದರಿಕೆಯನ್ನ ಓಡಿಸುತ್ತಿತ್ತು!

ಅಷ್ಟೊತ್ತಿಗೆ ದೂರದೂರ ವಾಯು ವಿಹಾರಕ್ಕೋ, 'ಮಿತ್ರಸಮಾಜ'ದಂತಹ ಕ್ಲಬ್‌ಗಳಿಗೋ, ಪ್ರವಚನ ಪುರಾಣಗಳಿಗೋ, ಇನ್ನಾವದಕ್ಕೋ ಹೊರಗೆ ಹೋದ ಮಂದಿಯೆಲ್ಲಾ ಲಗುಬಗೆಯಿಂದ ಮನೆ ಸೇರಿಕೊಳ್ಳುತ್ತಿದ್ದರು. ನಮ್ಮ ಮನೆಯ ಹಿತ್ತಲಿನ ವಿಶಾಲ ಅರಳೀಮರದ ಹಕ್ಕಿಗಳೆಲ್ಲ ಮರಳಿ ತಮ್ಮ ತಮ್ಮ ಗೂಡು ಸೇರಿ 'ಕುಜುಖುಜು' ಮಾಡಲಿಕ್ಕೆ ಹತ್ತಿರತಿದ್ದವು. ಗಾಂಧಿ ಚೌಕದ ಯಾವದೋ ಒಂದು ಬೀಡಿ ಅಂಗಡಿಗೆ ಮುಂಬಯಿಯಿಂದ ಮಟಕಾದ್ದ ನಂಬರ ಬಂದಿರತಿತ್ತು. ಕೂಡಲೇ ಸಾಯಕಲ್ ಸವಾರರು ನಾಲ್ಕೂ ದಿಕ್ಕಿಗೆ ರಭಸದಿಂದ ಸಾಯಿಕಲ್ ಓಡಿಸುತ್ತ ''ಎಂಟು ಬಂದೈತಿ...ಎಂಟು....ಆಠ'' ಎಂದು ಕಂಡಕಂಡವರಿಗೆ ಉಸುರುತ್ತಾ ಈ ಸುವಾರ್ತೆಯನ್ನು ಮುಟ್ಟಿಸುತ್ತಿದ್ದರು.

ಇದು ಸೆಕೆಂಡ್ ಬೆಲ್.

ರಾತ್ರಿ ಎಂಟು ಎಂಟೂವರಿ ಅಂಬೋದರಾಗ ಧಾರವಾಡ ಪ್ಯಾಟಿ ಖಾಲಿ. ನಿರ್ಜನ. ಉಳಿದದ್ದೆಲ್ಲ ಕತ್ತಲೆ. ಕುರುಡುಗತ್ತಲೆ. ಆವಾಗೂ ಈಗಿನ್ಹಂಗ ಲೈಟ ಕಂಬ ಇರತಿದ್ದವು. ಲೈಟ ಇರತಿರಲಿಲ್ಲ. ಕರೆಕ್ಟ ಆಗಿ ಒಂಭತ್ತಗಂಟೇಕ್ಕ ಇಲೆಕ್ಟ್ರಿಕ್ ಕಂಪನಿಯವರು ಇಡೀ ಧಾರವಾಡ

ಬೆಚ್ಚಿ ನಡುಗಿ ಹೋಗೋಹಂಗ ''ಭೌಂವ್'' ಅಂತ ಒಂದು ಸೈರನ್ ಹೊಡೀತಿದ್ದರು. ಹೀಂಗ ಈ ''ಭೋಂಗಾ'' ಹೊಡೆಯುತ್ತಲೇ ಕಾಟನ್‌ಪೇಟೆ ಯಾಪಾರಸ್ಥರೆಲ್ಲ ''ಮನೀಗೆ ಹೋಗೋ ಟೇಮಾತು ನಡಿ'' ಅನಕೋತ, ಗಲ್ಲೇದ ಮುಂದ ತಾಸಗಟ್ಟಲೆ ಕೂತವರು ಮೊಣಕಾಲು ಹಿಡಕೊಂಡು ಪ್ರಯಾಸಪಟ್ಟು ಏಳುತ್ತ, ಅಂಗಡಿ ಕಾಯೋ ಹುಡುಗನಿಗೆ ''ಕದಾಹಾಕಪಾ'' ಎಂದು ಹೇಳಿ, ತಾವು ಅಂಗಡಿ ಹಿಂದ ಅವತ್ತಿನ ಕಡೀ ಒಂದಕ್ಕ ಹೋಗಿ ಕಾಲುಮಡಿದು , ಧ್ವಾತರ ಕಚ್ಚೀ ಎಳೆದು ಸರಿಪಡಿಸಿಕೊಳ್ಳುತ್ತ, ಕೋಟಿನ ಕಾಲರ್ ಜಗ್ಗಿ , ಟೊಪಿಗೀ ಒಂದೀಟss ಸೊಟ್ಟಮಾಡಿಕೊಂಡು, ಹೆಗಲಿಗೆ ಛತ್ರಿ ಜೋತುಬಿಟ್ಟುಕೊಂಡು ''ಈ ಸರೆ ಹತ್ತೀ ಆವಕ ಜಾಸ್ತಿ ಆಗೇತಿ. ಯಾಕೋ ಗದಗದ ಹುಂಡಿ ದೌಡದೌಡ ಫೇಡ ಆಗವಲ್ಲವು. ಕಾಂಜಿ ದೇವರಜಿ ಮಾರವಾಡಿ ಇವನಾಪನ ಏನೋ ಮಸಲತ್ತ ನಡಿಸ್ಯಾನ'' ಎಂದೆಲ್ಲ ಹರಟುತ್ತ ಮನೆಯ ಕಡೆ ಹೆಜ್ಜೆ ಬೆಳೆಸುತ್ತಿದ್ದರು.

ಇಷ್ಟಾದರ ರಾತ್ರಿಯ ಅಧಿಕೃತ ಘೋಷಣೆ ಆದಂತೆ.

ಸುಮಾರು ಒಂಭತ್ತುವರಿಗೆ ಚಿಕಮಠ ಶಿವಶಂಕರ ಮತ್ತ ಸಂಭಾಜಿ ಜಾಧವ ಪುಸ್ತಕ ಹಿಡಕೊಂಡು ನಮ್ಮ ಮನೀಗೆ ಅಟ್ಟದ ಮ್ಯಾಲ ಜಾಯಿಂಟ್ ಸ್ಟಡೀಗೆ ಬರತಿದ್ದರು. ಆ ಸರೆ ನಾವು ಮೂರೂ ಮಂದಿ ಬಿ.ಎ.ಕ್ಕ ಕೂತಿದ್ದೆವಿ. ನಾನು ಲಗುಬಗೆಯಿಂದ ಊಟ ಮುಗಿಸಿ ಅಟ್ಟದ ಮ್ಯಾಲ ಅವರನ್ನ ಕೂಡಿಕೋತಿದ್ದೆ. ನಮ್ಮ ಅವ್ವ ಪಾಪ, ಒಂದು ಥರ್ಮಾಸ್ ತುಂಬ ಚಹಾ ತುಂಬಿ ''ಭೋಲೋತನ್ಯಾಗ ಓದಿಕೊಳ್ಳರ್‍ಯಾ'' ಎಂದು ಹೇಳಿ ಕಳಿಸುತ್ತಿದ್ದಳು. ನಮ್ಮ ಪೂಜ್ಯ ಪಿತಾಶ್ರೀಯವರು ಕೆಳಗಿನಿಂದನss ''ಚಹಾ ಕುಡಿದು ಮಲಕೊಳ್ಳರೋ'' ಎಂದು ಆಶೀರ್ವದಿಸುತ್ತಿದ್ದರು.

ಮೇಲೆ ನಾವು ಮೂರೂ ಮಂದಿ ದೊಡ್ಡದೊಂದು ಕಂದೀಲಿನ ಸುತ್ತ ಮುಕರಿ, ಹಸಿರು ಕೆಂಪು ಮಾವಿನಕಾಯಿಗಳ ಚಿತ್ರಗಳಿದ್ದ ಒಂದೊಂದು ಸೊಲ್ಲಾಪುರ ಚಾದರ ಮೈತುಂಬ ಸುತ್ತಿಕೊಂಡು ಕೈಯಾಗ ಇಕನಾಮಿಕ್ಸದ್ದೋ, ಹಿಸ್ಟರೀದ್ದೋ ಒಂದೊಂದು ಪುಸ್ತಕ ಹಿಡಕೊಂಡು ತೂಕಡಿಸಲಿಕ್ಕೆ ಸುರುಮಾಡತಿದ್ದವಿ. ಇನೇನು ಯಾರಾದರೊಬ್ಬರು ತೂಕಡಿಸಿ ತೂಕಡಿಸಿ ಕಂದೀಲದ ಮ್ಯಾಲ ಬೀಳಬೇಕು, ಅಷ್ಟರಾಗ ಹೊರಗ ರಸ್ತೇದ ಮ್ಯಾಲ ಯಾವದೋ ಒಂದು ಲಗ್ನದ ಮೆರವಣಿಗೆ, ನಾಲ್ಕಾರು ದೊಡ್ಡ ದೊಡ್ಡ ಗ್ಯಾಸ್ ಹಿಡಕೊಂಡು ಆಕಾಶಕ್ಕ ಚುರಮುರಿ ತೂರಿಕೋತ ಮೆಲ್ಲನೆ ಸಾಗಿ ಬರುತ್ತಿತ್ತು. ಕೆಂಪು ಹಳದಿ ಚಣ್ಣಾ ತೊಟ್ಟ ಬ್ಯಾಂಡಿನವರು ಆ ಕಾಲದ ಜನಪ್ರಿಯ ಸಿನೇಮಾ ಹಾಡು ''ಓ ದೂರ ...ಜಾನೇವಾಲೆ..ಎ..ಎ..ಎ..ವಾದಾನ ಭೂಲಜಾನಾ....ಆ..ಆ..ಆ'' ಎಂದು ವಿಕಾರವಾಗಿ ಬ್ಯಾಂಡು ಬಾರಿಸುತ್ತ ನಡೆದಿರುತ್ತಿದ್ದರು. ಒಂದು ಟಾಂಗಾದಾಗ ವಧೂವರರು ತಲೆತುಂಬ ಒಂದೊಂದು ಬಾಶಿಂಗ ಕಟ್ಟಿಕೊಂಡು ತಮಗ ಒಬ್ಬರೊಬ್ಬರಿಗೆ ಸಂಭಂದನss ಇಲ್ಲಧವರಂಗ ಬ್ಯಾಸತ್ತು ಬೆವರು ಸುರಿಸಿಕೋತ ಮಾರೀ ತಿರುಬಿಕೊಂಡು ಕೂತಿರತಿದ್ದರು. ಆ ದಿನ ಕಾಲಕ್ಕ ''ಸುಮಾ ವೆಡ್ಡಸ ಶ್ರೀಕಾಂತ '' ಅಥವಾ ''ನಿರ್ಮಲಾ ವೆಡ್ಡಸ ನಾಗೇಗೌಡ'' ಇಂತಹದ್ದೇನೂ ಇರತಿದ್ದಿಲ್ಲ. ಏನಿದ್ದರೂ ''ಟಾಂಗಾ ಬಾಶಿಂಗಾ...

ಬಾಶಿಂಗಾ ಟಾಂಗ.'' ನಾವು ನಮ್ಮ ಅಟ್ಟದ ಮೇಲಿನ ಇಕ್ಕಟ್ಟಾದ ಗ್ಯಾಲರಿಯಲ್ಲಿ ನಿಂತು ಮೆರವಣಿಗೆಯನ್ನು ನೋಡಿ ನಮ್ಮ ನಮ್ಮ ಮದುವೆಗಳ ''ಓ ದೂರ ಜಾನೆವಾಲೆ''ಗಳ ಕನಸುಕಾಣುತ್ತ ಮರಳಿ ಬಂದು ಸುತ್ತ ಕಂದೀಲದ ಸುತ್ತ ಜಾಯಿಂಟ ತೂಕಡಿಕೆಗೆ ತೊಡಗುತ್ತಿದ್ದೆವು.

ಹೊರಗೆ ಕತ್ತಲೆ ಹೆಚ್ಚು ಹೆಚ್ಚು ನೀರವವಾಗುತ್ತ, ದಟ್ಟವಾಗುತ್ತ, ರಹಸ್ಯಮಯವಾಗುತ್ತ ನಡೆದಿರುತ್ತಿತ್ತು. ಧಾರವಾಡದಂತಹ ಅಂದಿನ ಸಣ್ಣ ಊರುಗಳ ದಟ್ಟ ಕತ್ತಲೆಗೂ, ಪ್ರಖರ ಬೆಳದಿಂಗಳಿಗೂ ಏನೋ ಒಂದು ವಿಶಿಷ್ಟ ವ್ಯಕ್ತಿತ್ವವಿರುತ್ತಿತ್ತು. ಬೆಟ್ಟು ಚುಚ್ಚಬಲ್ಲ ಅಮಾಶಿಯ ದಟ್ಟಕತ್ತಲೆ ಹಾಗೂ ಹುಣ್ಣಿವೆಯ ತಿಂಗಳು ಊರಮೇಲೆಲ್ಲಾ ಏನೋ ಒಂದು ಮಂತ್ರದಂಡ ತಿರುವಿ ಒಂದು ಹೊಸ ಯಕ್ಷಿಣೀ ಲೋಕವನ್ನೇ ಸೃಷ್ಟಿಸಿರುತ್ತಿದ್ದವು. ಕತ್ತಲು ತನ್ನ ಗರ್ಭದಲ್ಲಿ ನೂರಾರು ಕತೆಗಳನ್ನು ಹೆಣೆಯುತ್ತ, ನಮ್ಮನ್ನು ಹೆದರಿಸುತ್ತ ಕೆಣಕುತ್ತ, ಸವಾಲೆಸೆಯುತ್ತ, ಮಕ್ಕಳಂತೆ ಮೈಮುಖಗಳನು ತಡವುತ್ತ, ''ಏನಪಾ ಶೀನೂ ಓದು ಹೆಂಗ ನಡೆದಽದ'' ಎಂದು ಮಾತಿಗೆಳೆಯುತ್ತಿತ್ತು. ಇನ್ನು ಬೆಳದಿಂಗಳು. ಧಾರವಾಡದ ಬೆಳದಿಂಗಳಿನಂತಹ ಹುಚ್ಚು ಹಿಡಿಸುವ ಬೆಳದಿಂಗಳನ್ನ ನಾ ಆಮ್ಯಾಲ ಎಲ್ಲೂ ಕಂಡಿಲ್ಲ. ಈ ದರಿದ್ರ ಶಾಪಗ್ರಸ್ತ ಮುಂಬಯಿ, ಬೆಂಗಳೂರುಗಳಂತಹ ಮಹಾನಗರಗಳಲ್ಲಿ ''ಗೌ'' ಎನ್ನುವ ಕತ್ತಲೆಯೂ ಇಲ್ಲ, ಬೆಳದಿಂಗಳಂತೂ ಇಲ್ಲವೇ ಇಲ್ಲ.

ನಾನು ಪುಣ್ಯವಂತ. ಧಾರವಾಡದ ಹುಣ್ಣಿವೆಯ ಕೆಲಗೇರಿ ಕೆರೆಯ ದಂಡೆಗೆ ಕೂತು ಕನಸು ಕಾಣುತ್ತ ''ಚಂದ್ರರೇ ಚಂದ್ರಮರ'' ಹಾಡು ಹಾಡಿದ್ದೇನೆ. ಊರಾಚೆಗಿನ ನಮ್ಮ ಮಾವಿನ ತೋಪಿನಲ್ಲಿ ಪ್ರಖರ ಬೆಳದಿಂಗಳ ರಾತ್ರಿ ಶಿವ ಪಾರ್ವತಿ ರಿಲ್ಯಾಕ್ಸ ಆಗಿ ಸಂತಸದಿಂದ ಹರಟೆ ಹೊಡೆಯುತ್ತ ಅಡ್ಡಾಡಿದ್ದನ್ನು ಕಂಡಿದ್ದೇನೆ. ಮದಗ ಮಾಸೂರಿನ ಬೆಳದಿಂಗಳ ತೆರೆಯಲ್ಲಿ ರಾಧಾಕೃಷ್ಣರು ಗೋಪಿಕೆಯರೊಡನೆ ರಾಸ ರಚಿಸಿದ್ದನ್ನು ಕಂಡಿದ್ದೇನೆ. ಕಾಲೇಜು ಗ್ಯಾದರಿಂಗುಗಳ ನಾಟಕದ ತಾಲೀಮು ಮುಗಿಸಿ, ಯಾರಯಾರದೋ ಜತೆಗೆ ''ಸ್ವೀಟ ನಥಿಂಗ್ಸ'' ಮಾತಾಡುತ್ತ ಕಲೆಕ್ಟರ ಕಚೇರಿಯ ಹುಣ್ಣಿಮೆಯ ದಿಬ್ಬ ಏರಿ ಇಳಿದು, ಸಪ್ತಾಪುರದ ಶ್ರೇಷ್ಠ ಅಮಾಶೀ ಕತ್ತಲೆಯನ್ನು ಸೀಳಿಕೊಂಡು ಅವರವರನ್ನು ಅವರವರ ಮನೆಗಳಿಗೆ ಸುರಕ್ಷಿತವಾಗಿ ಮುಟ್ಟಿಸಿ ಮರುದಿನ ಅವರಿಂದಲೇ ''ಧಡ್ಡ; ಅಷ್ಟಯಾಕ ಸುರಕ್ಷಿತ ಮುಟ್ಟಿಸಿದಿ?'' ಎಂದು ಛೀಮಾರಿ ಹಾಕಿಸಿಕೊಂಡಿದ್ದೇನೆ.

ಅಂದಿನ ನಮ್ಮ ಜಾಯಿಂಟ ಸ್ಟಡಿಗಳ ರಾತ್ರಿಗಳಲ್ಲಿ ತೂಕಡಿಕೆ ತಪ್ಪಿಸಲು ನಾನು ನಮ್ಮ ಇಕ್ಕಟ್ಟಾದ ಗ್ಯಾಲರಿಯಲ್ಲಿ ಬಂದು ನಿಂತಿರುತ್ತಿದ್ದೆ. ಆಗೆಲ್ಲ ನಮ್ಮ ಮನೆಯಿಂದ ಅನತಿ ದೂರದ ಮಶೀದಿಯ ಗುಂಬಜದ ಆಚೆಯ ಈಚಲಮರದ ಹಿಂದಿನ ಚವತಿದೋ ಅಷ್ಟಮೀದೋ ಚಂದಪ್ಪನಽಽ ಜೋಕಾಲಿಮಾಡಿಕೊಂಡು , ಅರಬ್ಬೀ ಮರಳಿನಿಂದ ಓರ್ವ ದೊಗಲೆ ಪಾಯಿರ್ಝಾಮದ ಅವಕುಂಠನವತಿಯಾದ ಯವನ ಸುಂದರಿ ಸಾಕಿಯಾಗಿ ಬಂದು ನನ್ನ ಬಟ್ಟಲಿಗೆ ಮದ್ಯ ಸುರಿಯುತ್ತಿದ್ದಳು. ಇನಾವುದೋ ಒಬ್ಬ ಕಾಲೇಜು ಚೆಲುವೆ ನನ್ನ ಪಕ್ಕದಲ್ಲಿ ''ದೌ ಬೈ ಮೈ ಸೈಡ್'' ಆಗಿರುತ್ತಿದ್ದಳು.

ಕೈಯ್ಯಲ್ಲಿ ಕೆ.ಕೆ. ಡಿವೆಟ್ಟನ ಇಕನಾಮಿಕ್ಸ ಗೈಡ ಇರತ್ತಿತ್ತು

ಇತ್ತಲಾಗ ಒಳಗ ಶಿವಶಂಕರ ಮತ್ತು ಜಾಧವ ಕಂದೀಲು ಪಕ್ಕಕ್ಕೆ ಸರಿಸಿ ಇಟ್ಟು ಗೊರಕೆ ಹೊಡೆಯುತ್ತಿದ್ದರು. ಇಷ್ಟೊತ್ತಿಗೆ ಅಕ್ಕಪಕ್ಕದ ಏಳೆಂಟು ಹೊಡೆಯುವ ಗೋಡೆ ಗಡಿಯಾರಗಳು ಒಂದರ ನಂತರ ಒಂದರಂತೆ ಮಧ್ಯರಾತ್ರಿಯ ಹನ್ನೆರಡು ಹೊಡೀಲಿಕ್ಕೆ ಸುರು ಮಾಡತಿದ್ದವು. ಆ ನಿಶ್ಯಬ್ದ ನೀರವ ರಾತ್ರಿಗಳಲ್ಲಿ ಮೊದಲನೇ ಗಡಿಯಾರ ಹೊಡಕೊಳ್ಳಲಿಕ್ಕೆ ಸುರು ಮಾಡಿ ಕೊನೆಯ ಗಡಿಯಾರ ಹೊಡೆಯೋದು ಮುಗಿಸುವ ಹೊತ್ತಿಗೆ ಬೆಳಗಾಗಿರುತ್ತಿತ್ತು.

ಈ ಘಂಟಾನಾದಕ್ಕೆ ಹೆದರಿ ಕನ್‌ಫ್ಯೂಸ ಆಗಿ ಇತ್ತಲಾಗ ಕಾಮನ ಕಟ್ಟೆಯಿಂದ ಹತ್ತಿಪ್ಪತ್ತು ನಾಯಿಗಳು ಕಂಗಾಲಾಗಿ ಲಬೋ ಲಬೋ ಎಂದು ಬೊಗಳುತ್ತ ಓಡಿ ಓಡಿ, ಅತ್ತಲಾಗ ಗಾಂಧಿ ಚೌಕಕ್ಕ ಓಡಿ, ಅಲ್ಲಿಯೂ ಈ ಕಂಟಿನ್ಯೂಡ ಘಂಟಾರಾಕ್ಷಸಕ್ಕ ಇನ್ನಷ್ಟ ಹೆದರಿ ತಿರುಗಿ ಕಾಮನ ಕಟ್ಟೆಗೇ ಲಬೋ ಲಬೋ ಓಡತಿದ್ದವು.

ಘಂಟಾನಾದಕ್ಕೂ ನಾಯಿಗಳ ಕಚ್ಚಾಟಕ್ಕೂ ನಿದ್ದೆಗೆಟ್ಟು ಹಿರಿಯರು ಲೊಚಗುಟ್ಟುತ್ತ ಮಗ್ಗಲು ಬದಲಿಸುತ್ತಿದ್ದರು. ಒಂದಿಬ್ಬರು ಆಕಳಿಸುತ್ತ ಎದ್ದು ಬೀದಿಗೆ ಬಂದು ಎದುರು ಮನೆಯವರ ಗೋಡೆಗೆ ಒಂದಕ್ಕೆ ಕೂರುತ್ತಿದ್ದರು. ನಾಕಾರು ಕೈಕೂಸುಗಳು ಕಟ್ಟಿರುವೆ ಕಚ್ಚಿದಂತೆ ಕಿಟಾರನೆ ಕಿರುಚಿ ರಚ್ಚೆ ಹಿಡಿಯುತ್ತಿದ್ದವು. ಆಗೆಲ್ಲ ಈ ಮಕ್ಕಳ ಎಳೆಯ ತಾಯಂದಿರು ಅಕ್ಕಸತನದಲ್ಲಿ ತಮ್ಮ ಕುಡಿಗಳ ಬೆನ್ನಮೇಲೆ ರಪರಪಾ ಇಕ್ಕರಿಸಿಕೋತ ''ಸುಮ್ಮನಃ ಬೀಳಃ ನಿನ ಸುಡ್ಲಿ ಒಂದು ಮಿನೀಟ ಏನು ನಿದ್ದಿ ಮಾಡಲಿಕ್ಕೆ ಬಿಡೂದಿಲ್ಲ. ಅತ್ತಲಾಗ ಅವರೂ ಇತ್ತಲಾಗ ನೀನು'' ಎಂದು ನಿದ್ದೆಗಣ್ಣಲ್ಲೇ ಆಕ್ರೋಶಿಸುತ್ತಿದ್ದರು.

ಮತ್ತ ಮತ್ತೆ ನಿದ್ದೆ. ಮತ್ತೆ ನೀರವ ರಾತ್ರಿ. ''ಗೌ'' ಎನುವ ಕತ್ತಲೆ. ಇಂತಹ ರಾತ್ರಿಗೆ ಮಾತ್ರ ಇರಬಹುದಾದ ಏನೋ ತಂಪು ತಂಪು ಮೃಣ್ಮಯ ಗಂಧ. ತೂಕಡಿಕೆ....... ಇಂಟರಾಕ್ಷನ್ ಆಫ್ ಡಿಮಾಂಡ್ ಅಂಡ್ ಸಪ್ಲೈ ... ಫರ್‌ಫೆಕ್ಟ್ ಮಾರ್ಕೆಟ್ ... ಜಾಧವನ ಕೈಯಾಗಿನ ''ಆಥೆಲೋ'' ಜಾರಿ ಬಿದ್ದಿರತಾನ..... ''ಹ್ಯಾಡ್ ಯು ಪ್ರೇಯ್ಡ್ ಟುನೈಟ್ ಡೆಸ್‌ಡೊಮೆನಾ''...... ಶಿವಶಂಕರ ಬಡಬಡಿಸತಿರತಾನ. ಅಷ್ಟರಾಗ ಕೆಳಗ ರಸ್ತೇದ ಮ್ಯಾಲ ರೀಗಲ್ ಟಾಕೀಸಿನ್ಯಾಗ ''ಆವಾರಾ'' ಪಿಚ್ಚರ್ ನೋಡಿ ತಮ್ಮ ಮನೆಗೆ ಕಾಮನ ಕಟ್ಟೆಕಡೆ ಹೊರಟವರದೊಂದು ಗುಂಪು ಗಟ್ಟಿಯಾಗಿ ನಕ್ಕೋತ ಕೆಲಕೋತ ಹೊರಟಿರತದ. ಗುಂಪಿನ ಒಬ್ಬಾಂವ ಖಳನಾಯಕನ ಆ್ಯಕ್ಟಿಂಗ ಮಾಡಿಕೋತ ''ಶಾಬಾಸ ಬೇಟಾ.... ಗುರುಕಾ ನಾಮ ರೋಶನ್ ಕರೇಗಾ'' ಎಂದು ಡಾಯಿಲಾಗ ಹೊಡೀತಿರತಾನ. ಒಬ್ಬಾಕಿ ಥೇಟ ನರಗೀಸನ್ಹಂಗ ''ಮೈ ಉನಸೇ ಪ್ಯಾರ ಕರಲೂಂಗಿ'' ಅಂತ ಹಾಡತಿರತಾಳ. ಈ ''ಆವಾರಾ'' ಗುಂಪು ದೂರ ದೂರ ಸಾಗುತ್ತಿದ್ದಂತೆಯೇ ಮತ್ತೆ ಮಂಪರು.. ನಿದ್ದೆ.. ತೂಕಡಿಕೆ.

ಮತ್ತೆ ಕತ್ತಲು ನೀರವತೆ. ಎಲ್ಲೋ ಏನೋ ಸರಸರ ಸದ್ದು.... ಹಗೂರಾಗಿ ಕಟ್...ಟಪ್....ಠಳ್ ಎನ್ನುವ ರಾತ್ರಿ ಸಪ್ಪಳ...... ಮೌನ... ಭೀತಶಾಂತಿ.... ಯಾರೋ

ನಿದ್ದೆಯಲ್ಲಿ ಮಗ್ಗಲು ಬದಲಿಸುತ್ತ ಕನವರಿಸಿದ ಅಸ್ಪಷ್ಟ ದನಿ. ಜೀರುಂಡೆಗಳ ಜೀಗುಟ್ಟುವಿಕೆ. ಒಂದು ಒಂಟಿ ನಾಯಿಯ ''ಗೋಳೋ'' ಎಂಬ ಅಳು..... ಯಾರೋ ಗಂಟೆ ಬಾರಿಸುತ್ತ ಬೈಸಿಕಲ್ ಮ್ಯಾಲೆ ಹೋದ ಸದ್ದು. ಇತ್ತ ಎಡಗಡೆಯ ನಾಲ್ಕನೆಯ ಮನೆಯ ಪಾತರದ ಚಂದ್ರಾಸಾನಿಯ ಮನೆಯ ಬಾಗಲಾ ತಕ್ಕೊಂಡು ಯಾರೋ ಹೊರಗೆ ಬಂದು ಕಳ್ಳದನಿಯಲ್ಲಿ ''ಬಾಗಲಾ ಹಾಕ್ಕೋ... ನಾಳೆ ಬರತೀನಿ'' ಅಂತ ಹೇಳಿ ಲಗುಬಗೆಯಿಂದ ಕತ್ತಲಲ್ಲಿ ಕರಗಿ ಹೋಗುತ್ತಾರೆ. ಬಹುಶಃ ದೇಶಪಾಂಡೆ ದತ್ತಣ್ಣ ಇರಬೇಕು.

ಮತ್ತೆ ಎಷ್ಟೋ ಹೊತ್ತು ಕತ್ತಲು ಜೀರುಂಡೆಗಳ ಜೀಕಾರ. ಕಡುರಾತ್ರಿ ಎರಡರ ಸುಮಾರಿಗೆ ವಿಜಯ ಟಾಕೀಸಿನ್ಯಾಗ ಪ್ರೊಜೆಕ್ಟರ ಆಪರೇಟರ ಆಗಿದ್ದ ಅರೆಹೊಟ್ಟೆ ಅಶಕ್ತ ಗೋಪಾಲ ಅಷ್ಟೊತ್ತಿಗೆ ಕೊನೆಯ ''ಶೋ'' ಮುಗಿಸಿ ರೀಲು ಸುತ್ತಿಟ್ಟು ಬೀಗದ ಕೈ ಮಾಲಿಕರಿಗೆ ಮುಟ್ಟಿಸಿ ಬಂದು ''ಅವ್ವಾ... ಅವ್ವಾ.... ಏ ಅವ್ವಾ... ಬಾಗಲೀ ತಗೀ'' ಅಂತ ಒದರಲಿಕ್ಕೆ ಸುರು ಮಾಡತಾನ. ಹೀಂಗ ಗೋಪಾಲ ಕನಿಷ್ಟ ಒಂದರ್ಧ ತಾಸು ಗಂಟಲ ಹರಕೊಂಡ ಮ್ಯಾಲ, ಎಲ್ಲೋ ಒಳಗಿನಿಂದ ಧೂರಿಂದ ಗೋಪಾಲನ ಅಜ್ಜಿ ಪಥೇರ ಪಾಂಚಾಲಿ ಮುದಕಿ ಬಂದು ನರಳುತ್ತ ನಡುಗುವ ಕೈಗಳಿಂದ ಬಾಗಲಾ ತೆಗೆದು ''ಎಷ್ಟೊತ್ತೋ?'' ಅಂತಾಳ. ಗೋಪಾಲಗ ತಂದಿ ತಾಯಿ ಯಾರೂ ಇಲ್ಲ. ಈ ಅಜ್ಜಿ ಒಬ್ಬಾಕೀನ. ಅಜ್ಜೀನ ಅವನ ಸಾಕಿ ಸಲಹ್ಯಾಳ. ಮುನಸಿಪಲ್ ಎರಡನೇ ನಂಬರ ಕನ್ನಡ ಗಂಡು ಮಕ್ಕಳ ಸಾಲಿಯೊಳಗ ಗೋಪಾಲ ನನ್ನ ಸಂಗ್ತಿ ನಾಲ್ಕೆತ್ತಾ ಕಲಿತಾನ. ಆವಾಗ ಮಧ್ಯಾನ್ಹದ ಊಟದ ಬಿಡುವಿನಾಗ ನಾನು ಅವರ ಭಯಾನಕ ಬಿರುಕು ಬಿಟ್ಟ ಮಣ್ಣಿನ ಗೋಡೆಯ ಒಂದು ಕೋಣೆಯ ಮನೆಗೆ ಒಮ್ಮೆ ಹೋಗಿದ್ದೆ. ಮುದುಕಿ ಗೋಪಾಲಗ ಎರಡು ತುತ್ತು ತಂಗಳ ಅನಕೊಟ್ಟು ಮ್ಯಾಲ ಒಂದಿಷ್ಟು ಚುರಮುರಿ ಕೊಟ್ಟಳು. ಗೋಪಾಲಗ ಮುಂದ ಕಲಿಯೋದು ಆಗಲಿಲ್ಲ. ಯಾರೋ ಪುಣ್ಯಾತ್ಮರು ಅವನ ತಂದು ವಿಜಯ ಟಾಕೀಸದಾಗ ಹಾಕಿದರು. ಮೊದಮೊದಲ ಅವ ಗೇಟಕೀಪರ ಅಂತ ಇದ್ದಾಂವ. ಪ್ರಮೋಶನ್ ಆಗಿ ಪ್ರೊಜೆಕ್ಟರ್ ಆಗಿದ್ದ. ಆಮ್ಯಾಲ ರಾತ್ರೆಲ್ಲಾ ''ಅವ್ವಾ.... ಅವ್ವಾ'' ಅಂತ ಒದರಿಕೋತ ಪಥೇರ ಪಾಂಚಾಲಿನ ಎಬ್ಬಿಸೋದರಾಗ ಅರ್ಧ ಆಯುಷ್ಯ ಕಳೆದಿದ್ದ. ಗೋಪಾಲ ಮುಂದ ಏನಾದನೋ ಮುದುಕಿ ಯಾವಾಗ ಹೋದಳೋ ದೇವರಿಗೇ ಗೊತ್ತು. ನನಗ ಅವನ ವಿಷಯ ಕಲ್ಪನಾ ಮಾಡಿಕೊಳ್ಳಲಿಕ್ಕೂ ಹೆದರಿಕಿ ಬರತ‌ದ.

ಅತ್ತ ಶಿವಶಂಕರ ಮತ್ತು ಜಾಧವ ಇಬ್ಬರೂ ನನಗ 'ಲೇ ಭಟ್ಟಾ ಮುಂಜಾನೆ ದೌಡ ಎಬ್ಬಸು' ಅಂತ ಹೇಳಿ ಗಾದಿ ಉರುಳಿಸಿ ಮಲಗಿ ಬಿಡತಿದ್ದರು. ನಮ್ಮ ಜಾಯಿಂಟ ಸ್ಟಡಿಯ ಎಷ್ಟೋ ರಾತ್ರಿಗಳನ್ನು ನಾನು ಆ ಅಟ್ಟದ ಗ್ಯಾಲರಿ ಮ್ಯಾಲ ನೀಲೀ ಮುಗಿಲಿನ ಕೆಳಗೆ ಕಳೆದಿದ್ದೇನೆ. ನನಗ ಯಾಕೋ ಹುಣ್ಣಿಮೆಯ ಬೆಳದಿಂಗಳಕಿಂತ ಅಮಾವಾಸ್ಯೆಯ ಕತ್ತಲೆಗಳದೇ ನೆನಪು ಭಾಳ ಉಳದ‌ದ. ಬೆಳದಿಂಗಳು ಬಂದು ಛಂದನ ಮಾಯಾಲೋಕವನು ಸೃಷ್ಟಿಸಿ ಬಿಡತ‌ದ ಅಷ್ಟೆ. ಅದರಲ್ಲಿ ನಿಮ್ಮ ಚಿಂತನ ಮಂಥನಗಳಿಗೆ ಆಸ್ಪದವೇ ಇರುವದಿಲ್ಲ. ಯಲ್ಲಾ ಬೆಳ್ಳಿಜಗತ್ತು. ರಂಭೆ ಮೇನಕೆಯರ ಕಚಗುಳಿ ಲೋಕ.

ಗಿಡ್ಡ ಮರ, ಮುಗಿಲು, ಸರೋವರ, ಬೀದಿ ಖಂಬ, ಚರಂಡಿ, ಕರೇ ಹಂಚಿನ ಮನಿ, ಹಡಪ ಹತ್ತಿದ ಕುಂಟ ನಾಯಿ ಎಲ್ಲಾವನೂ ಸಂತೋಷದಾಗ ಸಂಭ್ರಮದಾಗ ಬೆಳದಿಂಗಳದಾಗ ಅದ್ದಿ ತಗದಿರತಾರ. ಬೆಳದಿಂಗಳದಾಗ ಎಲ್ಲರೂ ಚಿರಯವ್ವನಿಗರು. ಬರೇ ಹಾಡು ಹಾಡಿಕೋತ ಕನಸು ಕಾಣುವದಷ್ಟೇ ನಿಮ್ಮ ಕೆಲಸ! ಮಿಥ್ಯಾ... ಯಲ್ಲಾ ಮಿಥ್ಯಾ!

ಆದರ ಕತ್ತಲು ಹಾಗಲ್ಲ. ಅದು ನಿಮ್ಮೊಳಗಣ ನಿಮ್ಮನ್ನು ನಿಮ್ಮೆದುರು ತೆರೆದು ತೋರಿಸುತ್ತದೆ. ರಿಯಾಲಿಟಿಯ ಬಗ್ಗೆ ನಿಮ್ಮನ್ನು ಜಾಗೃತಗೊಳಿಸುತ್ತದೆ. ಯಾವ ಹುತ್ತದಲ್ಲಿ ಯಾವ ಹಾವೋ ಎನ್ನುತ್ತ ಬದುಕಿನ ಈ ಅನಿಶ್ಚಿತತೆಗಳನೆಲ್ಲ ಹೇಗೆ ಎದುರಿಸಬೇಕೆನ್ನುತ್ತ, ನಿಮ್ಮ ಶಕ್ತಿ, ದೌರ್ಬಲ್ಯ, ಅವಕಾಶ, ಅಪಾಯಗಳ ಸ್ವಾಟ್ ಅನಲಿಸಿಸ್ ಗೆ ತೊಡಗಿಸುತ್ತದೆ. ಮೇಲೆ ಲಕ್ಷ ಲಕ್ಷ ಮಿಣುಕು ನಕ್ಷತ್ರಗಳು. ''ಹೆದರಬ್ಯಾಡಾ ನಾವಿದ್ದೇವೆ. ಬಿ.ಎ. ಆದಿಂದ ಟೈಪಿಂಗು ಶಾರ್ಟಹ್ಯಾಂಡು ಕಲಿ, ನೌಕರಿ ಸಿಕ್ಕಽ ಸಿಗತಽದ'' ಅಂತ ಧೈರ್ಯ ತುಂಬತಿರತಾವ. (ಆವಾಗ ಈ ಅನಿಷ್ಟ ಕಂಪ್ಯೂಟರ ಇರಲಿಲ್ಲ).

''ಈ ಅಗಣಿತ ತಾರಾ ಮಂಡಲದಲ್ಲಿ ''ಅರುಂಧತಿ'' ಎಲ್ಲಿದ್ದಾಳೋ ? ನಾಳೆ ನನ್ನ ಹುಡುಗಿಗೆ ತೋರಿಸಲಿಕ್ಕೆ ಬೇಕಲ್ಲ. ಈಗಽ ನೋಡಿ ಇಟಗೋ ಬೇಕು.! ಸಪ್ತರ್ಷಿಗಳು, ಕರಡಿ, ಚೇಳು, ಎಲ್ಲಾ ಎಲ್ಲಿ ಇದ್ದಿದಾವು'' ಎಂದು ಹುಡುಕತೊಡಗುತ್ತೇನೆ. ಹೀಂಗ ಮರಮಾಸಲೇ ನಿಂತಾಗ ಅತ್ತಲಾಗಿಂದು ಒಂದು ದುರ್ಬಲ ನಕ್ಷತ್ರ ''ಸರ್ರ್ಽಽ'' ಅಂತ ಜಾರಿಕೋತ ಅಲಾಸ್ಕಾದಾಗೋ ಮಡಗಾಸ್ಕರದೊಳಗೋ, ಮುನವಳ್ಳಿಯೊಳಗೋ ಎಲ್ಲೋ ಬೀಳತಽದ. ನನ್ನ ಜಾಗ್ರಫಿ ಜ್ಞಾನ ಅಷ್ಟು ಛೊಲೋ ಇಲ್ಲ.

ನಾ ಹೀಂಗ ಮ್ಯಾಲ ನೋಡಿಕೋತ ನಿಂತಾಗ ಕೆಳಗೆ ರಸ್ತೇದ ಮ್ಯಾಲ ಬೆಳಗಿನ ನಾಲ್ಕರ ಪೂನಾ ಬೆಂಗಳೂರ ಪೋರಡೌನ ಎಕ್ಸ್‌ಪ್ರೆಸ್‌ಕ್ಕ ಗಿರಾಕಿ ಹಾದಿನೋಡಿ ಯಾರೂ ಸಿಕ್ಕದಽ ಜೋಲು ಮೋರೆ ಹಾಕ್ಕೊಂಡು ಒಂದು ಟಾಂಗ ಕಟಕಟ ಸದ್ದು ಮಾಡಿಕೋತ ಇತ್ತಲಾಗ ಪೆಂಡಾರ ಓಣಿ ಕಡೆ ಹೊರಟಿರತದ. ಆವಾಗ ''ಹರಿಹರ ಲೋಂಡಾ'' ಆರರ ಪ್ಯಾಸೆಂಜರ್ ಗಾಡಿಗೆ ಯಾರಾರ ಗಿರಾಕಿ ಸಿಕ್ಕ ಬಹುದೇನೋ ಎಂಬ ಆಶಾದಿಂದ ಅದಽ ಪೆಂಡಾರ ಓಣಿಯಿಂದನಽ ಇನ್ನೊಂದು ಟಾಂಗ ಸ್ಟೇಷನ್‌ಕ್ಕ ಹೊರಟಿರತಽದ.ಎರಡೂ ಟಾಂಗಾಗಳದು ನಮ್ಮ ಮನೀಮುಂದಽನ ಕ್ರಾಸಿಂಗ್ ಇರತದ. ಇಬ್ಬರೂ ಸಾಹೇಬರು ''ಕ್ಯಾ...ಬಾ..'', ''ಕ್ಯಾ..ಬಿ..ನೈ'' ಎನುತ್ತ ತಮ್ಮ ತಮ್ಮ ನಶೀಬು ಬಯ್ದುಕೊಳ್ಳುತ್ತ ಒಂದೇ ಕಡ್ಡಿಯಿಂದ ಇಬ್ಬರೂ ಒಂದೊಂದು ಬೀಡಿ ಹಚ್ಚಿಕೋತಾರ. ಆವಾಗ ''ಕರ್ರ್'' ಅಂತ ಕಡ್ಡಿ ಕೊರೆದಿದ್ದ ಸಪ್ಪಳದ ಜತೆಗೇನಽ, ಸುಟ್ಟಮಕ್ಕಿನ ವಾಸನೆ ಬೀಡಿಯ ವಾಸನೆಯ ಜತೆಗೆ ಬೆರೆತು ಒಂದು ದಿವ್ಯವಾಸನಾ ಲೋಕವನ್ನೇ ಸೃಷ್ಟಿಸುತ್ತವೆ. ಆ ಮ್ಯಾಲ ಎರಡೂ ಟಾಂಗಾ ಮತ್ತ ಕಟಕಟ ಮಾಡಿಕೋತ ವಿಧಿ ಓಡಿಸಿದ ಕಡೆ ಓಡುತ್ತವೆ.

ಇಷ್ಟಾಗೋದರಾಗ ನಮ್ಮ ಸುತ್ತೂ ಕಡೆಗೆ ನಾಲ್ಕಾರು ಅಲಾರಮ್ ಗಡಿಯಾರಗಳು ನಾನಾತರದ ದನಿಗಳಲ್ಲಿ ಟ್ರಣ್‌ಗುಡತೊಡಗುತ್ತವೆ. ವಿಮಲಾ ಕುಲಕರ್ಣಿ, ಗೌರಾ ಪಾಟೀಲ, ಹೀರೇಮಠ ಗಂಗೂ ಯಲ್ಲಾರೂ ನಮ್ಮ ಜತೆಗೇ ಬಿ.ಎ. ಓದುತ್ತಿದ್ದವರು

ಅಭ್ಯಾಸಕ್ಕೆ ಏಳುತ್ತಾರೆ. ಜಾಧವ ''ಹುಡಿಗ್ಯಾರು ಎದ್ದರು, ಏಳಲೇ'' ಎನುತ್ತ ಶಿವಶಂಕರನನ್ನ ಎಬ್ಬಿಸತಾನ. ಶಿವಶಂಕರ ನಿದ್ರಾನ್ವಿತ ಕರ್ಕಶ ದನಿಯಲ್ಲಿ ''ಓದುವ ಬಿಟ್ಟು ಅವಕ್ಕ ಬ್ಯಾರೇ ಏನು ಕೆಲಸ ಇರತೈತಿ'' ಎನುತ್ತ ಮಗ್ಗಲು ಬದಲಿಸುತ್ತಾನೆ.

ಇದ್ದಕ್ಕಿದ್ದಂತೆ ಆಚೆಯ ಮಶೀದಿಯಿಂದ ಬಳಗಿನ ನಮಾಜ ಸ್ಫೋಟಗೊಳ್ಳುತ್ತದೆ. ಕಡುಕಪ್ಪು ಆಗಸದಲ್ಲಿ ಪೂರ್ವದ ಅಂಚಿಗೆ ಒಂದು ಬೆಳ್ಳಿದೆರೆ ಒಡೀತದೆ. ಒಂದೆರಡು ಕಾಗಿ ಅನುಮಾನಿಸಿಕೋತ ಸಾವಕಾಶ ''ಕಾವ್.. ಕಾವ್'' ಮಾಡಲಿಕ್ಕೆ ಸುರು ಮಾಡತಾವ. ಅತ್ತೀಕೊಳ್ಳದಾಗ ''ಮೂಡಲ ಮನೆಯವರು ಮುತ್ತಿನ ನೀರು'' ಚಿಮುಕಿಸತೊಡಗುತ್ತಾರೆ. ಮರಾಠಿ ಟೀಚರ ಅಠವಲೇ ಮಾಸ್ತರು, ಆರ್.ಎಸ್.ಎಸ್. ದೊಂದು ಖಾಕಿ ಲಾಡಿ ಚಣ್ಣಾ ಹಾಕ್ಕೊಂಡು ಬರೀ ಮೈಯ್ಯಲ್ಲಿ ಹೆಗಲಿಗೊಂದು ಕೊಡ ಹೇರಿಕೊಂಡು ''ಮನಾ ಸಜ್ಜನಾ ಭಕ್ತಿ ಪಂಥೇರ ಜಾವೇ'' ಎಂದು ಗಟ್ಟಿಯಾಗಿ ಜ್ಞಾನೇಶ್ವರಿ ಹೇಳಿಕೋತ , ಅರ್ಧ ಓಡಿಕೋತ ಅರ್ಧ ನಡಕೋತ ದತ್ತಾತ್ರಿ ದೇವರ ಗುಡಿ ಭಾವಿಯಿಂದ ಕುಡಿಯೋ ನೀರು ತರಲಿಕ್ಕೆ ಹೊರಟಿರತಾರ. ಓಣಿ ತುದಿಗೆ ಪಬ್ಲಿಕ್ ನಳಕ್ಕೆ ಪಾಳೀ ಹಚ್ಚಲಿಕ್ಕೆ ಒಂದೊಂದಽ ಒಂದೊಂದಽ ತಗಡಿನ ಕೊಡಪಾನ ಆಕಳಿಸಿಕೋತ ಬರತಿರತಾವ. ನಮ್ಮ ಹಿತ್ತಿಲಿನ ಅಳ್ಳೀ ಗಿಡದ ಹಕ್ಕಿಗಳೆಲ್ಲ ಎದ್ದು ಗೂಡಿನೊಳಗ ಚಡಪಡಿಸಲಿಕ್ಕೆ ಹತ್ತಿರತಾವ. ಅನತಿದೂರದ ವೆಂಕಟೇಶದೇವರ ಗುಡಿಯ ಘಂಟಾನಾದ ನಸುಕಿನ ಹವೆಯನ್ನ ಸೀಳಿಕೊಂಡು ಠೇಂಕರಿಸುತ್ತಿರುತ್ತದೆ. ಬಾಜೂದ ಮನೀ ಸಿಂಪಿ ಮುದುಕ ಧೋಂಡಿಬಾ ಗೂರಿ ಗೂರಿ ಕೆಮ್ಮತಿರತಾನ. ಅವ್ವ ಹಿತ್ತಲಾಗಿನ ತುಳಸೀ ಕಟ್ಟೆಗೆ ಭಯಭಕ್ತಿಯಿಂದ ಪ್ರದಕ್ಷಿಣೆ ಹಾಕುತ್ತಾ ''ತಾಯೀ ತುಳಸಾದೇವಿ ಈ ಸರೆ ಈ ಮೂರೂ ಹುಡುಗರನ ಪಾಸ ಮಾಡಿ ಪುಣ್ಯ ಕಟ್ಟಿಕೊಳ್ಳವ್ವಾ, ಪಾಪ ರಾತ್ರಿಯೆಲ್ಲ ಓದಿರತಾವ'' ಅಂತ ಬೇಡಿಕೋತಿರತಾಳ. ಇದನ್ನೆಲ್ಲ ಭೇದಿಸಿಕೋತ ''ಆನಂದವಿಲಾಸ'' ದ ರೇಡಿಯೋದಿಂದ ''ಘನಶಾಮ ಸುಂದರಾಽ... ಶ್ರೀಧರಾ... ಅರುಣೋದಯ ಝಾಲಾ'' ಅಂತ ''ಅಮರ ಭೋಪಾಳಿ'' ಯ ಲತಾ ಮಂಗೇಶಕರಳ ಅಮೃತಲೇಪಿತ ಕಂಠದ ಭೋಪಾಳಿ ರಾಗ ತೇಲಿ ತೇಲಿ ಬರತಿರತಽದ. ಹಿಂಗ ತೇಲಿ ತೇಲಿ ಬಂದು ಕಾಮನ ಕಟ್ಟೆಯ ವಾತಾವರಣವನೆಲ್ಲ ಪಾವನಗೊಳಿಸತಿರತಽದ.

ಆವಾಗ ಧಾರವಾಡ ಕಾಮನ ಕಟ್ಟೆ ಇನೊಂದು ದಿನ ಎದುರುಗೊಳ್ಳಲಿಕ್ಕೆ ಆಕಳಿಸಿಕೋತ ಮೈಮುರಿದು ಏಳತಽದ.

★ ★ ★ ★

ಆ ವರುಷ ನಾವು ಮೂರೂ ಮಂದಿ ಫೇಲ ಆದಿವಿ.

☆

**ಹೆಂಡ್ತಿ : ರೀ ನೀವು ದೆವ್ವ ನೋಡಿದೀರ?**
**ಗಂಡ : ನೋಡಿರೋದೇನು ಅದನ್ನೆ ಮದುವೆಯಾಗಿದೀನಿ ಮತ್ತು ಅದರ ಜೊತೇನೇ ಸಂಸಾರ ಮಾಡ್ತಿದೀನಿ.**

# ಗಾಣದ ಎತ್ತು

**- ಪ್ರಕಾಶ್**

**ನಾ**ಗಪ್ಪ ಸರ್ಕಾರೀ ಆಫೀಸಿನಲ್ಲಿ ಕ್ಲರ್ಕು. ಅವನ ದಿನಚರಿಯಂತೂ ಗಡಿಯಾರದ ಕೈಗಳಂತೆ. ಬೆಳಗ್ಗೆ ಆರಕ್ಕೇ ಎದ್ದು ಪ್ರಾತಃರ್ವಿಧಿಗಳನ್ನ ಮುಗಿಸಲೇಬೇಕು. ಒಂಭತ್ತಕ್ಕೆ ಮಡದಿ ಕೊಟ್ಟ ತಿಂಡಿ ತಿಂದು, ಕರೆಕ್ಟಾಗಿ ಒಂಭತ್ತೂ ಮುಕ್ಕಾಲಿಗೆ ಬಸ್ಸು. ಹತ್ತೂ ಕಾಲಿಗೆ ಆಫೀಸಿನಲ್ಲಿ ಕೂತಿರುತ್ತಿದ್ದ ಆಸಾಮಿ. ಒಂದು ಗಂಟೆಗೆ ಕ್ಯಾರಿಯರ್ ಊಟ. ಮಧ್ಯಾಹ್ನದ ಕೆಲಸ ಎಲ್ಲಾ ಮುಗಿಸಿ, ಐದಕ್ಕೆ ಬಸ್ ಹತ್ತಿ ಸಂಜೆ ಆರರೊಳಗೆ ಮನೆ ಸೇರುತ್ತಿದ್ದ ನಾಗಪ್ಪ. ಕೈಕಾಲು ತೊಳೆಯುವಾಗ ಅವನ ಹೆಂಡತಿ ಸೀತ, ''ಏನ್ರೀ, ಆಫೀಸ್ ಸಮಾಚಾರ?'' ಅಂತ ತಪ್ಪದೇ ಕೇಳೋಳು. ನಾಗಪ್ಪ ''ನಾನು ಗಾಣದ ಎತ್ತು ಕಣೇ! ನನ್ನ ಜೀವನದಲ್ಲಿ ಸಮಾಚಾರ ಏನಿರುತ್ತೆ ಹೇಳು'' ಎಂದು ಗದರುತ್ತಿದ್ದ. ಸೀತ ನಗುತ್ತ, ಕಾಫಿ ತಂದುಕೊಡುತ್ತಿದ್ದಳು. ಇದು ಅನೂಚಾನವಾಗಿ ನಡೆಯುತ್ತಿದ್ದ ಪದ್ಧತಿ ಅವರ ಮನೇಲಿ.

ಒಂದು ದಿನ ಯಥಾಪ್ರಕಾರ ನಾಗಪ್ಪ ಬಸ್ಸಿನಿಂದ ಇಳಿದು ಆಫೀಸ್ ಕಡೆ ಕಾಲು ಹಾಕಿದ. ಇದ್ದಕ್ಕಿದ್ದಂತೆ ಒಂದು ಮಾರುತಿ ವ್ಯಾನ್ ಪಕ್ಕದಲ್ಲಿ ಬಂದು ನಿಂತಿತು. ಇಬ್ಬರು ಧಡಿಯರು ನಾಗಪ್ಪನ ಹತ್ತಿರ ಬಂದು ''ನಿಮ್ ಹತ್ರ ಕೆಲಸ ಇದೆ. ನಮ್ಮ ಬಾಸ್ ಹತ್ರ ಬರಬೇಕು'' ಎನುತ್ತಾ, ಅವನನ್ನು ಏನು ಮಾಡುವುದಕ್ಕೂ ಬಿಡದೇ, ಬಲವಂತದಿಂದ ಕಾರಿನಲ್ಲಿ ಕೂರಿಸಿಕೊಂಡರು. ಕಾರಿಗೆ ಟಿಂಟೆಡ್ ಗಾಜುಗಳು ಬೇರೆ. ಅರ್ಧ ಗಂಟೆ ಆದಮೇಲೆ ಕಾರು ಬಂಗಲೆಯೊಂದರ ಹತ್ತಿರ ನಿಂತಿತು. ನಾಗಪ್ಪನನ್ನು ಬಂಗಲೆಯೊಳಗೆ ಸಾಗಿಸಿದರು ಆ ಧಾಂಡಿಗರು. ನಾಗಪ್ಪ ''ನನ್ನ ಆಫೀಸರ್ ಬೈತಾರೆ, ದಯವಿಟ್ಟು ಬಿಟ್ಟುಬಿಡಿ'' ಅಂತ ಅಂಗಲಾಚಿದ. ಅವರಿಬ್ಬರೂ ಮರುಮಾತನಾಡದೇ ಅವನನ್ನ ಭವ್ಯವಾದ ರೂಮೊಂದಕ್ಕೆ ಕರೆದೊಯ್ದರು. ಅಲ್ಲಿ ಸೋಫಾಮೇಲೆ ಒಬ್ಬ ವ್ಯಕ್ತಿ ಕುಳಿತಿದ್ದ. ಥೇಟ್ ಸಿನಿಮಾ ವಿಲನ್ ತರಹ ಬೋಳು ತಲೆ. ದಾಡಿ, ಬೆರಳುಗಳಿಗೆಲ್ಲಾ ಉಂಗುರಗಳು ಇತ್ಯಾದಿ. ನಾಗಪ್ಪನ ಕಡೆ ನೋಡಿ, ''ಜಾನ್ ಇವನೇ ಏನು?'' ಅಂದ. ಜಾನ್ (ಧಡಿಯ ನಂ ಒನ್) ''ಹೌದು ಬಾಸ್'' ಎಂದು ಜೇಬಿನಿಂದ ಒಂದು ಫೋಟೋ ತೆಗೆದು ಬಾಸ್ ಕೈಗೆ ಕೊಟ್ಟ. ಬಾಸ್ ಆ ಫೋಟೋನ ಮತ್ತು ನಾಗಪ್ಪನ ಬಾರಿ ಬಾರಿ ದುರುಗುಟ್ಟುಕೊಂಡು ನೋಡಿದ. ನಾಗಪ್ಪ ಬೆವತು ಹೋದ. ''ಸ್ವಾಮಿ, ನನ್ನ ಹೆಸರು ನಾಗಪ್ಪ, ನಾನು ಎಜುಕೇಷನ್ ಡಿಪಾರ್ಟ್‌ಮೆಂಟಿನಲ್ಲಿ ಗುಮಾಸ್ತ. ನನ್ನ ದಯವಿಟ್ಟು ಬಿಟ್ಟುಬಿಡಿ'' ಅಂತ ಅಂಗಲಾಚಿದ. ಬಾಸ್ ಗಹಗಹಿಸಿ ನಕ್ಕ. ''ಬಿಟ್ಟೇ ಬಿಡ್ತೇನೆ ರಾಜಾರಾಮ್! ಮೊದಲು ನೀನು ಕೊಡಬೇಕಾದ ಹದಿನೈದು ಲಕ್ಷ ವಾಪಸ್ ಮಾಡು'' ಅಂತ ಘರ್ಜಿಸಿದ. ನಾಗಪ್ಪ ಥರಥರ ನಡುಗಿದ. ''ನನ್ನ ಹೆಸರು ನಾಗಪ್ಪ. ನೀವು ನನ್ನ ಯಾಕೆ ಸತಾಯಿಸ್ತೀರ? ಬೇಕಾದರೆ ನಮ್ ಆಫೀಸರ್ ನಂಬರ್ ಕೊಡ್ತೀನಿ, ನಮ್ ಇಲಾಖೇಲಿ ಕೇಳಿ'' ಅಂತ ಅಲವತ್ತುಕೊಂಡ ನಾಗಪ್ಪ. ಬಾಸ್ ನಿಧಾನವಾಗಿ ಎದ್ದು ನಿಂತು ನಾಗಪ್ಪನ ಹತ್ತಿರ ನಡೆದು ಬಂದು ತನ್ನ ಕೈಲಿದ್ದ

ಫೋಟೋ ತೋರಿಸಿದ. ಥೇಟ್ ತನ್ನ ಕನ್ನಡಿ ಪ್ರತಿಬಿಂಬ! ದಾಡಿ ಮಾತ್ರ ಇರಲಿಲ್ಲ. ಅಷ್ಟು ಹೊತ್ತಿಗೆ ಟೆಲಿಫೋನ್ ರಿಂಗಾಯಿತು. ಧಡಿಯ ನಂ. ಟೂ ಫೋನನ್ನು ರಿಸೀವ್ ಮಾಡಿದ. ಅವನ ಮುಖಾರವಿಂದಲ್ಲಿ ಆಶ್ಚರ್ಯ, ಸಂತೋಷಗಳೆರಡೂ ಸಮನಾಗಿ ಹರಡಿದವು. ''ಬಾಸ್ ಫೋನ್‌ನಲ್ಲಿ ರಾಜಾರಾಮ್. ನಿಮ್ಮ ಹತ್ರ ಮಾತಾಡಬೇಕಂತೆ'' ಅಂದ.

ನಾಗಪ್ಪನ್ನ ಧಡಿಯರಿಬ್ಬರೂ ವರಾಂಡಾಗೆ ಕರೆದುಕೊಂಡು ಹೋದರು. ''ಇಲ್ಲಿ ನಡೆದದ್ದನ್ನೆಲ್ಲಾ ಯಾರಿಗಾದರೂ ಹೇಳಿದರೆ ಹುಷಾರ್ ಮಾರನೆಯ ದಿನ ಮನೇಲ್ ವಡೆ ಮಾಡಿಸ್ಬೇಕಾಗುತ್ತೆ'' ಅಂತ ಮಾರ್ಮಿಕವಾಗಿ ನುಡಿದರು. ''ಸಧ್ಯ ನನ್ನನ್ನ ಮೊದಲು ಆಫೀಸಿಗೆ ಬಿಡಿ'' ಅಂತ ನಾಗಪ್ಪ ಬೇಡಿಕೊಂಡ.

''ಏನ್ರೀ, ಬೆಳ್ಳಂಬೆಳಗ್ಗೆ ಎಲ್ಲಿಗೆ ಪ್ರವಾಸ?'' ಅಂತ ಆಫೀಸರ್ ಕೇಳಿದರು. ''ಕ್ಷಮಿಸಿ ಸಾರ್, ಮನೇಲಿ ತೊಂದರೆ...'' ಅಂತ ನಾಗಪ್ಪ ತೊದಲಿದ. ಸಂಜೆ ಬಸ್ಸಿನಲ್ಲಿ ಮನೆಗೆ ಬಂದು ''ಉಸ್ಸಪ್ಪ'' ಅಂತ ಕೂತ. ಸೀತ ಬಂದು, ''ಇವತ್ತು ಕಾಫಿ ಜೊತೆಗೆ ಇರ್ಲಿ ಅಂತ ವಡೆ ಮಾಡಿದ್ದೀನ್ರೀ, ಅಂದಹಾಗೆ ಏನ್ರಿ ಸಮಾಚಾರ ಆಫೀಸಿನಲ್ಲಿ?'' ಅಂದಳು.

ನಾಗಪ್ಪ ಒಂದು ಕ್ಷಣ ಅವಳನ್ನು ನೋಡಿದ. ''ಅಯ್ಯೋ ಬಿಡು ಸೀತಾ! ಗಾಣದ ಎತ್ತು ನಾನು'' ಅಂದ!......

☆

---

## ನಂಬಿಕೆ

ಒಬ್ಬರು ಒಂದು ಭವ್ಯವಾದ ಮನೆ ಕೊಂಡರು. ಆದರೆ ಒಂದೇ ಸಮಸ್ಯೆ ಎಂದರೆ ಬಾಲ್ಕನಿಗೆ ಹೋದರೆ ಎದುರಿಗಿದ್ದ ಸ್ಮಶಾನ ಕಾಣಿಸುತ್ತಿತ್ತು. ಸ್ಮಶಾನ ಎಂದ ಮೇಲೆ ಭೂತ, ದೆವ್ವ, ಪಿಶಾಚಿಗಳು ಇರಲೇ ಬೇಕಲ್ಲವೆ? ಅಥವಾ ಇರಬಹುದಲ್ಲವೆ? ಹಾಗೆಂದು ಮನೆಯ ಒಡತಿ ಭಾವಿಸಿದರು. ಹೆದರಿಕೊಂಡೂ ಇದ್ದರು. ದೆವ್ವ ಅಥವಾ ಪಿಶಾಚಿ ಅಥವಾ ಎರಡೂ ತಮಗೆ ಕಾಟ ಕೊಡಲು ಪ್ರಾರಂಭಿಸಿದರೆ? ಈ ಚಿಂತೆಯಲ್ಲೇ ಇದ್ದಾಗ ಅವರ ಮನೆಗೆ ಎಚ್. ನರಸಿಂಹಯ್ಯನವರಂತಹ ರ್‍ಯಾಷನಲಿಸ್ಟ್ ಅತಿಥಿಯಾಗಿ ಬಂದರು. ಅವರ ಮುಂದೆ ಆಕೆ ತಮ್ಮ ಸಮಸ್ಯೆ ತೋಡಿಕೊಂಡರು. ಅದೇ ಸಂಜೆ ಅವರು ಆ ರುದ್ರಭೂಮಿಯಲ್ಲಿ ಅಡ್ಡಾಡಿ ಬರುವುದಾಗಿ ಹೇಳಿ ಹೊರಟರು. ವಾಪಸಾದಾಗ ಆಕೆ
"ಯಾವುದಾದರೂ ಭೂತ ಕಂಡಿತೆ?" ಎಂದು ಚಿಂತೆಯಿಂದ ಕೇಳಿದರು.
'ಹೌದಮ್ಮ, ಒಂದಲ್ಲ ಎರಡಲ್ಲ ಮೂವರು ಕಂಡರು. ಅವರಿಗೆ ನಾನು ನಿಮ್ಮ ಬಗ್ಗೆ ಹೇಳಿ ಅಲ್ಲಿಂದ ಹೋಗಿ ಎಂದೆ' ಎಂದರು.
"ಹೌದೆ? ಅದು ಏನಂತು?''
'ನಮ್ಮನ್ನು ನಂಬಿರುವವರನ್ನು ನಾವು ಯಾವಾಗಲೂ ಬಿಟ್ಟು ಹೋಗುವುದಿಲ್ಲ' ಎಂದು ಹೇಳಿದವು.
ಅದನ್ನು ಕೇಳಿದ ಮೇಲೆ ಆಕೆಗೆ ಭೂತದ ಮೇಲೆ ನಂಬಿಕೆ ಹೋಯಿತು. ಅಂದಿನಿಂದ ಆಕೆ ನಿರಾಳವಾಗಿ ಇರತೊಡಗಿದರು.

# ಕೃಷ್ಣ ಯಾವತ್ತು ಹುಟ್ಟಿದ?

**- ನುಗ್ಗೆಹಳ್ಳಿ ಪಂಕಜ**

''ನಮಗೆ ನಾಡಿದ್ದು ಗೋಕುಲಾಷ್ಟಮಿ'' - ಹಾದಿಯಲ್ಲಿ ಸಿಕ್ಕ ಸ್ನೇಹಿತ ತಿಳಿಸಿದ - ''ಮನೇಲಿ ಭಾರಿ ಗಡಿಬಿಡಿ!''

''ಹೌದೇ?''



ಒಬ್ಬೊಬ್ರಿಗೆ ಒಂದೊಂದು ದಿವಸ ಹಬ್ಬ? ಅಂದರೆ ಕೃಷ್ಣ ಯಾವತ್ತು ಹುಟ್ಟಿದ? ನಿಜವಾಗಿ ಅವನ ಬರ್ತ್‌ಡೇ ಯಾವತ್ತು? ಪಾಪ, ನನ್ನಾಕೆಗೆ ಗೊತ್ತಿದ್ಯೋ ಇಲ್ವೋ?

ಬಿರಬಿರನೆ ಹೆಜ್ಜೆ ಹಾಕಿದೆ. ಬಾಗಿಲಲ್ಲಿ ಎದುರುಮನೆಯಾಕೆ ಸಿಕ್ಕಿದ್ರು. ''ಇವತ್ತು ನಮಗೆ ಗೋಕುಲಾಷ್ಟಮಿ, ಏಳು ಗಂಟೆಗೆ ಸರಿಯಾಗಿ ಮಂಗಳಾರತಿ - ರುಕ್ಕೂನೂ ಕರ್ಕೊಂಡು ಬಂದ್ಬಿಡಿ'' ಎಂದವರೇ ಕೇಳಿದ್ರು- ''ಅಂದ ಹಾಗೆ ನಿಮ್ಮನೇಲಿ ಯಾವಾಗ ಕೃಷ್ಣ ಜನ್ಮಾಷ್ಟಮಿ?'' ನಮಗೆಲ್ಲಾ ನಾಡದ್ದು - ಇನ್ನೊಬ್ಬ ಹೇಳಿದ - ''ಆದ್ರೆ ನಮ್ಮ ಅತ್ತೆಮನೆಯವರಿಗೆ ಮುಂದಿನ ತಿಂಗಳಂತೆ ಹಬ್ಬ!'' ಅದಕ್ಕೇ ಅವ್ರೆಲ್ಲಾ ಈಗ ಬರ್ತಿದಾರೆ.

''ಕೃಷ್ಣ ಎಷ್ಟು ಸಲ ಜನ್ಮ ತಾಳ್ತಾನೆ?'' - ಕನ್‌ಫ್ಯೂಸಾಗಿ ಪ್ರಶ್ನಿಸಿಯೇಬಿಟ್ಟೆ. ಆಕೆಗೂ ಗಲಿಬಿಲಿ ಆಗಿರಬೇಕು.

''ಬಂದೆ, ವಲೆ ಮೇಲೆ ಹಾಲಿಟ್ಟಿದೀನಿ'' - ಅಂತ ಹೇಳ್ತಾ ಹೊರಟೇಹೋದ್ರು.

''ಕೃಷ್ಣ ಯಾರ ಮನೇಲಿ ಎಷ್ಟು ಸಲಾನಾದ್ರೂ ಜನ್ಮ ತಾಳಲಿ, ನಮ್ಮ ಮನೇನ ಮಾತ್ರ ಮಿಸ್ ಮಾಡ್ಬೇಡಪ್ಪಾ'' ಅಂತ ಪ್ರಾರ್ಥಿಸ್ತಾ ಗೃಹಪ್ರವೇಶ ಮಾಡಿದೆ. ಮನದಲ್ಲಿ ಏನೇನೋ ಕಲ್ಪನೆ - ''ಈಗ ನನ್ನ ರುಕ್ಕೂ ಏನ್ಮಾಡ್ತಿರಬಹುದು? ನಂಗೆ ಚಕ್ಕುಲಿ - ತೇಂಕೊಳು ಅಂದ್ರೆ ತುಂಬಾ ಇಷ್ಟ ಅಂತ ಅವಳಿಗೆ ಗೊತ್ತುಂಟು.... ಮಾಡ್ತಿರಬಹುದೇ? ಕೃಷ್ಣನಿಗೆ ಹಾಲ್ಮಿಟಾಯಿ ಅಂದ್ರೆ ಪ್ರಾಣ - ಹಾ, ಅದನ್ನೇ ಮಾಡ್ತಿರ್ಬೇಕು! ಈಗ ಅವಳನ್ನ ಡಿಸ್ಟರ್ಬ್ ಮಾಡ್ಬಾರ್ದು - ಹದ ಕೆಟ್‌ಹೋಗತ್ತೆ...'' - ಹೀಗೆಲ್ಲಾ ಯೋಚಿಸಿ, ಒಳ್ಳೇ ಕಳ್ಳನ ಹಾಗೆ ಮನೆ ಒಳಗೆ ಕಾಲಿಟ್ಟೆ. ಆದರಲ್ಲಿ ಕಂಡದ್ದೇನು?

ಹಿಂದಿನ ಹಾಗೆ ಲಾಡು-ಬೂಂದಿ, ಮನವಾರ, ಇತ್ಯಾದಿ ತಟ್ಟೆಗಳ ಓಡಾಟವಿಲ್ಲ. ಚಕ್ಕುಲಿ ಒರಳು, ತೇಂಕೊಳ್ ಒರಳು, ಇವುಗಳ ಸುಳಿವೇ ಇಲ್ಲ - ಇನ್ನು ಜಾಲರಿ ತಟ್ಟೆಯ ಸಪ್ಪಳ? ಆರಾಮವಾಗಿ ಸೀರಿಯಲ್ ನೋಡ್ತಿದ್ದಳು! ಹೇ ದೇವ, ಈ ಸಲ ನಂಗೇನೂ ತಿಂಡಿನೇ ಇಲ್ವಾ ಏನು? ಬರೀ ಮಂಗಳಾರತಿ - ಪ್ರಸಾದದಲ್ಲೇ ಸರಿಮಾಡ್ಬಿಡ್ತಾಳೋ, ಹೇಗೆ?

ಅಲ್ಲಾ, ಹಬ್ಬ ಅಂತ ಒಂದು ಗೋಡಂಬಿ ದ್ರಾಕ್ಷಿ ಕೂಡಾ ತರಿಸಿಲ್ವೆ? ನನ್ ಕೈಗೂ ಬ್ಯಾಗ್ ಕೊಡ್ಲಿಲ್ಲ, ''ಇದು ತನ್ನಿ, ಅದು ತನ್ನಿ'' – ಅಂತ? ಮರೆತ್ಬಿಟ್ಟಳೋ?

ಹೇಗೆ ಸಾಧ್ಯ, ಅಕ್ಕಪಕ್ಕ ದಿನಕ್ಕೊಂದು ಕೃಷ್ಣ – ಬರ್ತಡೇ ಮಾಡ್ತಿರೋವಾಗ?

ಅಥವಾ ಮಾರ್ಡನ್ ಸ್ಟೈಲ್‌ನಲ್ಲಿ ಮಾಡ್ತಾಳೋ, ''ಬೇಕರಿಯಿಂದ ದೊಡ್ಡ ಕೇಕ್ ತರಿಸಿ, ಸುತ್ತಲೂ ಇರುವ ಮಕ್ಕಳಿಂದ ಕ್ಯಾಂಡಲ್ ಹತ್ತಿಸಿ, ಹ್ಯಾಪಿ ಬರ್ತ್‌ಡೇ'' ಹಾಡನ್ನ ಹೇಳಿಸಿಬಿಡ್ತಾಳೋ, ಏನ್ ಕಥೆ? ಅದ್ಸರಿ, ಎಷ್ಟು ಕ್ಯಾಂಡಲ್ಸ್ ಹತ್ತಿಸ್ತಾಳೆ? ಐದು ಸಾವಿರ? ಆರು ಸಾವಿರ? ಸುಮಾರು ಎಷ್ಟನೇ ಬರ್ತ್‌ಡೇ ಇರಬಹುದು, ನಮ್ಮ ಕೃಷ್ಣಪ್ಪಂದು?

ಅಷ್ಟೊಂದು ಕ್ಯಾಂಡಲ್ಸ್ ಅನ್ನ ಎಲ್ಲಿಂದ ತರೋದು? ಕ್ಯಾಂಡಲ್ ಫ್ಯಾಕ್ಟರಿಗೇ ಆರ್ಡರ್ ಕೊಟ್ಬಿಟ್ಟಿದಾಳೋ? ಅಷ್ಟನ್ನೂ ಹೊತ್ಕೊಂಡು ಬರೋವ್ರು ಯಾರು? ಉಹು – ನನ್ ಕೈಲಾಗಲ್ಲಾಪ! ಕೃಷ್ಣ ಬೈಕೊಂಡ್ರೂ ಪರವಾಗಿಲ್ಲ.........

ನನ್ನ ಅಮ್ಮ ಇರ್ಬೇಕಿತ್ತು – ಹೊಡೆದೆಬ್ಸಿ, ಜಬರ್ದಸ್ತು ಮಾಡಿ ಚಪ್ಪರ ಕಟ್ಸಿ, ಅದರೊಳಗೆಲ್ಲಾ ಹಣ್ಣುಹಂಪಲು – ಚಕ್ಕುಲಿ ಮುಚ್ಚೇರು ಎಲ್ಲಾ ತೂಗುಹಾಕ್ಸಿ, ಚಪ್ಪರಕ್ಕೆಲ್ಲಾ ಹೂವಲಂಕಾರ ಮಾಡ್ಸಿ, ಕೃಷ್ಣನಿಗೆ ಇಷ್ಟವಾದ ತಿಂಡಿ–ಅಡಿಗೆ ಎಲ್ಲಾ ನೈವೇದ್ಯ ಮಾಡಿ, ಹಾ, ಆ ಸಂಜೆಯ ಸುಖವೇ ಸುಖ!

ಅನ್ಯಾಯ, ಇನ್ನೂ ಸ್ವಲ್ಪ ಬದುಕಿರಬಾರ್ದಿತ್ತೆ ಅಮ್ಮ? ಸೊಸೆಗೆ ಟ್ರೈನಿಂಗ್ ಕೊಡದೆ ಕಣ್ ಮುಚ್ಚಬಹುದೇ?

ಇರಬೇಕಿತ್ತು – ಚೆನ್ನಾಗಿಯೇ ತರಾಟೆಗೆ ತೆಗೆದುಕೊಳ್ಳುತ್ತಿದ್ರು!

ಮನೆ ಒಳಹೊದವನೇ ಧೈರ್ಯಮಾಡಿ ಕೇಳಿಯೇಬಿಟ್ಟೆ – ''ನಮ್ಮನೇಲಿ ಯಾವತ್ತೇ ಹಬ್ಬ?''

''ನಾಡದ್ದು ಕಣ್ರೆ''

ಅಷ್ಟೂ ಗೊತ್ತಿಲ್ವೆ ನಿಮಗೆ? – ಅನ್ನುವಂತೆ ನೋಡಿದಳು.

''ಅದ್ಸರಿ, ಹಬ್ಬಕ್ಕೆ ತಿಂಡಿ?''

''ಈಗೆಲ್ರಿ ಮನೇಲಿ ಮಾಡ್ತಾರೆ – ಕೈ ಸುಟ್ಕೊಂಡು? ಇದು ರೆಡಿಮೇಡ್ ಯುಗ – ಅದನ್ನೂ ತಿಳಿಸ್ಬೇಕ ಮಹಾರಾಯರಿಗೆ? ಗೋಕುಲಾಷ್ಟಮಿ ತಿಂಡಿಗಳ ಮಿನಿ ಫ್ಯಾಕ್ಟರಿಯೇ ಆರಂಭ ಆಗ್ಬಿಟ್ಟಿದೆ ಎಲ್ಲ ಬಡಾವಣೆಗಳಲ್ಲೂ – ಬೇಕಾದ್ರೆ ಹಾಗೇ ಒಂದ್ ರೌಂಡ್ ಹಾಕ್ಬಿಟ್ಟು ನೋಡಿ – ಅಬ್ಬಾ, ಎಂಥಾ ಕ್ಯೂ!''

''ಹೌದೇ! ಆ ತಿಂಡಿಗಳನ್ನೆಲ್ಲ ಮಾಡೋವ್ರು ಯಾರು?''

''ಇನ್ಯಾರು – ವಯಸ್ಸಾಗಿ ಈಗ ಕೆಲಸದಿಂದ ರಿಟೈರ್ಡ್ ಆಗಿರೋ ನಮ್ಮ ಹಳೇ ಅಡಿಗೆಯವರ ಗುಂಪು. ಎಷ್ಟಾದ್ರೂ ನುರಿತ ಕೈಗಳು – ತಿಂಡಿಗಳೆಲ್ಲ ಸೊಗಸಾಗಿರತ್ತೆ – ಬೆಲೇನೂ ಪರ್ವಾಗಿಲ್ಲ, ಅಂಥಾದ್ರಲ್ಲಿ ಮನೇಲಿ ಯಾಕ್ರೀ ಕಷ್ಟಪಡ್ಬೇಕು?''

ನಂಗೆ ಬಾಯಲ್ಲಿ ನೀರೂರದೆ? ತಕ್ಷಣ ಮನೇಲಿರೋ ಬ್ಯಾಗುಗಳನ್ನೆಲ್ಲಾ ಕೈಗೆತ್ತಿಕೊಂಡೆ. ಅಟ್ಟದ ಮೇಲಿದ್ದ ಗೋಣಿಚೀಲಾನೂ ಬಿಡ್ಲಿಲ್ಲ.

''ಬೇಗ ಹೋಗಿ ಆದಷ್ಟೂ ಹೊತ್ಕೊಂಡು ಬರೋಣ ಬಾರೆ'' - ಅವಸರಪಡಿಸಿದೆ. ''ನಾಡದ್ದು ಹಬ್ಬ ಅಂತಿ?''

''ಕೊನೇ ದಿನ, ಅಂದ್ರೆ, ನಾಡದ್ದೇ ಹೋದ್ರಾಯ್ತು; ಯಾಕಂದ್ರೆ, ಆಗ ಮಿಕ್ಕಿದ್ದೆಲ್ಲಾನೂ ರವಾನೆ ಮಾಡಿ ಅಂಗಡಿ ಖಾಲಿ ಮಾಡ್ಬೇಕಲ್ಲ? ಅದಕ್ಕೇ, ಬಂದ ಬಂದವರಿಗೆಲ್ಲಾ ಎಲ್ಲಾನೂ ಥ್ರೊಅವೇ ಪ್ರೈಸ್ - ಅಂದರೆ, ತೀರಾ ಕಮ್ಮಿ ಬೆಲೆಗೆ ಮಾರಿ ಕೈ ಒದರಿಕೊಂಡು ನಡೆದುಬಿಡ್ತಾರೆ.

''ನಮಗೆ ಎಷ್ಟೊಂದು ವೆರೈಟಿಸ್ ತಿಂಡಿಗಳು ತೀರಾ ಕಮ್ಮಿ ಬೆಲೆಗೆ''

''ಅದ್ಸರಿ, ನಿಜಕ್ಕೂ ನಮ್ಮ ಕೃಷ್ಣಪ್ಪ ಯಾವತ್ತು ಹುಟ್ಟಿದ?''

☆

---

## ದೋಸೆ ಕಥೆ

ಡಿಸೆಂಬರ್ ಎಂದರೆ ಸಖತ್ ಚಳಿಗಾಲ. ಅಂಥಾ ದಿನಗಳಲ್ಲಿ ಏನಾದರೂ ಕುರುಕ್ತಾ ಇರಬೇಕು ಅನ್ನೋದು ವಯಸ್ಸಾದವರ ಆಸೆ. ಆದರೆ ಅದಕ್ಕೆ ಅನೇಕ ವಿಘ್ನಗಳು ಬರುತ್ತಿರುತ್ತವೆ. ಸೋಮು ಮತ್ತು ರಾಮು ಒಂದು ದಿನ ಹೀಗೆ ಜಗಲಿ ಮೇಲೆ ಕೂತು ಮಾತಾಡ್ತಾ ಇದ್ದಾಗ ಸೋಮು ಈ ವಾತಾವರಣದಲ್ಲಿ ಒಂದು ಮಸಾಲೆ ದೋಸೆ ತಿಂದರೆ ಎಷ್ಟು ಚೆನ್ನಾಗಿರುತ್ತೆ ಅನಿಸಿದರೂ ಮನೇಲಿ ಸೋಮಿ ಏನಂತಾಳೋ ಅಂತ ಹೆದರಿ ಕಡೆಗೆ ಒಂದುಪಾಯ ಮಾಡಿದ. ಸೋಮಿ ರಾಮುಗೆ ಹೊಟ್ಟೆ ನೋವಂತೆ, ಅದಿಕ್ಕೇ ಡಾಕ್ಟರ ಹತ್ತಿರ ಹೋಗ್ತಾ ಇದಾನೆ ನನ್ನನ್ನೂ ಬಾ ಅಂದಿದಾನೆ ಹೋಗಿ ಬರ್ತೀನಿ ಅಂತ ಹೇಳಿ ಹೊರಟೇಬಿಟ್ಟ. ಸೋಮು ಹೀಗೆ ಏನಾದರೂ ಮಾಡುವಾಗ ಸೋಮಿಗೆ ಮೊದಲು ಬರೋದೇ ಅಪನಂಬಿಕೆ. ಅದು ಅವಳ ಅನುಭವ. ರಾಮುಗೆ ಹೊಟ್ಟೆ ನೋವಾದ್ರೆ ಇವರ್ಯಾಕೆ ಹೋಗಬೇಕು ಅಂತ ಅವಳೂ ಸ್ವಲ್ಪ ದೂರದಲ್ಲಿ ಹಿಂದೆ ಹೊರಟಳು. ಇಬ್ಬರೂ ನಾರಾಯಣರಾಯರ ಲಕ್ಷ್ಮೀ ನಿವಾಸಕ್ಕೆ ಹೋಗಿದ್ದು ಕಂಡು ಸೋಮಿಗೆ ಹೊಟ್ಟೆ ಉರಿದುಹೋಯಿತು. ಒಳಗೆ ಹೋದ ಸೋಮು ರಾಮು ಇಬ್ಬರೂ ಮಸಾಲೆ ದೋಸೆ ಆರ್ಡರ್ ಮಾಡಿದ್ದು ಕಂಡು ತಾನೂ ಇನ್ನೊಂದು ಮೂಲೇಲಿ ಕೂತು ಮಸಾಲೆ ದೋಸೆ ತರಿಸಿಕೊಂಡು ತಿಂದಳು.

ಸೋಮು ರಾಮು ಇಬ್ಬರೂ ಮಸಾಲೆ ದೋಸೆ ತಿಂದು ಕಾಫಿ ಕುಡಿದು ಸಖತ್ ಮಜಾ ಮಾಡಿದೆವು ಅಂದುಕೊಂಡು ಆಚೆ ಬಂದಾಗ ಅಲ್ಲಿ ಸೋಮಿ ನಿಂತಿರೋದು ಕಂಡು ಸೋಮುಗೆ ತಿಂದ ಮಸಾಲೆ ದೋಸೆ ಆಚೆ ಬರೋ ಹಾಗಾಯಿತು. ಸೋಮಿ ಕಣ್ಣು ಕೆಂಪಗೆ ಮಾಡಿ ನೋಡಿದಾಗ ಸೋಮು ತಬ್ಬಿಬ್ಬಾಗಿ ಸೋಮಿ ಅದೂ, ರಾಮು ಅಂದ ಈ ಹೋಟೆಲಿನಲ್ಲಿ ದೋಸೆ ತಿಂದರೆ ಹೊಟ್ಟೆ ನೋವು ಬರುತ್ತೆ. ಈಗ ಹೇಗೂ ಹೊಟ್ಟೆ ನೋವು ಬಂದಿದೆ. ಅದಿಕ್ಕೆ ಈಗ ದೋಸೆ ತಿಂದ್ರೆ ಮತ್ತೆ ಹೊಟ್ಟೆ ನೋವು ಬರಲ್ಲ ಅಂದ ಹೇಗೂ ಡಾಕ್ಟರ ಹತ್ತಿರ ಹೋಗ್ತಾ ಇದೀವಲ್ಲ ದೋಸೆ ತಿಂದ್ಕೊಂಡೇ ಹೋಗೋಣ ಅಂದ ಅದಿಕ್ಕೆ ಅಂದು ತಲೆಕೆರೆದ. ಸೋಮಿ ನಗುತ್ತಾ ಮನೆಗೆ ಹೊರಟಳು. ಈಗ ಅವಳಿಗೆ ಮಸಾಲೆ ದೋಸೆ ತಿನ್ನಬೇಕು ಅನಿಸಿದರೆ ರೀ ರಾಮುಗೆ ಹೊಟ್ಟೆ ನೋವು ಬಂದಿಲ್ವಾ ಅಂತ ಕೇಳ್ತಾಳೆ. ಇಬ್ಬರೂ ನಾರಾಯಣರಾಯರ ಹೋಟೆಲಿಗೆ ಹೋಗಿ ದೋಸೆ ತಿಂದು ಮಜಾ ಮಾಡ್ತಾರೆ.

# ಕೆಲವು ಸಾರಿ ಹೀಗೂ ಆಗಿಬಿಡುತ್ತದೆ

- ವೈ.ಎಸ್. ಗುಂಡೂರಾವ್

**ಕೆ**ಲವು ಸಾರಿ ಹೀಗೂ ಆಗಿಬಿಡುತ್ತದೆ. ವೇದಿಕೆಯ ಮೇಲಿಂದಲೋ, ನಾಲ್ಕಾರು ಜನ ಸೇರಿದಾಗಲೋ, ಯಾವುದಾದರೊಂದು ವಿಷಯವನ್ನು ಪ್ರಸ್ತಾಪಿಸಿದಾಗ ಕೇಳುಗರು ಗ್ರಹಿಸುವಲ್ಲಿಯೂ ವ್ಯತ್ಯಾಸವಾಗಿ, ತಾವು ಕೇಳಿಸಿಕೊಂಡಿದ್ದನ್ನು ಇತರರಿಗೆ ತಿಳಿಸುವಾಗ ಮತ್ತೊಂದು ರೀತಿಯ ಅರ್ಥವುಂಟಾಗುವ ಸಂದರ್ಭವೂ ಬರಬಹುದು. ಇದಕ್ಕೆ ಗ್ರಹಿಕೆಯ ಮಟ್ಟದಲ್ಲಿನ ವ್ಯತ್ಯಾಸವೇ ಕಾರಣ.

ಅದರಲ್ಲೂ ಸಾವಿನ ವಿಷಯವನ್ನು ಫೋನಿನಲ್ಲಿ ಸರಿಯಾಗಿ ಕೇಳಿಸಿಕೊಳ್ಳದಿದ್ದರೆ ಆಗುವ ಆಭಾಸಗಳಂತು ಅಗಾಧ.

ಸಂಬಂಧಿಕರೊಬ್ಬರ ಹೆಂಡತಿ ಕೆಲವು ದಿವಸಗಳಿಂದ ಅನಾರೋಗ್ಯ ಪೀಡಿತರಾಗಿ ಒಂದೆರಡು ಬಾರಿ ಆಸ್ಪತ್ರೆಗೆ ದಾಖಲಾಗಿಯೂ ಬಂದಿದ್ದರು. ಆದರೆ ಇದ್ದಕ್ಕಿದಂತೆ ಹೃದಯಾಘಾತವಾಗಿ ಗಂಡನೇ ತೀರಿಕೊಂಡಾಗ, ವಿಷಯ ತಿಳಿದವರೊಬ್ಬರು ತಮ್ಮ ಮತ್ತೊಬ್ಬ ಸಂಬಂಧಿಗೆ ಫೋನಿನಲ್ಲಿ ತಿಳಿಸಿದರು. ಆತನ ಹೆಂಡತಿ ಆಗಾಗ್ಗೆ ಅನಾರೋಗ್ಯಕ್ಕೀಡಾಗುತ್ತಿದ್ದುದು ಗೊತ್ತಿದ್ದರಿಂದ, ಸಾವಿನ ವಿಷಯ ಮಾತನಾಡಿದ್ದರಿಂದ ಆಕೆಯೇ ತೀರಿಕೊಂಡಿರಬೇಕೆಂದು ತಮಗೆ ತಿಳಿದವರೆಲ್ಲರಿಗೂ ವಿಚಾರ ತಿಳಿಸಿಬಿಟ್ಟರು. ಆದರೆ ಕೆಲವರಿಗೆ ಎರಡು ಮೂರು ಕಡೆಗಳಿಂದ ವಿಷಯ ಪ್ರಸ್ತಾಪವಾಗುತ್ತಿದ್ದಂತೆ 'ಅರೆ, ತೀರಿಕೊಂಡವರು ಆಕೆಯೋ, ಆತನೋ?' ಎಂಬ ಸಂಶಯಕ್ಕೆಡೆಮಾಡಿಕೊಟ್ಟು ಗೊಂದಲವೇರ್ಪಟ್ಟಿತು.

ಕಡೆಗೆ ಅವರ ಮನೆಗೆ ಫೋನಾಯಿಸಿದಾಗಲೇ ಸರಿಯಾದ ಸುದ್ದಿ ಸಿಕ್ಕಿದ್ದು. ಆಗ ಕೇಳಿದವರೆಲ್ಲರೂ ''ಅಪಾರ್ಥಕ್ಕೆಡೆಕೊಟ್ಟಿದ್ದರಿಂದ ಆಯುಸ್ಸು ಜಾಸ್ತಿ'' ಎಂದು ಆಕೆಯನ್ನು ಸಮಾಧಾನ ಪಡಿಸಿದರು.

ಹೀಗೆ ಗ್ರಹಿಕೆಯ ಕೊರತೆಯಿಂದ ಕೆಲವು ಸಾರೆ ಮುದ್ರಿತವಾಗಿರುವುದನ್ನು ಸಂಪೂರ್ಣ ಓದದೆ, ಪುಸ್ತಕದ ಶೀರ್ಷಿಕೆಯನ್ನು ನೋಡಿದೊಡನೆ ತೀರ್ಮಾನಕ್ಕೆ ಬಂದುಬಿಡುವುದರಿಂದ ಆಗುವ ಅನಾಹುತಗಳು ವಿಪರೀತ.

ನನ್ನ ಎಪ್ಪತ್ತರ ವಯಸ್ಸಿನ ಸಂಭ್ರಮಾಚರಣೆಯ ಕಾರ್ಯಕ್ರಮಕ್ಕೆ ಬಂಧುಗಳು, ಹಿತೈಷಿಗಳು, ಕೆಲ ಸ್ನೇಹಿತರು ಸಾಕ್ಷಿಯಾಗಿದ್ದು, ಆ ಸಂದರ್ಭಕ್ಕಾಗಿ ಬರೆದ 'ನಮ್ಮ ಮನೆಯ ಬೆಳಕು' ಪುಸ್ತಕವನ್ನು ಸಮಾರಂಭದಲ್ಲಿ ಹಾಜರಿದ್ದವರಿಗೆಲ್ಲ ಉಚಿತವಾಗಿ ಹಂಚಿ, ಆ ಪುಸ್ತಕದ ಬಗ್ಗೆ ಏನೇನು ಪ್ರತಿಕ್ರಿಯೆ ಬರಬಹುದೆಂದು ಜಾತಕಪಕ್ಷಿಯಂತೆ ಕಾದೆ.

ಆ ಪುಸ್ತಕದಲ್ಲಿ ''ನಾನು ಮದುವೆಯಾಗಲು ಹುಡುಗಿಯನ್ನು ನೋಡುವುದರಿಂದ ಹಿಡಿದು ಮದುವೆ, ನನ್ನ ತಂದೆ ತಾಯಿ, ಬಂಧು-ಬಳಗದವರ ಬಗ್ಗೆ ಕೆಲ ಟಿಪ್ಪಣಿ, ನನ್ನೂರಿನ ಬಗ್ಗೆ ಕೆಲ ವಿಚಾರ, ಮೈಸೂರು ಅರಸು ಮನೆತನದವರೊಡನೆ ಯಳಂದೂರಿನ ಗಣ್ಯರು ಹೆಣ್ಣು ಕೊಟ್ಟು ಬೆಳೆಸಿದ ಸಂಬಂಧ - ನಮ್ಮ ಕುಟುಂಬಕ್ಕೆ ನೆರವಾದ ನನ್ನ ಸೋದರಮಾವ, ನಮ್ಮಮ್ಮನ

ಸೋದರ ಮಾವ – ಕಡೆಗೆ ನನ್ನ ಬದುಕನ್ನು ನೇರಮಾಡಿದವರಿಗೆಲ್ಲ ತೋರಿದ ಕೃತಜ್ಞತೆ'' – ಇದು ಪುಸ್ತಕದ ಸ್ಥೂಲ ಪರಿಚಯ.

ಪುಸ್ತಕವನ್ನು ಸಮಾರಂಭದ ದಿವಸ ಉಚಿತವಾಗಿ ಹಂಚುತ್ತೇನೆಂದಾಗ ನನ್ನ ಸ್ನೇಹಿತನೊಬ್ಬ ಬೈದ. ''ನಿನಗೆ ಬುದ್ಧಿಯಿಲ್ಲ, ನಮ್ಮ ಕೆಲವು ಕನ್ನಡಿಗರ ಮಹಾಗುಣ ನಿಂಗೊತ್ತಿಲ್ಲ, ಬಿಟ್ಟಿಕೊಟ್ರೆ ಬಿಸಾಡ್ತಾರೆ. ಯಾರೂ ಓದಲ್ಲ. ಕೊಂಡುಕೊಂಡರೆ ಕೊಂಡ ತಪ್ಪಿಗಾದರೂ ಒಳಗೆ ಏನಿದೆ ಅಂತ ಕಣ್ಣಾದರೂ ಆಡಿಸ್ತಾರೆ, ನಾನು ಹೇಳ್ತಾಯಿರೋದು ಸುಳ್ಳೋ – ನಿಜವೋ ಅನ್ನೋದು ಗೊತ್ತಾಗುತ್ತೆ, ಬೇಕಾದ್ರೆ ಬೆಟ್ ಕಟ್ತೇನೆ'' ಎಂದ.

''ಬೇಡ ಮಾರಾಯ, ಬೆಟ್–ಗಿಟ್ ಏನೂ ಬೇಡ. ನೋಡೋಣ'' ಎಂದೆ.

ಸಮಾರಂಭದ ದಿವಸ ಹವನ–ಹೋಮ, ತಿಂಡಿ–ಊಟ ಎಂದು ಕೊಂಡು, ಎಲ್ಲ ಮುಗಿಸಿ ಸಂಜೆ ಮನೆಗೆ ಹೋಗಿ ಉಸ್ಸಪ್ಪ ಎಂದು ಹರಟೆ ಹೊಡೆಯುತ್ತಾ ಕುಳಿತಿದ್ದಾಗ ರಾತ್ರಿ ಎಂಟರ ಹೊತ್ತಿಗೆ ಕೆಲ ಸ್ನೇಹಿತರು ಬಂಧುಗಳು, ''ಅಯ್ಯೋ ರಾಮ, ಎಂಥ ಪುಸ್ತಕ ಬರೆದಿದ್ಯಲ್ಲಪ್ಪ! ಆಫ್‌ಕೋರ್ಸ್, ನಿಮ್ಮ ಶ್ರೀಮತಿಯರ ಕೆಲಸವನ್ನು ನಾವೆಲ್ಲ ನೋಡಿದ್ದೇವಲ್ಲ, ಆದ್ರೆ ಅವರ ತಂದೆ–ತಾಯಿನ ನೋಡ್ಕೊಂಡ ಹಾಗೆ ನಿಮ್ತಂದೆತಾಯೀನೂ ನೋಡ್ಕೊಂಡ್ರು ಅಂದ್ರೆ ಗ್ರೇಟ್ ಕಣಯ್ಯ'' ಎಂದು ಎಲ್ಲರೂ ಹೊಗಳಿದಾಗ ಸೆಲ್‌ಫೋನ್ ಸ್ಪೀಕರ್ ಆನ್ ಮಾಡಿ ನನ್ನವಳಿಗೂ ಕೇಳಿಸಿದಾಗ ಸಂತೋಷಪಟ್ಟಳು.

ದಿನಬೆಳಗಾದರೆ ನಾಲ್ಕಾರು ಫೋನ್ ಕಾಲ್‌ಗಳು. ಎಲ್ಲರದ್ದೂ ಒಂದೇ ಪ್ರತಿಕ್ರಿಯೆ, ''ತಂದೆ ತಾಯಿಗಳನ್ನು ವೃದ್ಧಾಶ್ರಮಕ್ಕೆ ಅಂತ ನೂಕೋವ್ರ ಮಧ್ಯೆ ನೀವು ಮತ್ತು ನಿಮ್ಮ ಶ್ರೀಮತಿಯವರ ಪ್ರೀತಿ, ಔದಾರ್ಯ ಬಹಳ ದೊಡ್ಡದು.''

ಈ ರೀತಿಯ ಹೊಗಳಿಕೆಯ ಮಾತುಗಳನ್ನು ಕೇಳಿದಾಗ ಯಾರುತಾನೆ ಉಬ್ಬಿ ಹೋಗುವುದಿಲ್ಲ, ಉಬ್ಬಿ.... ಉಬ್ಬಿ.... ದೊಡ್ಡ ಬಲೂನಿನಂತಾದೆವು. ಇಂಥ ದೊಡ್ಡ ಬಲೂನು ಮೇಲಕ್ಕೆ ಹಾರಿ ಹೋದದ್ದು ಎಷ್ಟುದಿವಸ ಆಕಾಶದಲ್ಲಿ ಹಾರಲಾದೀತು ಹೇಳಿ? ಕಡೆಗೊಂದು ದಿವಸ ಡಬ್ ಆಗ್ಲೇಬೇಕಲ್ವಾ...!

''ಅದು ಆದದ್ದು ಹೀಗೆ –''

ಉಡುಪಿಯಲ್ಲಿದ್ದ ನನ್ನ ಸ್ನೇಹಿತರೊಬ್ಬರಿಗೆ ಪುಸ್ತಕ ಕಳುಹಿಸಿದೆ. ತಲುಪಿದ್ದಕ್ಕೂ ಅವರಿಂದ ಉತ್ತರ ಬಂದಿರಲ್ಲಿಲ್ಲ. ತಲುಪಿತೋ ಇಲ್ಲವೋ ಎಂಬ ಸಂಶಯದಿಂದ ನಾನೇ ಫೋನ್ ಮಾಡಿದೆ.

ಇಂತಹ ಸಂದರ್ಭದಲ್ಲಿ ಕೆಲವು ಕನ್ನಡ ಬರಹಗಾರರಿಗೆ ಪುಸ್ತಕ ತಲುಪಿದೆ ಎಂದು ತಿಳಿಸುವ ಸೌಜನ್ಯವನ್ನು ತೋರಿಸುವಷ್ಟು ಬಿಡುವಿರುವುದಿಲ್ಲ – ಪಾಪ, ಬಿಜಿ ಬರಹಗಾರರು! ಏನೂ ಮಾಡೋಕಾಗೊಲ್ಲ.

ಫೋನ್ ಮಾಡಿದ ಕೂಡಲೆ 'ಇಲ್ಲ, ಇಲ್ಲ ನನಗೆ ಆರೋಗ್ಯ ಸರಿಯಿರದೆ ನಿಮಗೆ ತಿಳಿಸೋಕ್ಕೆ ಆಗ್ಲಿಲ್ಲ. ಓದಿ ಅಭಿಪ್ರಾಯ ತಿಳಿಸ್ತೇನೆ' ಎಂದರು. ಸರಿ ಎಂದು ಫೋನಿಟ್ಟೆ.

ಮತ್ತೆ ಎರಡು ತಿಂಗಳು ಕಳೆದೇ ಹೋಯಿತು.

ಹೊಗಳಿಸ್ಕೊಳ್ಳೋಕೆ ಯಾರಿಗೆ ತಾನೆ ಇಷ್ಟ ಇರೋಲ್ಲ ಹೇಳಿ - ನಾನೇ ಮತ್ತೆ ಫೋನ್ ಮಾಡಿದೆ.

ಅತ್ತ ಕಡೆಯಿಂದ -

''ಅಯ್ಯೋ, ನಿಮ್ಮ ಪುಸ್ತಕದ ಬಗ್ಗೆ ಅವತ್ತೇ ಹೇಳ್ದೆ ಅಂತ ಕಾಣುತ್ತೆ ಅಲ್ವಾ'' ಎಂದರು.

''ಇಲ್ಲ, ನಿಮ್ಮ ಆರೋಗ್ಯ ಸರಿ ಇರಲಿಲ್ಲ ಅಂತ ಹೇಳಿದ್ರಾ....''

''ಹೌದು ಹೌದು... ಆದ್ರೂ ಓದಿದ ನಂತರ ಫೋನ್ ಮಾಡಿದ್ದೆ ಅಂತ ಕಾಣುತ್ತೆ... ಹ್ಞಾಂ! ಈಗ ಜ್ಞಾಪಕಕ್ಕೆ ಬಂತು ನೋಡಿ... ಅದೇ ನಿಮ್ಮ ಶ್ರೀಮತಿಯವರ ಬಗ್ಗೆ... ಅದೂ... ಇದೂ... ಬರೆದಿದ್ದೀರಲ್ವಾ... ಹೌದು ತಾನೇ!''

''ಹೌದು ಹೌದು''... ಏನು ಹೇಳುತ್ತಾರೊ ಎಂಬ ಖುಷಿಯಿಂದ ಕಾದೆ.''

''ಎಷ್ಟುಜನ ಗಂಡಸರಿಗೆ ಇಂತಹ ಉದಾರತೆ ಇರುತ್ತೇರೀ, ನೀವಂತು ನಿಮ್ಮ ಹೆಂಡತಿಗೆ ಕೃತಜ್ಞತೆ ಸೂಚಿಸಿರುವುದು ಅದ್ಭುತ. ಯಾರು ತಾನೆ ಹೀಗೆ ಹೊಗಳ್ತಾರೆ ಹೇಳಿ! ಪ್ರತಿಯೊಂದಕ್ಕೂ ಅದು ಸರಿಯಿಲ್ಲ, ಇದು ಸರಿಯಿಲ್ಲ ಅಂತ ಏನಾದರೊಂದು ಕಾರಣ ತೆಗೆದು ಹಗಲು-ರಾತ್ರಿ, ಗಂಡ-ಮನೆ-ಮಕ್ಕಳು ಅಂತ ಜೀವತೇಯ್ದರೂ ಯಾರೂ ಗೃಹಿಣಿಯರನ್ನು ಗೌರವಿಸೋದೇ ಇಲ್ಲ. ಅಂಥಾದ್ದರಲ್ಲಿ ನೀವು ನಿಮ್ಮ ಶ್ರೀಮತಿಯವರನ್ನು ನೆನಪಿಸಿಕೊಂಡಿದ್ದೀರಾ...!''

ನನಗೆ ಆಶ್ಚರ್ಯವಾಯಿತು. ಏನು ಹೇಳ್ತಾಯಿದ್ದಾರೆ ಈಕೆ ಎನಿಸಿತು.

''ಅಲ್ಲಾ ಮೇಡಂ ಅದು...''

''ಹೌದು ಮಿಸ್ಟರ್‌ರಾವ್ ನಿಮ್ಮ ತರಹ ಗ್ರ್ಯಾಟಿಟ್ಯೂಡ್ ತೋರ್ಸೋವ್ರು ಬಾಳಾಕಮ್ಮಿ... ಇಷ್ಟೊಂದು ಪ್ರೀತಿಸುತ್ತಿದ್ದ ನಿಮ್ಮ ಮನೆಯವರಿಲ್ದೆ ಹೇಗಪ್ಪ ಕಾಲ ಕಳೀತೀರಾ, ಯಾರಿದ್ದಾರೆ ಜೊತೆಗೆ...?''

''ಅಲ್ಲ ಮೇಡಂ... ಸ್ವಲ್ಪಕೇಳಿ... ಎಲ್ರೂ ಇದ್ದಾರೆ. ನನ್ನ ಜೊತೆಗೆ ನನ್ನ ಶ್ರೀಮತಿಯೂ ಇದ್ದಾಳೆ'' ಎಂದೆ.

ಸ್ಸಾರಿ.. ಸ್ಸಾರಿ... ದೀರ್ಘ ಸುಮಂಗಲೀಭವ ಎಂದು ಹೇಳಿದಾಗ ''ನಮ್ಮ ಎಪ್ಪತ್ತರ ಸಂಭ್ರಮಾಚರಣೆಯ ಸಂದರ್ಭದ ಪುಸ್ತಕ'' ದಯವಿಟ್ಟು ಈಗಲಾದ್ರೂ ಓದಿ ಎಂದು ಡಿಸ್‌ಕನೆಕ್ಟ್ ಮಾಡಿದೆ.

ಸ್ನೇಹಿತ ಹೇಳಿದ್ದು ಸರಿ ಎನಿಸಿತು. ಕೆಲವರಿಗೆ ಉಚಿತವಾಗಿ ಪುಸ್ತಕವನ್ನು ಕೊಟ್ಟಾಗ ಓದುವ ವ್ಯವಧಾನವೂ ಇರುವುದಿಲ್ಲ, ಓದದಿದ್ದರೆ ಬೇಡ. ಹೋಗಲಿ, ಓದಿದವರಂತೆ ನಟಿಸಿ ಪ್ರತಿಕ್ರಿಯಿಸುವವರಿಂದ ಭಾರಿ ಅನಾಹುತ ಆಗುವುದಂತು ಗ್ಯಾರಂಟಿ.

ಬಿಡಿ, ಅಧ್ಯಾಪಕಿಯಾಗಿ, ಬರಹಗಾರ್ತಿಯಾಗಿ ಹೆಸರುಗಳಿಸಿದ್ದ ಚಿ.ನ. ಮಂಗಳಾರವರೇ ಇಂಥ ವಿಷಯದಲ್ಲಿ ಒಮ್ಮೆ ಎಡವಿದ್ದರೆಂದರೆ ಇನ್ನು ನನ್ನ ಸ್ನೇಹಿತರದ್ದು ಏನೂ ತಪ್ಪಿಲ್ಲವೆಂದೇ ಹೇಳಬಹುದು.

1963ನೇ ಇಸವಿ, ಡೆಕ್ಕನ್ ಹೆರಾಲ್ಡ್‌ನ ಸ್ವಾತಂತ್ರ್ಯೋತ್ಸವ ಸಂಚಿಕೆಗಾಗಿ ಚಿ.ನ. ಮಂಗಳಾರವರು ''ಕನ್ನಡ ನಾಡಿನ ಮಹಿಳಾ ಸಾಹಿತಿಗಳು'' ವಿಷಯದ ಬಗ್ಗೆ ಬರೆಯುತ್ತ ತಿರುಮಲಾಂಬರವರು 'ಇಲ್ಲ' ಎಂದು ಬರೆದು ಬಿಟ್ಟರು. ಲೇಖನ ಪ್ರಕಟವೂ ಆಯಿತು. ಅವರು ಮಾಡಿದ ಪ್ರಮಾದ ತಿಳಿದದ್ದು ಹಲವಾರು ವರ್ಷಗಳ ನಂತರ.

ಒಮ್ಮೆ ಎಚ್.ಎಸ್. ಪಾರ್ವತಿಯವರು ಸಿಕ್ಕಾಗ 'ತಿರುಮಲಾಂಬರವರು ಬದುಕಿದ್ದಾರಂತೆ ಕಣ್ರೀ' ಎಂದಾಗ ಚಿ.ನ. ರವರಿಗೆ ಉಸಿರಾಟವೇ ನಿಂತಂತಾಯಿತಂತೆ. 'ಬದುಕಿಲ್ಲ ಅಂತ ಬರೆದು ಬಿಟ್ನಲ್ರೀ' ಎಂದು ತುಂಬಾ ಪೇಚಾಡಿದರು.

ಕಡೆಗೆ ತಿರುಮಲಾಂಬರವರು ಮದರಾಸಿನಲ್ಲಿರುವ ವಿಷಯವನ್ನು ಪತ್ತೆ ಹಚ್ಚಿದ ಚಿ.ನ. ಮಂಗಳಾರವರು ತಮ್ಮನೊಡನೆ ನೋಡಲು ಹೋದರು.

ಮನೆ ಪತ್ತೆಹಚ್ಚಿ ಭೇಟಿಮಾಡಲು ಸಿದ್ಧರಾಗಿ ತಟ್ಟೆಯಲ್ಲಿ ಹೂವು-ಹಣ್ಣು, ಶಾಲು, ಗಂಧದ ಹಾರದೊಡನೆ ಕಾಯ್ದರು. ಕೊರಳಲ್ಲಿ ಮಣಿಮಾಲೆ ಧರಿಸಿದ್ದ, ಅಯ್ಯಂಗಾರರಂತೆ ಸೀರೆ ಉಟ್ಟಿದ್ದ ವೃದ್ಧಾಪ್ಯದ ಹೆಂಗಸೊಬ್ಬರು ಹೊರಬಂದು 'ಯಾರು ಬೇಕಿತ್ತು?' ಎಂದರು.

''ನಾವು ಬೆಂಗಳೂರಿನಿಂದ ಬಂದಿದ್ದೇವೆ, ತಿರುಮಲಾಂಬರವರನ್ನು ನೋಡಬೇಕು'' ಎಂದರು.

''ತಿರುಮಲಾಂಬಾನೇ... ಅವಳಿಲ್ಲ... ಹೋಗಿ ಬಿಟ್ಲು'' ಎಂದವರು ಒಳಗೆ ಹೊರಟೇ ಹೋದರು.

ಅಷ್ಟರಲ್ಲಿ ಹುಡುಗನೊಬ್ಬ ಬಂದ, ಪರಿಸ್ಥಿತಿಯನ್ನು ಇವರಿಬ್ಬರೂ ವಿವರಿಸಿದರು. ದೂರದಿಂದ ಬಂದಿದ್ದೀರಾ, ಸಮಾಧಾನಮಾಡಿ ಕರ್ಕೊಂಡು ಬರ್ತೇನೆ ಎಂದು ಹೇಳಿ ಹೋದ ಹುಡುಗ ಕಾಲುಗಂಟೆಯ ನಂತರ ಕರೆತಂದ.

ಮರುಮಾತಾಡದೆ ಮಂಗಳಾರವರು ಹಣ್ಣಿನ ತಟ್ಟೆಯನ್ನು ಮುಂದಿಟ್ಟು, ಶಾಲು ಹೊದ್ದಿಸಿ ತಮ್ಮ ತಪ್ಪಿನ ಬಗ್ಗೆ ಕ್ಷಮೆಯಾಚಿಸಿದರು ''ಅಯ್ಯೋ ಪರವಾಗಿಲ್ಲ ಬಿಡಮ್ಮ, ನೀನು ಬರೆದದ್ದೇ ಸರಿ, ಆ ತಿರುಮಲಾಂಬ ಈಗಿಲ್ಲ'' ಎಂದರಂತೆ.

ಅವರು ಮಾಡಿದ ಸಾಹಿತ್ಯ ಸೇವೆ, ಸಮಾಜಸೇವೆ ಎಂದಿಗೂ ಸ್ಫೂರ್ತಿ ನೀಡುವಂತದ್ದು ಎಂದು ಚಿ.ನ. ರವರು ವಿವರಿಸಿದಾಗ ಸಮಾಧಾನವಾದಂತೆ ಕಂಡರು.

''ನಾನು ಬರೆಯೋದನ್ನ ಬಿಟ್ಟುಬಿಟ್ಟಿದ್ದೇನೆ, ನಾನಾಯಿತು ಮನೆಯಾಯಿತು, ಜಪ-ಪೂಜೆ. ನಾವು ಬರೆಯೋದೆಲ್ಲ ಈಗಿನವರಿಗೆ ಹಿಡಿಸೋಲ್ಲ, ಅದೆಲ್ಲ ಬೇಕಾಗೂ ಇಲ್ಲ'' ಎಂದರು.

ಆದರೂ ಚಿ.ನ. ಮಂಗಳಾರವರು ಸಮಾಧಾನ ಹೇಳಿ ಅವರು ರಚಿಸಿದ್ದ ಹಲವಾರು ಪುಸ್ತಕಗಳನ್ನು ಪಡೆದು ''ಶಾಶ್ವತೀ'' ಸಂಸ್ಥೆಯನ್ನು ಪ್ರಾರಂಭಿಸಿದ್ದು ಈಗ ಇತಿಹಾಸ.

ಈಗ ಹೇಳಿ ನನ್ನ ಸ್ನೇಹಿತರದ್ದು ತಪ್ಪೆಂದು ಹೇಗೆ ಹೇಳಲಾದೀತು? ಒಮ್ಮೊಮ್ಮೆ ಹೀಗೂ ಆಗಿಬಿಡುತ್ತದೆ. ನನ್ನ ಸ್ನೇಹಿತರು ಫೋನ್‌ನಲ್ಲಿ ನನ್ನೊಡನೆ ಮಾತನಾಡಿದ್ದು, ತಲೆಕೆಡಿಸಿಕೊಂಡ ನಾನು ಈ ಲೇಖನ ಸಿದ್ಧಪಡಿಸಿದ್ದು, ನನ್ನ ಶ್ರೀಮತಿಗೆ ಗೊತ್ತೇ ಇಲ್ಲ - ಅಷ್ಟೇ ಸಮಾಧಾನ.

☆

# Advertisement

Advertisement

# ಮೊಸರನ್ನದ ಡಬ್ಬಿ!

**- ಚಿತ್ರಾ ರಾಮಚಂದ್ರನ್**

'**ಸ**ರಯೂ ಅಳ್ತಿದ್ಳಂತೆ!'

ಬ್ರೇಕ್ ಫಾಸ್ಟ್ ತಯಾರಿಸುವ ತರಾತುರಿಯಲ್ಲಿದ್ದ ರಜಿನಿಗೆ, ಆ ಬೆಳ್ಳಂಬೆಳಗಿನ ಹೊತ್ತಿನಲ್ಲಿ ಪ್ರೇಮ ಕಳುಹಿಸಿದ ಮೆಸೇಜ್ ನೋಡಿ ಮನಸ್ಸು 'ದಿಗ್' ಎಂದಿತು.

'?????' ಒಂದು ಕೈಯಿಂದ ಉಪ್ಪಿಟ್ಟನ್ನು ತಿರುವುತ್ತ, ಮತ್ತೊಂದು ಕೈಯ ಬೆರಳುಗಳು ಅದೆಷ್ಟು ಪ್ರಶ್ನಾರ್ಥ ಚಿಹ್ನೆಗಳನ್ನು ಒತ್ತಿದವೋ!

'ಯಶೋದಾ ವರದಿ!' ಎಂದು ಪ್ರೇಮ ಉತ್ತರಿಸಿದಳು.

ಪ್ರೇಮಳ ಮನೆಯಲ್ಲಿ ಕೆಲಸ ಮಾಡುತ್ತಿದ್ದ ಯಶೋದಾ ಸರಯೂ ಮನೆಯಲ್ಲೂ ಕೆಲಸ ಮಾಡುತ್ತಿದ್ದಳು. ಅವಳನ್ನು ಎಲ್ಲರೂ ಆ ವಠಾರದ ಫೇಸ್ ಬುಕ್ ಅಂತಲೇ ಕರೆಯುತ್ತಿದ್ದರು. ಆ ಮನೆ ಸುದ್ದಿ ಈ ಮನೆ ಸುದ್ದಿ ಎಲ್ಲರ ಮನೆ ಸುದ್ದಿಯನ್ನೂ ಯಶೋದ.ಹಾಟ್ ನ್ಯೂಸ್.ಕಾಮ್ ಹರಡುತ್ತಿತ್ತು. ತನ್ನ ಸ್ವಂತ ಕಲ್ಪನೆಯ ಮೇಕ್‌ಅಪ್ ಬಣ್ಣ ಬಳಿದಿದ್ದರೂ ಮುಕ್ಕಾಲು ಪಾಲು ಸುದ್ದಿಗಳಲ್ಲಿ ಎಳ್ಳಷ್ಟಾದರೂ ಸತ್ಯಾಂಶ ಇರುತ್ತಿತ್ತು. ಹಾಗಿರಲು ಸರಯೂ ಅಳುತ್ತಿದ್ದ ಸಂಗತಿ ನಿಜವೇ ಆಗಿರಬೇಕು. ರಜಿನಿಯ ಮನಸ್ಸು ತಳಮಳಗೊಂಡಿತು. ಸ್ನೇಹಿತೆಗೆ ದುಃಖವೆಂದರೆ ಅವಳಿಗೂ ದುಃಖವಿಲ್ಲವೇನು? ಸ್ನೇಹವೆಂದರೆ ಅಂತಿಂತ ಸ್ನೇಹವೇ? ನಲವತ್ತು ವರ್ಷಗಳ ಗಾಢ ಸ್ನೇಹ!

ಅವರುಗಳು ಹತ್ತನೇ ತರಗತಿಯಲ್ಲಿದ್ದಾಗ ನಡೆದ ಒಂದು ಘಟನೆ ರಜಿನಿಗೆ ನೆನಪಾಯಿತು. ಅಂದು ಸೆಕೆಂಡ್ ಲ್ಯಾಂಗ್ವೇಜಾಗಿ ಅವಳು ಆರಿಸಿಕೊಂಡಿದ್ದ ಸಂಸ್ಕೃತ ಭಾಷೆಯ ಪರೀಕ್ಷೆ. ಸರಯೂ ಸಹ ಅದೇ ಭಾಷೆಯನ್ನ ಆಯ್ದುಕೊಂಡಿದ್ದಳು. ಸಮಯಕ್ಕೆ ಮುಕ್ಕಾಲು ಗಂಟೆ ಮುಂಚಿತವಾಗಿಯೇ ಹಾಜರಾಗಿ ಇತರ ಸ್ನೇಹಿತೆಯರ ಕಟ್ಟಕಡೆ ನಿಮಿಷದ ಅನುಮಾನಗಳಿಗೆ ಉತ್ತರಗಳನ್ನ ವಿವರಿಸಿ ಹೇಳಿಕೊಡುತ್ತಿದ್ದ ಸರಯೂ ಅಂದು ಯಾಕೋ ಬರಲೇ ಇಲ್ಲ. ಗಂಟೆ ಹೊಡೆದು, ಪ್ರಶ್ನೆ ಪತ್ರಗಳಿಗೆ ಎಲ್ಲರೂ ಉತ್ತರಗಳನ್ನು ಬರೆಯಲು ಶುರು ಮಾಡಿದ ಮೇಲೂ ಅವಳು ಬರಲೇ ಇಲ್ಲ. ರಜಿನಿ ಮತ್ತು ಇನ್ನಿಬ್ಬರು ಸ್ನೇಹಿತೆಯರು ಪರೀಕ್ಷೆ ಬರೆದು ಮುಗಿಸಿ ಸರಯೂಗೆ ಏನಾಯಿತೋ ಏನೋ ಎಂದು ಗಾಬರಿಗೊಂಡು ಅವಳ ಮನೆ ತಲುಪಿದರು.

ಆ ಮಹರಾಯಿತಿ ತೋಟದ ಕಲ್ಲು ಬೆಂಚಿನ ಮೇಲೆ ಒಯ್ಯಾರವಾಗಿ ಕುಳಿತು ಪುಸ್ತಕ ಹಿಡಿದು ಗಂಭೀರವಾಗಿ ಓದಿಕೊಳ್ಳುತ್ತಿದ್ದಳು! ಅನಿರೀಕ್ಷಿತವಾಗಿ ಆಗಮಿಸಿದ ಸ್ನೇಹಿತೆಯರ ದಂಡು ಕಂಡು ''ಎನ್ರೇ? ಸಂಸ್ಕೃತದಲ್ಲಿ ಏನಾದರೂ ಅನುಮಾನವೇ? ಬನ್ನಿ ಬನ್ನಿ! ನಾನು ಚೆನ್ನಾಗಿ 'ಕುಡುಮಿ'ದ್ದೀನಿ! ಏನು ಬೇಕೋ ಕೇಳಿ!'' ಎಂದಾಗ ಇವರಿಗೆಲ್ಲ ದಿಗ್ಭ್ರಾಂತಿ!

ಸಂಸ್ಕೃತ ಪರೀಕ್ಷೆ ಮುಗಿದಿದ್ದ ವಿಷಯ ತಿಳಿಸಿದಾಗ ''ಅಯ್ಯೋ! ಸಂಸ್ಕೃತ ನಾಳೆಯಲ್ಲವೇ? ಇವತ್ತು ಹಿಂದಿಯವರಿಗೆ ಅಂದುಕೊಂಡೆನಲ್ಲಾ?'' ಎಂದಳು. ದಿನಾಂಕಗಳಲ್ಲಿ ಗೊಂದಲ ಮಾಡಿಕೊಂಡು ಒಂದು ಪರೀಕ್ಷೆಯನ್ನು ಮಿಸ್ ಮಾಡಿಕೊಂಡಿದ್ದು ಅರ್ಥವಾಯಿತು. ಅದರಿಂದ ಒಂದು ವರ್ಷವೇ ಹಾಳಾದಾಗಲೂ ''ಏನೋ ಆಯಿತು ಬಿಡ್ರೆ! ಓದೋದಿಕ್ಕೆ ಇನ್ನೂ ನನ್ನ ಇಡೀ ಆಯಸ್ಸು ಇದೆಯಲ್ಲಾ?'' ಎಂದಿದ್ದಳು. ಒಂದಿಷ್ಟೂ ಕಣ್ಣೀರು ಹಾಕದೆ ವೈರಾಗ್ಯದಿಂದಿದ್ದಳು! ಅಂತಹ ಗಟ್ಟಿ ಮನಸ್ಸಿನ ಸರಯೂ ಅಳುತ್ತಿದ್ದಳು ಎಂಬುವುದು ನಂಬಲಾರದ ವಿಷಯವಾಗಿದೆಯಲ್ಲ!

ರಜಿನಿ ಉಪ್ಪಿಟ್ಟು ಮುಚ್ಚಿಟ್ಟು ಮಂಜುಳಳಿಗೆ ಸುದ್ದಿ ಕಳುಹಿಸಿದಳು.

'ಅತ್ತೆ ಕಾಟ ಇರಬಹುದೇ?' ಎಂದು ಪ್ರಶ್ನಿಸಿತು ಮಂಜುಳಾಳ ವಾಟ್ಸಪ್ ಸಂದೇಶ.

ಛೆ! ಛೆ! ಖಂಡಿತ ಇರಲಾರದು ಎಂದುಕೊಂಡ ರಜಿನಿಯ ಮನಸ್ಸಲ್ಲಿ ವರ್ಷಗಳ ಹಿಂದೆ ನಡೆದ ಮತ್ತೊಂದು ಘಟನೆ ರೀಪ್ಲೇ ಆಯಿತು.

ಸರಯೂಳನ್ನು 'ನೋಡಲು' ಅಂದು ವರನ ಮನೆಯವರು ಬರುವುದಿದ್ದರು. ಜೊತೆಗೆ ತನ್ನ ಸ್ನೇಹಿತೆಯರೂ ಇರಬೇಕು ಎಂಬ ಅವಳ ಬೇಡಿಕೆಯನ್ನು ಅವಳ ತಂದೆ ಅಲ್ಲಗಳೆಯಲಿಲ್ಲ. ಇಷ್ಟೇ ಅಲ್ಲದೆ 'ನಾನು ವರನ ಕಾಲು ಮುಟ್ಟಿ ನಮಸ್ಕರಿಸಲ್ಲ! ತಿಂಡಿ ತೀರ್ಥದ ವಿತರಣೆ ಮಾಡೋದಿಲ್ಲ! ಅವರ ಮುಂದೆ ಕೂತು ವೀಣೆ ನುಡಿಸೋದಿಲ್ಲ!' ಎಂದು ಇನ್ನೂ ಅನೇಕ ಷರತ್ತುಗಳನ್ನೂ ಹಾಕಿದ್ದಳು. ಅವಳ ತಾಯಿಗೋ ಸೆರಗಲ್ಲಿ ಕೆಂಡ ಕಟ್ಟಿಕೊಂಡಂತಹ ಸಂಕಟ. ವಧು ಪರೀಕ್ಷೆಗೆ ಬಂದಿದ್ದ ಆ ಮಹತಾಯಿ ಸುಮ್ಮನಿರಬಾರದೆ? ಹುಡುಗಿಗೆ ಮಜ್ಜಿಗೆ ಹುಳಿ ಮಾಡಲು ಬರುತ್ತೆಯೇ ಎಂದು ಪ್ರಶ್ನಿಸಿಬಿಟ್ಟಳು. ಅಷ್ಟೇ! 'ನಿಮ್ಮ ಮನೆಗೆ ಸೊಸೆ ಹುಡುಕಕ್ಕೆ ಬಂದೀರೋ ಇಲ್ಲ ಅಡುಗೆ ಕೆಲಸಕ್ಕೆ ಇಂಟರ್ವ್ಯೂ ಮಾಡಕ್ಕೆ ಬಂದಿರೋ?' ಎಂದು ಸರಯೂ ದಬಾಯಿಸಿದಾಗ, ಮಹಾತಾಯಿಯೂ ಅವಳ ಮಗನೂ ಎದ್ದೆನೋ ಬಿದ್ದೆನೋ ಎಂದು ಓಡಿಯೇ ಹೋಗಿದ್ದರು! ಇಂತಹ ಹೆಣ್ಣು ಹುಲಿಗೆ ಅತ್ತೆ ಕಾಟವೇ? ಇರಲಾರದು. ಅವಳ ಅತ್ತೆಯಂತೂ ಅಪರಂಜಿ ಅನ್ನೋದನ್ನ ಅವಳೇ ಎಷ್ಟೋ ಬಾರಿ ಹೇಳಿದ್ದಳು. ಮತ್ತೆ ಅವಳ ಕಣ್ಣೀರಿಗೆ ಏನೇ ಕಾರಣ?

'ಸರಯೂ ಅಳ್ತಿದ್ಲಂತೆ' ಮತ್ತೆ ಅದೇ ಮೆಸೇಜ್! ಈ ಬಾರಿ ಕಳುಹಿಸಿದ್ದು ಸ್ವರ್ಣ. ರಜಿನಿ 'ಯಾಕಂತೆ' ಎಂದು ಮರು ಸುದ್ದಿ ಕಳುಹಿಸಿದಳು.

'ಏಕೋ ಏನೋ? ದುರ್ಗಾ ಸುದ್ದಿ ಕಳಿಸಿದ್ದಾಳೆ. ಗಂಡ ಏನಾದ್ರೂ ಅಂದಿರಬಹುದೇ?'

ಗಂಡ ಅಂದರೆ ಗಂಡ! ಆದರ್ಶ ಗಂಡ! ಬಹಳ ಶಿಸ್ತಿನ ಗಂಡ! ವರದಕ್ಷಿಣೆ ಬೇಡ! ವರೋಪಚಾರ ಬೇಡವೇ ಬೇಡ! ಸರಯೂ ಕೆಲಸಕ್ಕೆ ಹೋಗೋದು ಬಿಡೋದು ಅವಳದ್ದೇ ನಿರ್ಧಾರ! ಗಂಡ ಹೆಂಡತಿ ಸರಿ ಸಮ! ತಾನು ಬಯಸಿದಂತಹ ಚೆನ್ನದಂತಹ ಗಂಡನನ್ನೇ ಪಡೆದುಕೊಂಡಿದ್ದಳು ಸರಯೂ. ಅಂತಹ ಆದರ್ಶವಾದಿ ಗಂಡ ಅವಳ ಕಣ್ಣೀರಿಗೆ ಹೇಗೆ ಕಾರಣ ಆಗಿರಬಹುದು?

'ನಾನು ಪದ್ಮಜಾಳಿಗೆ ಸುದ್ದಿ ಕಳಿಸ್ತೀನಿ, ಬೈ.'

ರಜಿನಿ ಸರಯೂ ಅಳುತ್ತಿದ್ದ ಸುದ್ದಿಯನ್ನು ಸುಧಾ, ವೇದಾ, ಪದ್ಮಾ, ರೆಹನಾ ಎಲ್ಲರಿಗೂ ಕಳುಹಿಸಿದಳು. ಗಂಡ, ಮಕ್ಕಳು ಸೊಸೆಯರಿಗೆಲ್ಲ ತಿಂಡಿ ಬಡಿಸಿ, ಡಬ್ಬಿ ಕಟ್ಟಿ ಕಳುಹಿಸಿ ಉಸ್ಸೆಂದು ಕುಳಿತಾಗ ಪದ್ಮಜಾ, ಭಾರತಿ, ದುರ್ಗಾ ಎಂದು ಮತ್ತೆ ಇತರ ಸ್ನೇಹಿತೆಯರ ಮೆಸೇಜ್ಗಳ ಪ್ರವಾಹ ಶುರುವಾಯಿತು.

ಕಡೆಗೆ ಎಲ್ಲರ ನಿರ್ಣಯ ಒಂದೇ ಆಗಿತ್ತು. ಮನಸ್ಸಲ್ಲಿ ಉತ್ಸಾಹವೂ ಹೊಮ್ಮಿತ್ತು.

ತಮ್ಮಂತಹ ಅದರಲ್ಲೂ ಸರಯೂಳಂತಹ ಗುಂಡುಕಲ್ಲುಗಳನ್ನ ಈ ವಯಸ್ಸಲ್ಲಿ ಕಣ್ಣೀರು ಹಾಕಿಸುವ ಶಕ್ತಿ ಒಂದೇ ಒಂದು ಆಯುಧಕ್ಕೆ ಮಾತ್ರ ಉಂಟು. ಆ ಆಯುಧದ ಹೆಸರು 'ಈರುಳ್ಳಿ'!

'ಖಂಡಿತ ಇವತ್ತು ಅವಳು ಈರುಳ್ಳಿ ಅಡುಗೆ ಮಾಡಿದ್ದಾಳೆ ಕಣ್ರೆ. ಅವಳು ಈರುಳ್ಳಿಯನ್ನ ಹೆಚ್ಚುವಾಗ ಕಣ್ಣೀರು ಸುರಿಸಿರ್ಬೇಕು! ನಾವೆಲ್ಲಾ ಇವತ್ತು ಊಟದ ಸಮಯಕ್ಕೆ ಅವಳ ಮನೆ ಸೇರೋಣ. ನಮ್ಮ ನಮ್ಮ ಮನೆ ಪದಾರ್ಥಗಳೊಂದಿಗೆ. ಸರಯೂ ಮಾಡಿರೋ ಈರುಳ್ಳಿ ಹುಳಿಯೋ ಪಲ್ಯವೋ ನಂಚಿಕೊಂಡು ಊಟ ಮಾಡೋಣ.'

ಈರುಳ್ಳಿಯ ಬೆಲೆ ಗಗನವನ್ನೂ ಸೀಳಿಕೊಂಡು ಮೇಲೇರಿರುವ ವೇಳೆಯಲ್ಲಿ, ಈರುಳ್ಳಿ ತಿನ್ನಲಾಗದ ಬೇಗೆಯಲ್ಲಿ ತತ್ತರಿಸುತ್ತಿರುವ ಸಮಯದಲ್ಲಿ ಸರಯೂ ಮನೆಯಲ್ಲಿ ಈರುಳ್ಳಿಯ ಅಡುಗೆ ಎಂಬ ವಿಷಯ ಹೊಟ್ಟೆಗೆ ಹಾಲೆರೆದಂತಿತ್ತು. ಸ್ನೇಹಿತೆಯರೆಲ್ಲ ಬಾಯಿ ಚಪ್ಪರಿಸಿಕೊಂಡು ಸಂಭ್ರಮದಿಂದ ಹೊರಟರು.

ಇಗೋ ಊಟದ ಸಮಯಕ್ಕೆ ಸರಿಯಾಗಿ ಸ್ನೇಹಿತೆಯರ ದಂಡು ಸರಯೂ ಮನೆಯ ಬಾಗಿಲಲ್ಲಿ ಹಾಜರ್!

ಬಾಗಿಲು ತೆರೆದ ಸರಯೂ ದಂಗಾದಳು!

''ಇದೇನ್ರೇ ಎಲ್ಲಾ ಒಟ್ಟಿಗೆ ಬಂದ್ರಿ?'' ಎಂದರೂ ಮುಖದಲ್ಲಿ ಸಂತೋಷದ ಸೂರ್ಯಕಾಂತಿ ಅರಳಿತು.

ಎಲ್ಲರೂ ಒಬ್ಬರ ಮುಖ ಒಬ್ಬರು ನೋಡಿಕೊಂಡರು. 'ಸರಯೂ ಅಳುವಂತದ್ದೇನೂ ಆಗಿಲ್ಲ. ಇಂದಿನ ಕಣ್ಣೀರು ಖಂಡಿತ ಈರುಳ್ಳಿಯ ಮಹಾತ್ಮೆಯಿಂದಲೇ' ಎಂದು ಖಚಿತವಾಯಿತು. ಮನಸ್ಸಿನಲ್ಲಿ ನೆಮ್ಮದಿ ಏರ್ಪಟ್ಟಿತು.

''ಏನಿಲ್ಲ ಕಣೆ! ಕಾಲೇಜಲ್ಲಿ ಮಾಡ್ತಿದ್ದ ಹಾಗೆ ಇವತ್ತು ಎಲ್ರೂ ಒಟ್ಟಿಗೆ ಊಟ ಮಾಡೋಣಾಂತ! ಎಲ್ರೂ ಊಟ ತಂದಿದ್ದೀವಿ! ಚಿತ್ರಾನ್ನ, ಪುಳಿಯೋಗರೆ, ಗೊಜ್ಜು, ಸಾರು, ಚಟ್ನಿ, ಬರಿ ಅನ್ನ, ಚಪಾತಿ, ಇನ್ನೂ ಬೇಕಾದಷ್ಟು ಡಿಷ್ಗಳು'' ಎಂದಳು ರಜಿನಿ.

''ಓ! ವಂಡರ್‌ಫುಲ್ ಐಡಿಯಾ!'' ಎನ್ನುತ್ತಾ ಎಲ್ಲರನ್ನೂ ಸ್ವಾಗತಿಸಿದಳು ಸರಯೂ.

''ನೀನೇನು ಈರುಳ್ಳಿ ಹುಳಿ ಮಾಡಿದ್ಯೋ ಇಲ್ಲ ಪಲ್ಯವೋ?'' ಎಲ್ಲರೂ ಆಸೀನರಾಗುವಷ್ಟರಲ್ಲಿ ತಡೆಯಲಾರದೆ ಕೇಳಿಬಿಟ್ಟಳು ರೆಹನ.

''ಈರುಳ್ಳಿ? ಅದೆಲ್ಲಿದೆ? ಮನೇಲೆ ಪಾಟಲ್ಲಿ ಬೆಳೆಸಿದ ಸೊಪ್ಪಿನ ಸಾರು ಮಾಡಿದ್ದೀನಷ್ಟೇ! ದೇಹ ಮನ ಪರ್ಸುಗಳ ಆರೋಗ್ಯಕ್ಕೆ ಅದೇ ಒಳ್ಳೇದಲ್ವೆ?''

''ಹಾ!'' ಸ್ನೇಹಿತೆಯರಿಗೆ ಸಿಡಿಲು ಬಡಿದಂತಾಯಿತು.

''ಮತ್ತೆ ಯಾಕೆ ಬೆಳಿಗ್ಗೆ ಕಣ್ಣೀರು ಹಾಕಿದ್ಯಂತೆ?'' ರಜಿನಿ ಆಶ್ಚರ್ಯದಿಂದ ಪ್ರಶ್ನಿಸಿದಳು.

''ಯಾರೇ ಹೇಳಿದ್ದು ನಾನು ಕಣ್ಣೀರು ಹಾಕ್ದೇಂತ?''

''ನಮ್ಮ ಯಶೋದ!''

''ಓ! ಯಶೋದಾ. ಹಾಟ್ ನ್ಯೂಸ್.ಕಾಂ. ಮಾಡಿದ ಕೆಲಸವೇ ಇದು? ಅವಳ ಮುಂದೆ ಕಣ್ಣೀರು ಹಾಕ್ಬಾರ್ದೂಂತ ಎಷ್ಟೋ ತಡಕೊಂಡೆ. ಅಂತೂ ನೋಡೇ ಬಿಟ್ಳಲ್ಲ ತಾಟಕಿ!'' ಎಂದಳು ಸರಯೂ ಸಂಕೋಚದಿಂದ.

''ಓ! ಅಂದ್ರೆ ಅತ್ತಿದ್ದೀಯ ಅಂತಾಯಿತು! ಯಾಕೆ? ಏನೇ?''

ಸ್ನೇಹಿತೆಯರ ಸಹಾನುಭೂತಿ ಸರಯೂಳ ಮನ ಕರಗಿಸಿ ಬಾಯಿ ಬಿಡಿಸಿತು.

''ನೋಡ್ರೆ ಮತ್ತೆ! ನಿನ್ನೆ ತರಕಾರಿ ತರೋವಾಗ ನಾನು ಹಾಕಿಸ್ಕೊಂಡ ನೂರೆ ನೂರು ಗ್ರಾಂ ಈರುಳ್ಳಿಯನ್ನ ಇವ್ರು ಬೇಡ ಅಂತ ತೆಗೆದಿಟ್ರು. ಅದೇನು ಶಿಸ್ತೋ ಅದೇನು ಆದರ್ಶವೋ? ಎಷ್ಟು ಬೆಲೆಯಾದ್ರೂ ಕೊಟ್ಟು ಕೊಳ್ಳಕ್ಕೆ ಗ್ರಾಹಕರು ತಯಾರಾಗಿದ್ರೆ ಬೆಲೆ ಯಾಕೆ ಕಡಿಮೆಯಾಗತ್ತೆ ಅನ್ನೋದು ಅವರ ವಾದ. ದುಬಾರಿ ವಸ್ತುಗಳನ್ನ ಎಲ್ರೂ ಬಹಿಷ್ಕರಿಸಿದ್ರೆ ಏರಿದ ಬೆಲೆ ತಾನಾಗಿಯೇ ಇಳಿಯತ್ತಂತೆ! ಇವರು ಮಾತ್ರ ಪ್ರತಿ ನಿತ್ಯ ಆಫೀಸಿನಲ್ಲಿ ಈ ಮೀಟಿಂಗು ಆ ಕಾನ್ಫರೆನ್ಸು ಅಂತ ಪಂಚತಾರಾ ಹೋಟೆಲ್ಗಳಲ್ಲಿ ರುಚಿ ರುಚಿ ಈರುಳ್ಳಿ ಊಟ ಸಕತ್ತಾಗಿ ಹೊಡ್ಕೊಂಡ್ ಬರ್ತಾರೆ. ನನಗೋ ಈರುಳ್ಳಿ ತಿನ್ನದೇ ನಾಲಿಗೆ ಸತ್ತೇ ಹೋಗಿದೆ. ಇವತ್ತು ಸೊಪ್ಪಿನ ಹುಳಿ ಮಾಡಿ ಊಟಕ್ಕೆ ಯಾವಾಗ ಬರ್ತೀರಿ ಅಂದಿದ್ದಕ್ಕೆ, ಬಾಸ್ ಜೊತೆ ಹೊರಗೆ ಊಟ ಅಂದ್ರು. ನನಗಂತೂ ಎಷ್ಟು ರೇಗಿತು ಗೊತ್ತೇ?'' ಸುರು ಸುರು ಮೂಗೆಳೆದುಕೊಳ್ಳುತ್ತಾ ಪೂರಾ ವೃತ್ತಾಂತವನ್ನು ಹೇಳಿ ಮುಗಿಸಿದಳು ಸರಯೂ.

''ಓ! ಅಂದ್ರೆ ರೋಷದ ಕಣ್ಣೀರು ಹಾಕ್ದೆ ಅನ್ನು!''

''ನಾವು ಅಂದುಕೊಂಡ ಹಾಗೆ ಇಲ್ದಿದ್ರೂ, ನೋಡು ನಿನ್ನ ಕಣ್ಣೀರಿಗೆ ಈರುಳ್ಳಿಯೇ ಕಾರಣವಾಯ್ತಲ್ಲ.''

''ಹೋಗ್ಲಿ ಬಿಡು! ಈರುಳ್ಳಿ ಇಲ್ದೆ ರುಚಿ ಅಡುಗೆ ಆಗಲ್ವೇನು? ನಾವೆಲ್ಲಾ ಅಂತದ್ದೇ ತಂದಿದ್ದೀವಿ!'' 'ಛೀ ಛೀ! ಈ ದ್ರಾಕ್ಷಿ ಹುಳಿ' ಎಂದ ನರಿಯಂತೆ, ಗಗನ ಕುಸುಮವಾಗಿ ಹೋದ ಈರುಳ್ಳಿಗೆ ಹಿಡಿ ಶಾಪ ಹಾಕುತ್ತಾ ಸ್ನೇಹಿತೆಯರೆಲ್ಲ ಸೇರಿ ಸರಯೂಳನ್ನು ಸಂತೈಸಿದರು.

''ಸರಿ ಬಿಡಿ! ನಾನು ಮೊಸರನ್ನು ಕಲಿಸ್ತೀನಿ! ಆಮೇಲೆ ಎಲ್ರೂ ಊಟ ಮಾಡೋಣ'' ಎಂದು ಎದ್ದಳು ಸರಯೂ.

ಸ್ವಲ್ಪ ಹೊತ್ತಲ್ಲೇ ಸರಯೂ ಮನೆಯ ಊಟದ ಮೇಜನ್ನು ಸ್ನೇಹಿತೆಯರು ತಂದಿದ್ದ ರುಚಿ ರುಚಿ ಪದಾರ್ಥಗಳು ಅಲಂಕರಿಸಿದವು.

ಸರಯೂ ಕಲಸಿಟ್ಟ ಮೊಸರನ್ನದ ಡಬ್ಬಿ! ಬಟ್ಟಲು ತುಂಬಾ ಮಿಡಿ ಮಾವಿನಕಾಯಿ! ಕಾಲೇಜು ದಿನಗಳಲ್ಲಿ ಈ ಮೊಸರನ್ನಕ್ಕೂ ಮಿಡಿ ಮಾವಿನ ಕಾಯಿಗೂ ಸ್ನೇಹಿತೆಯರೆಡೆ ಅದೆಷ್ಟು ಪೈಪೋಟಿ! ನಂತರ ಸರಯೂ ಎರಡೆರಡು ಡಬ್ಬಿಗಳಲ್ಲಿ ಮೊಸರನ್ನ ತರಲು ಶುರು ಮಾಡಿದ್ದಳು! ಈ ಮೊಸರನ್ನದ ಮುಂದೆ ಈರುಳ್ಳಿ ಏನ್ ಮಹಾ ಈರುಳ್ಳಿ? ಎಲ್ಲರೂ ನಗು ನಗುತ್ತ ಮಾತನಾಡುತ್ತ ಊಟ ಮಾಡತೊಡಗಿದಾಗ ಹಿಂದೊಂದು ಕಾಲದಲ್ಲಿ ಕಾಲೇಜಿನ ಹೆಮ್ಮರದ ಕೆಳಗೆ ಕುಳಿತು ತಮ್ಮ ತಮ್ಮ ಊಟಗಳನ್ನು ಹಂಚಿಕೊಂಡು ತಿಂದ ಚೆಲ್ಲಾಟದ ಹುಡುಗಿಯರಂತೆಯೇ ಈಗಲೂ ವರ್ತಿಸಿದರು.

ಸರಯೂ ಮತ್ತೆ ಎದ್ದು ಹೋಗಿ ಅದೇನನ್ನೋ ತಂದಳು.

''ಏನೇ ಅದು?''

''ದೋಸೆ ಹುಯ್ಯುವ ಮುನ್ನ ಹೆಂಚು ಉಜ್ಜಕ್ಕೋಸ್ಕರ ಕತ್ತರಿಸಿ ಇಟ್ಟ ಈರುಳ್ಳಿ ತುಂಡು. ಫ್ರಿಜ್ಜಲ್ಲಿತ್ತು! ಇದನ್ನು ಟೇಬಲ್ ಮಧ್ಯದಲ್ಲಿಡ್ತೀನಿ. ಈರುಳ್ಳಿ ವಾಸನೆ ಕುಡ್ಕೊಂಡು ಸಕ್ಕತ್ ಭೋಜನ ಮಾಡೋಣ. ಯಾರಿಗೆ ಸಿಗಬೇಕು ಇಂಥಾ ಅನುಭವ?''

ಸ್ನೇಹಿತೆಯರೆಲ್ಲಾ ಸೇರಿ ಗೊಳ್ಳೆಂದು ನಕ್ಕಾಗ ಆ ಮನೆಯೇ ಅದುರಿತು.

ಸರಯೂ ಎಂದಿಗೂ ಅದೇ ಹುಡುಗಾಟದ ಹುಡುಗಿಯೇ!

☆

---

## ಈಗಲೇ ಬಿಡಲಾರೆ

ಆತ್ಮೀಯ ಗೆಳತಿಯರು ಆಗಾಗ ಭೇಟಿ ಮಾಡಿ ಕಷ್ಟ-ಸುಖ ಹಂಚಿಕೊಳ್ಳೋದು ಮಾಮೂಲಿ. ಆದರೆ ರೇಖ ಮತ್ತು ಗೀತ ಬಹಳ ತಿಂಗಳುಗಳ ಕಾಲ ಭೇಟಿಯಾಗಲು ಆಗಲಿಲ್ಲ. ನಂತರ ಅವರಿಬ್ಬರ ನಡುವೆ ಭೇಟಿಯಾದಾಗ ರೇಖ ಗೀತಳನ್ನು ನೋಡಿ ಕೇಳಿದಳು.

**ರೇಖ** : ಏಯ್ ಗೀತ ಇದೇನೇ ಈಪಾಟಿ ಸಣ್ಣಗಾಗಿ ಹೋಗಿದೀಯ ಏನಾಯ್ತೇ?

**ಗೀತ** : ನನಗೆ ನನ್ನ ಗಂಡನ ಜೊತೆ ಏಗಿ ಏಗಿ ಸಾಕಾಗಿದೆ. ದಿನಾ ಜಗಳ ಕದನ. ನನ್ನ ತೂಕ 10 ಕಿಲೋ ಕಡಿಮೆ ಆಗಿದೆ.

**ರೇಖ** : ಅಷ್ಟೊಂದು ತೊಂದರೆಯಾದರೆ ಗಂಡನ್ನ ಬಿಟ್ಟುಬಿಡೇ.

**ಗೀತ** : ಇಲ್ಲ ಇಲ್ಲ.. ಸಧ್ಯಕ್ಕಂತೂ ಸಾಧ್ಯವಿಲ್ಲ ಏಕೆಂದರೆ ನಾನು ಇನ್ನೂ 5 ಕಿಲೋ ಕಡಿಮೆ ಆಗಬೇಕಿದೆ.

# ಮಾತಿನ ಮಹತ್ತು

**- ಬೇಲೂರು ರಾಮಮೂರ್ತಿ**

ಅದೊಂದು ಐದು ಜನರ ಗುಂಪು. ಎಲ್ಲರೂ ಎಪ್ಪತ್ತರ ಹೊಸಿಲಿನಲ್ಲಿರುವವರು. ಬದುಕಿನಲ್ಲಿ ನಾನಾ ಅನುಭವಗಳನ್ನು ಗಳಿಸಿ ಇಲ್ಲಿಯವರೆಗೂ ಬಂದಿರುವವರು. ಸುಮಾರು ಹದಿನೈದು ವರ್ಷಗಳಿಂದ ಆ ಐದೂ ಜನರೂ ದಿನಾ ಬೆಳಗ್ಗೆ ಮತ್ತು ಸಾಯಂಕಾಲ ನಡಿಗೆಗೆಂದು ಹತ್ತಿರದ ಉದ್ಯಾನಕ್ಕೆ ಬರುತ್ತಾರೆ. ಅಲ್ಲಿ ಅವರದೇ ಒಂದು ಬೆಂಚಿದೆ. ಅವರೆಲ್ಲರೂ ಅದರಲ್ಲಿಯೇ ಕೂರುವುದು. ಬೇರೆ ಯಾರಾದರೂ ಆ ಬೆಂಚಿನ ಮೇಲೆ ಕೂತಿದ್ದರೆ ಇವರುಗಳನ್ನು ಕಂಡರೆ ಜಾಗ ಬಿಟ್ಟುಕೊಡುತ್ತಾರೆ. ಕಾಲ ಕಳೆಯಲು ಅವರೆಲ್ಲ ತುಂಬಾ ಮಾತಾಡುತ್ತಾರೆ. ಅವರುಗಳು ಸೇರಿದರೆಂದರೆ ಅಲ್ಲಿ ನಗುವೇ ಪ್ರಾಧಾನ್ಯ. ಇರುವಷ್ಟು ಹೊತ್ತೂ ನಕ್ಕೂ ನಕ್ಕೂ ಸುಸ್ತಾಗಿ ಮನೆಗೆ ಹೋಗ್ತಾರೆ. ಅವರ ಪೈಕಿ ಸುಬ್ಬನರಸಿಂಹಯ್ಯ ಮಾತ್ರ ಕಡಿಮೆ ಮಾತಾಡೋದು. ಮಿಕ್ಕವರು ಸ್ಪರ್ಧೆಗೆ ಬಿದ್ದವರಂತೆ ಮಾತಾಡುತ್ತಾರೆ, ನಗುತ್ತಾರೆ, ತಮಾಷೆ ಮಾಡುತ್ತಾರೆ. ಅವರುಗಳ ಪೈಕಿ ಒಂದು ಒಪ್ಪಂದ ಆಗಿದೆ. ಏನೆಂದರೆ ಅವರುಗಳು ಮಾತಾಡುವಾಗ ತಮ್ಮ ಹೆಂಡತಿ, ಮಗ, ಮಗಳು, ಸೊಸೆ, ಮೊಮ್ಮಕ್ಕಳು, ನೆಂಟರು ಇವರುಗಳ ಬಗೆಗೆ ಯಾವುದೇ ಕಾರಣಕ್ಕೂ ಕೆಟ್ಟದಾಗಿ ಮಾತಾಡಬಾರದು. ಕೇವಲ ಒಳ್ಳೆಯದನ್ನು ಮಾತ್ರ ಮಾತಾಡಬೇಕು. ಮಿಕ್ಕಿದ್ದನ್ನು ಬಿಟ್ಟುಬಿಡಬೇಕು ಅಂತ. ಸೊಸೆ ಕಾಫಿ ಕೊಡೋದು ತಡ ಮಾಡಿದಳು, ಹೆಂಡತಿ ನನ್ನ ಕಡೆ ಗಮನವೇ ಕೊಡೋಲ್ಲ ಈ ರೀತಿಯ ಮಾತುಗಳಿಗೆ ಅವರಲ್ಲಿ ಆಸ್ಪದವಿಲ್ಲ. ಅವರವರಿಗೆ ಬರುವಂಥಾ ಎಲ್ಲಾ ಸಂದರ್ಭ ಸನ್ನಿವೇಶಗಳನ್ನೂ ಸಂತೋಷದಿಂದಲೇ ಸ್ವೀಕರಿಸಿ ಬದುಕಬೇಕು ಅಂತ ಅವರು ಅಂದುಕೊಂಡಿದ್ದಾರೆ. ಹೀಗಾಗಿ ಅಲ್ಲಿ ಅವರೆಲ್ಲ ಮಾತಾಡುವಾಗ ಅವರ ಸಂಬಂಧಿಕರ ಬಗೆಗೆ ಒಳ್ಳೆಯ ಮಾತುಗಳನ್ನೇ ಆಡುತ್ತಾರೆ ಇಲ್ಲವೇ ರಾಜಕೀಯ ನಾಯಕರನ್ನು ಬೈಯುತ್ತಾರೆ.

ಅವರುಗಳ ಪೈಕಿ ಕೃಷ್ಣಾನಂದ ಸ್ವಾಮಿ ಸ್ವಲ್ಪ ತರಲೆ. ಅವರಿವರ ಕಾಲು ಎಳೆಯೋದರಲ್ಲಿ ನಿಸ್ಸೀಮ. ಆದರೆ ಅವರು ತಮ್ಮ ಮಿತಿಯಲ್ಲಿರುತ್ತಾರೆ. ಮಾತಿನಲ್ಲಿ ಪೋಲಿ ಅನ್ನಲಾಗದಿದ್ದರೂ ಎಪ್ಪತ್ತರ ಆಸುಪಾಸಿನಲ್ಲಿರುವಷ್ಟು ರಸಿಕತೆ ಇದೆ. ನೋಡ್ರಯ್ಯಾ ಹೀಗಿದ್ರೆ ನಮಗೆ ಬದುಕೋಕೆ ಆಸಕ್ತಿ ಇರುತ್ತೆ ಅಂತಾರೆ. ಮಿಕ್ಕ ನಾಲ್ಕು ಜನರೂ ಸುಬ್ಬನರಸಿಂಹನನ್ನು ಹೆಚ್ಚು ಮಾತಾಡುವಂತೆ ಪ್ರೇರೇಪಿಸಿದರೂ ಅವರು ಇವತ್ತು ನಮ್ಮನ್ಲಿ ಅವರೇಕಾಳು ರೊಟ್ಟಿ ನಿಮ್ಮ ಹೊಟ್ಟೆಗೆ ಆಗಲ್ಲ ಅಂತ ನನ್ನ ಸೊಸೆ ಒಂದೇ ರೊಟ್ಟಿ ಕೊಟ್ಟಳು ಅಂದುಬಿಟ್ಟರೆ ಅದೇ ಒಂದು ವಾರದ ಮಾತಾಯಿತು. ಆದರೆ ಸುಬ್ಬನರಸಿಂಹ ಯಾವಾಗಲೂ ಯೋಚನೆಯಲ್ಲೇ ಇರುತ್ತಾರೆ.. ಏನೋ ಮಾತಾಡಬೇಕು ಎನ್ನುವ ಆತುರ.

ಮಿಕ್ಕವರು ಮಾತಾಡಿದ್ದಕ್ಕೆ, ತಮಗೆ ಗೊತ್ತಿಲ್ಲದಿರುವ ವಿಷಯವಾದರೂ ಹೌದು ಹೌದು ಅನ್ನುತ್ತಿರುತ್ತಾರೆ. ಆಗಾಗ ಒಂದು ನಿಟ್ಟುಸಿರುಬಿಡುತ್ತಿರುತ್ತಾರೆ.

ಅವರುಗಳು ಭೇಟಿ ಮಾಡಿದ ಒಂದು ದಿನ ಸುಬ್ಬನರಸಿಂಹ ಬಹಳ ಖುಷಿಯಲ್ಲಿದ್ದರು. ಉದ್ಯಾನಕ್ಕೆ ಬಂದವರೇ ಎಲ್ಲರನ್ನೂ ಕೈ ಕುಲುಕಿ ಮಾತಾಡಿಸಿದರು. ''ಇವತ್ತು ನಾನು ನಿಮಗೆಲ್ಲರಿಗೂ ತಿಂಡಿ ಕಾಫಿ ಕೊಡಿಸ್ತೀನಿ. ನನಗೆ ಇವತ್ತು ತುಂಬಾ ಖುಷಿಯಾಗಿದೆ, ಖುಷಿಯ ಹಿಂದೆ ಬೇಜಾರೂ ಇದೆ. ಇರ್ಲಿ ಪರವಾಗಿಲ್ಲ ಅಂದರು. ಖುಷಿಗೆ ಸಂತೋಷಕ್ಕೆ ಕಾರಣವೇನು ಅಂತ ಕೇಳಿದರೆ ಈಗಲ್ಲ, ನೀವೆಲ್ಲಾ ತಿಂಡಿ ತಿಂದಾದ ಮೇಲೆ ಹೇಳ್ತೀನಿ'' ಅಂದರು. ಹತ್ತಿರವೇ ಇದ್ದ ಹೋಟೆಲಿಗೆ ಎಲ್ಲರನ್ನೂ ಕರೆದುಕೊಂಡು ಹೋದರು. ''ನೋಡ್ರಪ್ಪಾ ಯಾರ್‍ಯಾರಿಗೆ ಏನೇನು ಇಷ್ಟವೋ ಎಲ್ಲವನ್ನೂ ತಿನ್ನಿ ಆದರೆ ನಿಮ್ಮ ಆರೋಗ್ಯ ಗಮನದಲ್ಲಿಟ್ಟುಕೊಂಡು ತಿನ್ನಿ'' ಅಂದರು. ಹೀಗಾಗಿ ಯಾರ್‍ಯಾರಿಗೆ ಏನೇನು ಬೇಕೋ ಎಲ್ಲಾ ತಿಂದರು. ಅವರೆಲ್ಲರಿಗೂ ಈ ಸುಬ್ಬನರಸಿಂಹನ ಖುಷಿಗೆ ಕಾರಣವೇನು ಅಂತ ತಿಳಿಯೋ ಆತುರ.

ಮತ್ತೆ ಎಲ್ಲರೂ ಉದ್ಯಾನಕ್ಕೆ ಬಂದರು. ''ಸರಿ ಕಾಫಿ ತಿಂಡಿ ಎಲ್ಲಾ ಆಯ್ತಲ್ಲ ಈಗಲಾದರೂ ನಿನ್ನ ಖುಷಿಗೆ ಕಾರಣ ಹೇಳು'' ಅಂತ ಎಲ್ಲರ ಪರವಾಗಿ ಸೋಮೇಶ್ವರಯ್ಯ ಕೇಳಿದರು. ಆಗ ಸುಬ್ಬನರಸಿಂಹ ಕರ್ಚೀಫಿನಿಂದ ಮುಖ ಒರೆಸಿಕೊಂಡು ಬಹಳ ಕಷ್ಟಪಟ್ಟು ''ನೆನ್ನೆ ನನ್ನ ಮಗ ನನ್ನನ್ನು ಮಾತಾಡಿಸಿದ'' ಅಂದರು ಅದಕ್ಕೆ ಗೋವಿಂದಪ್ರಭು ''ಅಯ್ಯೋ ರಾಮಚಂದ್ರ, ನೀನೂ ನಿನ್ನ ಮಗ ಎಲ್ಲಾ ಒಂದೇ ಮನೇಲಲ್ವಾ ಇರೋದು ಮಗ ಮಾತಾಡಿಸಿದರೆ ಅದರಲ್ಲೇನು ಹೆಚ್ಚುಗ್ಗಾರಿಕೆ, ಅದ್ಯಾಕ್ಕಿಂಥಾ ಖುಷಿ'' ಅಂತ ಕೇಳಿದರು. ಮತ್ತೆ ಸುಬ್ಬನರಸಿಂಹ ಮಾತಾಡಲು ಕಷ್ಟಪಟ್ಟು ''ಅವನು ನನ್ನ ಜೊತೆ ಮಾತಾಡಿ ಒಂದೂವರೆ ವರ್ಷ ಆಗಿತ್ತು. ನಾನು ಮಾತಾಡಿಸಿದರೂ ಅವನು ಮಾತಾಡುತ್ತಿರಲಿಲ್ಲ. ಏನಿದ್ರೂ ಎಲ್ಲಾ ಸೊಸೆ ಮುಖಾಂತರವೇ. ಅದೂ ಎಷ್ಟು ಬೇಕೋ ಅಷ್ಟೇ. ಅವನ ಬೇಜಾರಿಗೆ ನಾನು ಹೇಗೆ ಕಾರಣ ಅಂತ ಗೊತ್ತಾಗಿರಲಿಲ್ಲ. ಆದರೆ ನೆನ್ನೆ ಮಾತಾಡಿಸಿದನಲ್ಲ ನನಗೆ ಅದೇ ಸಂತೋಷ'' ಅಂದು ಕಣ್ಣೊರೆಸಿಕೊಂಡರು. ಆಗಲೇ ಮಿಕ್ಕವರಿಗೆಲ್ಲಾ ಪಾಪ ಈ ಸುಬ್ಬನರಸಿಂಹ ಎಷ್ಟೊಂದು ಬೇಜಾರಲ್ಲಿದ್ದ ಅಂತ ಗೊತ್ತಾಗಿದ್ದು. ಒಂದೈದು ನಿಮಿಷ ಯಾರೂ ಮಾತಾಡಲಿಲ್ಲ.

ಚಂದ್ರಶೇಖರಪ್ಪ ಸುಬ್ಬನರಸಿಂಹನ ಬೆನ್ನ ಮೇಲೆ ಕೈ ಹಾಕಿ ''ಅದಕ್ಕೇ ಹೇಳೋದು ನಮಗೂ ಒಳ್ಳೇ ಕಾಲ ಬಂದೇ ಬರುತ್ತೆ ನಾವು ತಾಳ್ಮೆಯಿಂದ ಇರಬೇಕು ಅಂತ. ನಿನ್ನ ಮಗ ನಿನ್ನನ್ನು ಮಾತಾಡಿಸಿದ್ನಲ್ಲ ಇನ್ನೇನು ಚಿಂತೆ ನಿನಗೆ. ಹೋಗಲಿ ಅವನು ನಿನ್ನನ್ನು ಏನಂತ ಮಾತಾಡಿಸಿದ'' ಅಂತ ಕೇಳಿದರು. ಸುಬ್ಬನರಸಿಂಹ ಎಲ್ಲರ ಕಡೆಯೂ ಒಮ್ಮೆ ನೋಡಿದರು. ನಂತರ ತಲೆ ಕೆಳಗೆ ಹಾಕಿದರು. ಗಂಟಲು ತುಂಬಿದ ಹಾಗಾಗಿತ್ತು. ಒಂದು ಸಾರಿ ಬಾಯಿ ಒರೆಸಿಕೊಂಡು ''ನನ್ನ ಮಗ ಏನು ಹೇಳಿದ ಅಂದ್ರೆ, ನಿನ್ನನ್ನು ಮನೇಲಿ ಇಟ್ಕೊಳ್ಳೋದು ಕಷ್ಟ ಆಗಿದೆ. ಅದಕ್ಕೆ ನಿನಗೊಂದು ಪ್ರಬುದ್ಧಾಲಯ ನೋಡಿದ್ದೀನಿ. ಅಲ್ಲಿ ನಿನ್ನನ್ನು ಎಲ್ಲರೂ

ಚೆನ್ನಾಗಿ ನೋಡ್ಕೊತಾರೆ. ನಾಡಿದ್ದು ಅಲ್ಲಿಗೆ ಹೋಗೋಣ. ನಿನ್ನ ಪದಾರ್ಥಗಳನ್ನು ತೆಗೆದಿರಿಸಿಕೋ ನಾನೇ ನಿನ್ನನ್ನು ಬಿಟ್ಟು ಬರ್ತೀನಿ'' ಅಂದ. ಇಷ್ಟು ಹೇಳಿ ಮುಗಿಸಿದ ಸುಬ್ಬನರಸಿಂಹ ಅವರಿಗೆ ಅಳು ತಡೆಯಲಾಗಲಿಲ್ಲ. ಮಿಕ್ಕವರಿಗೂ ಒಂದು ಷಾಕ್ ಹೊಡೆದಂತೆ ಸುಮ್ಮನೇ ಕೂತುಬಿಟ್ಟರು. ನೀರು ತುಂಬಿದ ಕಣ್ಣುಗಳಿಂದ ಸ್ನೇಹಿತರನ್ನೆಲ್ಲಾ ನೋಡಿದ ಸುಬ್ಬನರಸಿಂಹ ''ಮಗ ಮಾತಾಡಿಸಿದ ಎನ್ನೋ ಖುಷಿಗೆ ನಿಮಗೆಲ್ಲಾ ತಿಂಡಿ ಕಾಫಿ ಕೊಡಿಸಿದೆ. ಈಗ ಅನಿಸ್ತಾ ಇದೆ ಅವನು ಮಾತಾಡಿಸದೇ ಇದ್ದಿದ್ದರೇ ಚೆನ್ನಾಗಿರೋದು ಅಂತ. ಏನು ಮಾಡೋದು. ಈ ವಯಸ್ಸಿನಲ್ಲಿ ನಮಗೇನಾದರೂ ಆಯ್ಕೆಗಳಿವೆಯೇ'' ಎಂದರು. ಅವರ ಮಾತು ಕೇಳಿದ ಮಿಕ್ಕವರಿಗೆ ಏನು ಮಾತಾಡೋದು ಅನ್ನೋದೇ ಗೊತ್ತಾಗಲಿಲ್ಲ. ನಾವು ಇನ್ನು ಮೇಲೆ ಒಬ್ಬ ಸ್ನೇಹಿತನನ್ನು ಕಳೆದುಕೊಳ್ಳುತ್ತಿದ್ದೀವಿ ಅಂತ ಮಾತ್ರ ಅರ್ಥವಾಯಿತು.

ಎಲ್ಲರಿಗೂ ಅಚ್ಚರಿಯಾಗುವಂತೆ ಸುಬ್ಬನರಸಿಂಹ ನಕ್ಕರು. ಕಣ್ಣೊರೆಸಿಕೊಂಡರು ''ಜೀವನದಲ್ಲಿ ನಾನು ಯಾವುದಕ್ಕೂ ಹೆದರಿಲ್ಲ ಕಣ್ರಯ್ಯ. ಇದಕ್ಕೂ ಹೆದರಲ್ಲ. ಇರೋದರಲ್ಲಿ ಸಂತೋಷ ಕಾಣೋನು ನಾನು. ಪ್ರಬುದ್ಧಾಲಯದ ಬಗೆಗೆ ಕೇಳಿದೀನಿ. ಅಲ್ಲಿಯೂ ನನ್ನಂಥ ಅನೇಕರು ಇರ್ತಾರೆ. ಅವರ ಜೊತೆ ಇರ್ತೀನಿ. ಅವರೊಳಗೊಂದಾಗ್ತೀನಿ. ಅಲ್ಲೇ ಸುಖ ಕಾಣ್ತೀನಿ. ನಾವು ಯಾವ ಸ್ಥಿತೀಲಿರ್ತೀವೋ ಅದರಲ್ಲೇ ಸುಖ ಕಾಣೋದೇ ಬದುಕಲ್ವೇ. ಆದರೆ ನಿಮ್ಮನ್ನೆಲ್ಲಾ ಬಿಟ್ಟು ಹೋಗಬೇಕಲ್ಲ ಅನ್ನೋದೇ ಬೇಜಾರು. ಆದರೇನಂತೆ ತಿಂಗಳಿಗೊಂದು ಸಾರಿ ಇಲ್ಲಿಗೆ ಬರ್ತೀನಿ. ನೀವೆಲ್ಲ ತಿಂಗಳಿಗೊಂದು ಸಾರಿ ಪ್ರಬುದ್ಧಾಲಯಕ್ಕೆ ಬನ್ನಿ ಏನಂತೀರ ಅಂದರು. ಮಿಕ್ಕವರಿಗೆ ಮಾತಾಡೋಕೆ ಆಗಲೇ ಇಲ್ಲ. ಪಾರ್ಕಿನ ಹೊರಗಡೆ ಯಾರೋ ಕೂಗುತ್ತಿದ್ದರು. ಯಾರನ್ನು ಯಾರು ಕೂಗುತ್ತಿದ್ದಾರೆ ಅಂತ ಎಲ್ಲರೂ ನೋಡಿದಾಗ ಯಾರೋ ಒಬ್ಬರು ನಿಮ್ಮಲ್ಲಿ ಸುಬ್ಬನರಸಿಂಹ ಯಾರು, ನಿಮ್ಮ ಮಗ ಬಂದಿದಾರೆ ಕರ್ಕೊಂಡು ಹೋಗೋಕೆ ಅಂದರು. ನನಗಿಂತ ನನ್ನ ಮಗನಿಗೇ ಅರ್ಜೆಂಟಾಗಿದೆ ಬರ್ತೀನ್ರಯ್ಯಾ ಅಂದು ಸುಬ್ಬನರಸಿಂಹ ಹೊರಟೇಹೋದಾಗ ಮಿಕ್ಕ ನಾಲ್ವರೂ ಅಳದೇ ಬೇರೆ ದಾರಿ ಇರಲೇ ಇಲ್ಲ. ಇವತ್ತು ಸುಬ್ಬನರಸಿಂಹ ನನ್ನ ಸರದಿ ಯಾವಾಗ ಅನ್ನೋ ಚಿಂತೆ ಎಲ್ಲರ ಮನದಲ್ಲೂ ಮೂಡದೇ ಇರಲಿಲ್ಲ.

☆

**ಪೇಚಾಟ**

ಎಲ್ಲರೂ ಮಾಡ್ತಾರಲ್ಲಾ ಅಂತ ಗುಂಡ ತಾನೂ ಬ್ಯಾಂಕಿನಿಂದ ಸಾಲ ಪಡೆದು ಕಾರು ಕೊಂಡ. ಕಾರು ಕೊಂಡ ಮೇಲೆ ಸುಮ್ಮನೇ ಇರೋಕೆ ಆಗುತ್ಯೇ. ಅಲ್ಲಿ ಇಲ್ಲಿ ಸುತ್ತೋದು, ಅದರ ಪೆಟ್ರೋಲ್ ಖರ್ಚು, ರಿಪೇರಿ ಖರ್ಚು, ಕಂತಿನ ಖರ್ಚು ಎಲ್ಲಾ ಜಾಸ್ತಿಯಾಗ್ತಾ ಬಂತು. ಹೀಗಾಗಿ ಬ್ಯಾಂಕಿಗೆ ಕಂತು ಕಟ್ಟೋದೂ ತಡವಾಗ್ತಾ ಬಂದು ಕಡೆಗೆ ಅದು ನಿಂತೇ ಹೋಯ್ತು. ಬ್ಯಾಂಕಿನವರು ನೋಟೀಸ್ ಕೊಟ್ಟೂ ಕೊಟ್ಟೂ ಸಾಕಾಗಿ ಒಂದು ದಿನ ಬ್ಯಾಂಕಿನವರು ಬಂದು ಕಾರು ವಶಪಡಿಸಿಕೊಂಡರು. ಗುಂಡನಿಗೆ ಬೇಜಾರಾಗೋ ಬದಲು ಪೇಚಾಟವಾಯಿತು. ಯಾಕಪ್ಪಾ ಅಂತ ಸ್ನೇಹಿತರು ಕೇಳಿದ್ದಕ್ಕೆ ಗುಂಡ. ಅಯ್ಯೋ! ಹೀಗೇ ಎಂದು ಗೊತ್ತಿದ್ದರೆ ನಾನು ನನ್ನ ಮದುವೆಗೆಂದು ಅದೇ ಬ್ಯಾಂಕಿನಿಂದ ಸಾಲ ಪಡೆಯುತ್ತಿದ್ದೆ ಎಂದ.

## ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

**- ದಂನಆ**

- ನಾವು ಯಾರೂ ಸತ್ಯ ಹರಿಶ್ಚಂದ್ರರಲ್ಲ ಆದರೆ ನಕ್ಷತ್ರಿಕರಾಗಬಾರದು.
- ಬೇರೆಯವರು ತಿನ್ನುವ ಆಹಾರ ನಾವು ಜೀರ್ಣಿಸಿಕೊಳ್ಳಲಾಗದಿದ್ದರೆ ನಮ್ಮಲ್ಲಿ ಏನೋ ಐಬು ಇದೆ ಎಂದರ್ಥ.
- ಹೊಲದಲ್ಲಿ ನಿಂತ ಬಾಲಕ ಮೇಲೆ ಹಾರುವ ವಿಮಾನವನ್ನು ನೋಡಿದಾಗ ದೂರದೂರಿನ ಕನಸು ಕಂಡರೆ ಅದರಲ್ಲಿ ಕೂತಿರುವ ಪಯಣಿಗ ಮನೆ ತಲುಪುವ ಧಾವಂತದಲ್ಲಿರುತ್ತಾನೆ.
- ತಮ್ಮ ಆಹಾರಕ್ಕಾಗಿ ಇತರ ಪ್ರಾಣಿಗಳನ್ನು ತಿನ್ನದಿರುವ ಪ್ರಾಣಿಗಳನ್ನೇ ಮನುಷ್ಯ ತನ್ನ ಆಹಾರವನ್ನಾಗಿ ಮಾಡಿಕೊಂಡಿದ್ದಾನೆ.

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- ತಾಜ್‌ಮಹಲ್ ಮಮತಾಜ್‌ಮಹಲ್ ಆಗುವುದಿಲ್ಲ!
- ನೆವೆರ್ ಡು ಎನಿಥಿಂಗ್ ಯುವರ್‌ಸೆಲ್ಫ್ ದಟ್ ಅದರ್ಸ್ ಕೆನ್ ಡು ಫಾರ್ ಯು.
- **ಅಂದು:** ಊರಿಗೆ ಬಂದವಳು ನೀರಿಗೆ ಬಾರದೆ ಇರುವಳೆ?
  **ಇಂದು:** ಊರಿಗೆ ಬಂದವಳು ಮೊಬೈಲ್ ತಾರದೆ ಇರುವಳೆ?
- ನ್ಯಾಯಾಲಯದಲ್ಲಿ ಸಾಕ್ಷಿ ಏನು ಹೇಳಬೇಕಾದರೂ ಹೇಳಬಹುದು. ಆದರೆ ಸಾಕ್ಷ್ಯ ಮಾತ್ರ ನಿಜವೇ ಆಗಿರುತ್ತದೆ.
- ಲೆಂಡ್ ಯುವರ್‌ಸೆಲ್ಫ್ ಟು ಅದರ್ಸ್. ಬಟ್ ಗಿವ್ ಯುವರ್‌ಸೆಲ್ಫ್ ಟು ಯುವರ್ ಸೆಲ್ಫ್.
- ಓಲ್ಡ್ ವೈನ್ ಇನ್ ನ್ಯೂ ಬಾಟಲ್ ಎಂಬುದನ್ನು ಹಳೆ ಹಿಟ್ಟು ಹೊಸ ಹೆಂಚು ಎಂದೂ ಹೇಳಬಹುದಲ್ಲವೆ?
- ಅಂತರ್ಜಾಲ ಎಂಬುದು ಒಂದು ರಾಜಕೀಯ ಪಕ್ಷವಾಗಿದ್ದರೆ ಅದು ಇಂದು ಭಾರತದಲ್ಲಿ ಅತ್ಯಂತ ಕ್ರಿಯಾಶೀಲ ವಿರೋಧ ಪಕ್ಷವಾಗಿ ಕಾರ್ಯ ನಿರ್ವಹಿಸುತ್ತಿತ್ತು.
- ದೇವರು ಪುರುಸೊತ್ತು ಮಾಡಿಕೊಂಡು ಅಂಗಾಂಗಗಳನ್ನು ಸೃಷ್ಟಿಸಿದಾಗ ಐಶ್ವರ್ಯ ರೈ, ಕರೀನಾ ಕಪೂರ್, ಹೇಮ ಮಾಲಿನಿ ಮುಂತಾದ ಸುಂದರಿಯರು ಜನ್ಮ ತಾಳುತ್ತಾರೆ.
- ಖಡ್ಗಕ್ಕಿಂತ ಹರಿತ ಈಗ ಲೇಖನಿ ಅಲ್ಲ, ಕೀ ಬೋರ್ಡ್!

☆

# ಕಡಲೆ ಸ್ವಗತ

**- ಗುಂಡುರಾವ್ ದೇಸಾಯಿ**

**ನಾ**ನು ಕಡಲೆ, 7500ವರ್ಷಗಳ ಇತಿಹಾಸ ಹೊಂದಿರುವ ಭೂಮಿಯಲ್ಲಿ ಮೊದಲು ಬೇಸಾಯ ಮಾಡಲ್ಪಟ್ಟ ಸಸ್ಯಗಳ ಪೈಕಿ ಹೆಚ್ಚಿನ ಪ್ರೋಟೀನ್ ಹೊಂದಿರುವ ದ್ವಿದಳ ಧಾನ್ಯ. ಜನ್ಮದಾರಾಭ್ಯದಿಂದ ಎಲ್ಲರೂ ನನ್ನನ್ನು ಪ್ರೀತಿಸುವವರೆ! ನಾನು ಬೆಳೆಯಲು ಮಳೆ ಹೆಚ್ಚು ಬೇಕಿಲ್ಲ. ತಂಪಿನ ಒಡಲಿದ್ದರೆ ಸಾಕು. ರೈತರಿಗೆ ನಗು ತರಿಸುವ ವಾಣಿಜ್ಯ ಬೆಳೆ. ಚಿಕ್ಕವನಿರುವಾಗಲು ನನ್ನ ಎಲೆ ಎಲ್ಲರಿಗೂ ಪ್ರೀತಿ. ನನ್ನ ಎಲೆಗಳನ್ನು ಚಿವುಟಿಕೊಂಡು ಹೋಗಿ ತರಾವರಿ ಚಟ್ನಿ, ಪಲ್ಯ ಮಾಡಿ ತಿನ್ನುತ್ತಾರೆ. ಮುಂದೆ ಎಳೆಯ ಕಾಯಿಗಳನ್ನು ಬಿಡುವಾಗ ಎಲ್ಲರ ಆಕರ್ಷಣೆಯ ಬಿಂದು. ಹೊಲದಲ್ಲಿ ನನ್ನನ್ನು ಬೆಳೆಸಿದವರು ನನ್ನ ಹೊಲದಾಗ ಕಡ್ಲಿಕಾಯಿ ಆಗ್ಯಾವ ಬರ್ರಿ ಎಂದು ಹೆಮ್ಮೆಯಿಂದ ಬಂಧು-ಬಳಗ ಸ್ನೇಹಿತರನ್ನು ಕರೆದುಕೊಂಡು ಬಂದು ಉತ್ಸಾಹದಿಂದ ಕಿತ್ತಿ ಎಳೆಕಾಯಿಯ ಸ್ವಾದವನ್ನು ಸವಿಸಿ ಸಂಭ್ರಮಿಸುತ್ತಾರೆ. ಕೆಲವರು ಅಲ್ಲೆ ಸುಟ್ಟು, ಅರಬೆಂದ ನನ್ನ ಕವಚ ಸುಲಿದು ತಿನ್ನುತ್ತಾರೆ. ದಾರಿಯಲ್ಲಿ ಹೋಗುವವರಿಗೆ ಆಯಸ್ಕಾಂತ ನಾನು. ಹೊಲದಲ್ಲಿ ಏನೆ ಬೆಳೆ ಇರಲಿ ಮುಟ್ಟರು. ಕಡ್ಲಿ ಗಿಡ ಅವ ಅಂದ್ರ ಸಾಕು ಎಂತವರೆ ಇರಲಿ ದಾರಿಯಲ್ಲಿ ಕಂಡಾಗ ನನ್ನನ್ನು ಹೇಗಾದರೂ ಕಿಡ್ನಾಪ್ ಮಾಡುವುದಂತೂ ಸತ್ಯ. ದಾರಿ ಹೋಕರಿಗೆ ಹಸಿದವರಿಗೆ ಖಂಡಿತವಾಗಿ ನಾನು ಸಹಾಯವಂತೂ ಮಾಡುವೆ. ಕೆಲವರದು ನನ್ನ ಬಗ್ಗೆ ಕಂಪ್ಲೇಂಟು. ಹುಳುಚಿ ಇರುತ್ತೇ ಎಂದು. ಹೌದು ಚೆನ್ನಾಗಿದ್ದಿದ್ರೆ ಬದುಕಲು ಬಿಡುತ್ತಿದ್ದಿರಾ? ಪಾಪ ಬಿತ್ತಿದ ರೈತನಿಗೆ, ಮಾಲಿಕನಿಗೆ ಬೇಡವೇ. ನನನ್ನು ಮುಟ್ಟಲು ಹಲವಾರು ಕ್ರಿಮಿಗಳು ಬರುವುದರಿಂದ ನನ್ನ ದೇಹ ರಕ್ಷಣೆಗಾಗಿ ನಾನು ಹುಳುಚಿಟ್ಟುಕೊಂಡಿರುವುದು ಸತ್ಯ.

ನನ್ನ ಅವಧಿ ಮುಗಿದ ಮೇಲೆ ಬಲಿತ ಕಾಳಾಗಿ ವಯಸ್ಸಿಗೆ ಬಂದ ಮಗನಾಗಿ ಬೆಳೆಸಿದವರಿಗೆ ಇದುವರೆಗೂ ಖಂಡಿತ ನೋವುಂಟು ಮಾಡಿಲ್ಲ. ನನ್ನ ಯೋಗ್ಯತೆಗೆ ತಕ್ಕಂತೆ ಮಾರಿಕೊಂಡಿದ್ದೇನೆ. ಎಲ್ಲರೂ ನನ್ನನ್ನು ಮಾರುವುದಿಲ್ಲ. ಕೆಲವರು ಮನೆಯಲ್ಲಿ ಇರಿಸಿ ಉಪಚರಿಸುವವರು, ಕೆಲವರು ಗೋಡೌನ್‌ನಲ್ಲಿ ಸಂಗ್ರಹಿಸುವವರು. ಅಲ್ಲಿಂದ ಮಿಲ್ಲಿಗೆ ಹೋಗಿ ನಾನು ನಯಾನಾಜೂಕಾದ ದ್ರವ್ಯವಾಗಿ ಹೊರಬರುವೆ. ನನ್ನ ಬೆಳಿಸಿದವರು ಮಾರಿದ್ದಕ್ಕಿಂತಲೂ ಹೆಚ್ಚಿನ ಬೆಲೆಯಲ್ಲಿ ಮಾರಾಟವಾಗುವವ ನಾನು. ಅದಕ್ಕೆ ನನ್ನನ್ನು ಸುಂದರ ಯುವತಿಯಂತೆ ಕಾಣುವ ಹಾಗೆ ಪಾಲೀಶು ಮಾಡಿರುವುದೇ ಕಾರಣ.

ನಂತರದಲ್ಲಿ ಪ್ರತಿ ಮನೆ ಮನೆಗೂ ನನ್ನ ಸವಾರಿ. ನಾನಿಲ್ಲದ ಅಡುಗೆ ಮನೇನೇ ಶೂನ್ಯ, ನಾನಿಲ್ಲದ ಸಿಹಿ, ಖಾರ, ಕರಿದತಿಂಡಿಯೇ ಇಲ್ಲ. ಇದು ನನ್ನ ಸೊಕ್ಕಿನ ಮಾತಲ್ಲ. ನನ್ನ ಬಗ್ಗೆ ಹೆಮ್ಮೆಯಿಂದ ಹೇಳುವ ಮಾತು. ನಾನು ಒಂದರ್ಥದಲ್ಲಿ ಧಾನ್ಯಗಳಿಗೆ ರಾಜ. ಪ್ರತಿ ವಿಶೇಷ ಸಂದರ್ಭಕ್ಕೂ ನನ್ನ ಉಪಸ್ಥಿತಿ ಅನಿವಾರ್ಯ. ನೀವು ಯೋಚಿಸುವ ಮೊದಲೇ

ಹೇಳಿಬಿಡುವೆ. ಮದುವೆ, ಮುಂಜವಿ, ಕುಬಸ ಏನೇ ಇರಲಿ ಅಲ್ಲಿ ಸಿಹಿ ಊಟ ಬೇಕೆ ಬೇಕು. ಅಲ್ಲಿ ಮೆರೆಯುವವನು ನಾನೆ. ಹೋಳಿಗೆ ಎಂದರೆ ಯಾರಿಗೆ ಬಾಯಲ್ಲಿ ನೀರೂರಲ್ಲ ಹೇಳಿ? ನಾನಿಲ್ಲದೇ ಹೋಳಿಗೆಗೆ ಭವಿಷ್ಯ ಇದೆಯೇ, ಹರಕು ಹೋಳಿಗೆ ಲೇಸು, ಮುರುಕು ಸೊಂಡಿಗೆ ಲೇಸು ಎಂದು ಸರ್ವಜ್ಞ ಹೇಳಿಲ್ಲವೇ? ಹೋಳಿಗೆ ಮಾಡೋದು ಕಲೆ. ಸೂಕ್ಷ್ಮ, ಹೈಫೈ ಮಂದಿಗೆ ನನ್ನ ಒಲಿಸಿಕೊಳ್ಳುವ ತಾಕತ್ತಿಲ್ಲ. ನನ್ನನ್ನು ಚೆನ್ನಾಗಿ ಕುಟ್ಟಿ ರುಬ್ಬಿ ಹದ ಮಾಡಿ ಕಣಕದೊಳಗೆ ಸೇರಿಸಿ ಅಡಗಿಸಿ ನಾದುವ ಪರಿ ಇದೆಯಲ್ಲ ಸಾಮಾನ್ಯರಿಗೆ ಅಸಾಧ್ಯ. ಒಮ್ಮೆ ಹೈದ್ರಾಬಾದ ನವಾಬನ ಮಂತ್ರಿ ಸಂಚಾರ ನಿಮಿತ್ತ ಗ್ರಾಮವೊಂದರಲ್ಲಿ ತಂಗಿದ್ದ. ಎಲ್ಲರೂ ವೈವಿಧ್ಯಮಯ ಖಾದ್ಯ ತಂದು ಸಂತೃಷ್ಟಗೊಳಿಸಿದರು. ಆದರೆ ಒಬ್ಬ ಬಡವ ತನಗೆ ಏನೂ ಕೊಡಲಿಕ್ಕಾಗದೆ ತನ್ನ ಮನೆಯಲ್ಲಿ ಮಾಡಿದ್ದ ಹೋಳಿಗೆಯನ್ನು ತಂದು ಅರ್ಪಿಸಿದ. ಹೋಳಿಗೆ ಜೊತೆ ತುಪ್ಪ ಹಾಕಿಕೊಂಡು ತಿಂದ ಆ ಮಂತ್ರಿ ಏ ಕೌನ್ಸಾ ಖಾನ ಹೈ? ಕೈಸಾ ಬನಾತಾ ಹೈ? ಎಂದಾಗ ಸಾಬ್, ಏ ಪೂರಣ ಭರಿತ ಪೂರಿಯಾ, ಗೇರು ಕಾ ಆಟಾ ಕೆ ಅಂದರ್ ಪೂರಣ ಭರತೆ ಸಾಬ ಎಂದುತ್ತರಿಸಿದ. ಮ್ಯಾಲ ಕಣಕದ ಹಾಳಿ ಒಳಗ ಹೂರಣ ಅದ, ಒಳಗ ಯಾವ ತೂತು ಇಲ್ಲ ಹಾಂಗಾದ್ರ ಈ ಕಣಕದೊಳಗ ಹೂರಣ ಇಟ್ಟದ್ದು ಹ್ಯಾಂಗ! ಅಂದ ಅಚ್ಚರಿಗೊಂಡು ಹಮ್ ಖುಷ್ ಹೈ ಇಸ್ ಹೋಳಿಗೆ ಖಾಕೆ ಎಂದು ಇದ್ದಕ್ಕಿದ್ದಂತೆ ಅವನನ್ನು ಗ್ರಾಮಕ್ಕ ಕುಲಕರ್ಣಿಯನ್ನಾಗಿ ಹಾಗೂ ಅವನ ಮಾಡಿದ ಹೋಳಿಗೆಗೆ ಮೆಚ್ಚಿ ಹತ್ತು ಎಕರೆ ಭೂಮಿಯನ್ನು ದಾನವಾಗಿ ಆ ಬಡವನಿಗೆ ನೀಡಿದರಂತೆ! ಹೇಗಿದೆ ಹೇಳಿ ನನ್ನ ಕೈಚಳಕಾ? ಹೋಳಿಗೆ ಪ್ರಿಯರು ಯಾರಿಲ್ಲಾ ಹೇಳಿ. ಒಂದು ಕಾಲಕ್ಕ ನಾನಿರುವ ಹೋಳಿಗೆಗೆ ಬಾಳ ಬೇಡಿಕೆ ಇತ್ತು. ದೇವರು-ದಿಂಡ್ರು, ಹಬ್ಬ-ಗಿಬ್ಬ ಅಂತ ಮಾಡಿದ್ರ ಹತ್ತು ಇಪ್ಪತ್ತು ಸೇರು ಗಟ್ಟಲೇ ನನ್ನ ಹೂರಣ ಮಾಡತಿದ್ರು. ರುಬ್ಬುಗುಂಡಿಲೇ ರುಬ್ಬತಿದ್ರು.. ಹೆಣ್ಮಕ್ಕಳು ಹಾಡಾಡಿಕೊಂತ ಲಟ್ಟಿಸ್ತಿದ್ದರು. ಆದರ ಅಷ್ಟು ಶಕ್ತಿ, ಪುರುಸತ್ತು ಈಗಿನವರಿಗಿಲ್ಲ. ಹಾಗಂತ ನನ್ನ ಕಿಮ್ಮತ್ತೇನು ಕಮ್ಮಿ ಆಗಿಲ್ಲ. ಇವತ್ತು ಏನಾಯ್ತು? ಅಂದ್ರ ಎಲ್ಲಾ ಖಾದ್ಯನ ಮರೆತು ಹೋಳಿಗೆ ಊಟಾ ಆತು? ಅನ್ನುವಷ್ಟರ ಮಟ್ಟಿಗೆ ನನ್ನ ಪ್ರಭುತ್ವ ಅದ. ಅದ ಜಾಮೂನಾ ಊಟಾ ಆತು, ಜಿಲೇಬಿ ಊಟಾತು ಅಂತರೇನು? ಇಲ್ಲ! ನೀವ ಅಂತಿರೇನೂ.......? ಸಾಧ್ಯನ ಇಲ್ಲ. ಇವತ್ತು ಲಿಂಗಾಯತ ಖಾನಾವಳಿಯ ಮಾಲೀಕರನ್ನ ಸ್ಮರಿಸಲೇ ಬೇಕಾಗುತ್ತೆ. ಪ್ರತಿ ಸೋಮವಾರ ತಮ್ಮಲ್ಲಿ ಬರುವ ಗ್ರಾಹಕರಿಗೆ ಹೋಳಿಗೆ ಮಾಡಿ ಊಣ್ಣಿಸಿ ಸಂಭ್ರಮ ಪಡತಾರ. ಇವತ್ತು ಮನೆ ಮನೆಗಳಿಗೆ ಹೋಗುವ ಪಾರ್ಸಲ್ ವಸ್ತು ನಾನಾಗಿನಿ. ಹೋಳಿಗೆ ಮಾಡಕ ಬರದವರ ಕೈಲಿ ನಾನು ಆಗೋದು ಕಡಬು. ಕಡುಬಿನ್ಯಾಗ ತೂತು ಹಾಕಿ ತುಪ್ಪ ಸುರುದುಕೊಂಡು ತಿನ್ನುವ ರುಚಿ ಹ್ಯಾಂಗ್ರಿರತ್ರಿ?

ನೆಕ್ಸ್ಟ್ ನನ್ನ ರೂಪಾನ ಲಡ್ಡು. ಲಡ್ಡಿಲ್ಲದ ಮದುವೆ ಮನೆ ಏನೋ ಕಳಕೊಂಡಂತೆ. ದೊಡ್ಡ ದೊಡ್ಡ ಲಗ್ನದಲ್ಲಿ ನನ್ನದೇ ಪಾರುಪತ್ಯ. ಕ್ವಿಂಟಲ್ ಗಟ್ಟಲೇ ಮಾಡಿ ಹಾಕ್ತಾರಾ. ಕನ್ಯಾ/ವರಾ ನೋಡಿ ಹೋದಕೂಡಲೇ ಹೋಳಿಗಿ ಊಟಾ ಯಾವಾಗಾ? ಎಂಗೇಜಮೆಂಟ್ ಆದ ಕೂಡಲೇ ಲಡ್ಡು ಯಾವಗ? ಅಂತಾರಲ್ಲ, ಅಂದ್ರ

ಎಂಗೇಜಮೆಂಟ್‌ಗೆ ನನ್ನ ಮಾಡದೆ ಬಿಡುಗಡೆ ಇಲ್ಲವೋ ಹಾಗೆ ಮದುವೆಗೂ ನಾನು ಇಲ್ಲದೆ ಇಲ್ಲ. ಲಡ್ಡುನೂ ಮಾಡದು ಸರಳಲ್ಲ. ಸ್ವಲ್ಪ ಪಾಕ ಏರು ಪೇರಾದ್ರೂ ಇಡಿ ಖಾದ್ಯನ ಕೆಟ್ಟುಹೋಗುತ್ತ. ಬಹುದಿನಗಳವರೆಗೆ ಉಳಿಯುವ ಖಾದ್ಯ ಕೂಡಾ. ಜೊತೆಗೆ ಕಡಿಮೆ ಖರ್ಚಿನಲ್ಲಿ ಗಿಟ್ಟುವ ಬಡವರ ಬಂಧು ನಾನು. ಮದುವೆಗೆ ಮುಂಚೇನೆ ಸಿದ್ಧವಾಗುವ ಫಲಹಾರದಲ್ಲೂ ನಾನ ಇರತೀನಿ. ಮನಿಗೆ ಬಂದಾಗ ಹೋಗುವವರಿಗೆ ಕೊಡುವ ಅವಲಕ್ಕಿ ಪಾಕೇಟಿನೊಳಗೆ ಇರುವ ಬೇಸನ್ ಉಂಡಿ ನಾನಾ. ತಿಂಡಿಗಾಗಿ ಮೈಸೂರು ಪಾಕ, ಬೇಸನ್ ಚಕ್ಕಿ ಅಂತ ಏನು ಮಾಡತಾರಾ. ಅದು ನಾನಾ. ಬ್ರಾಹ್ಮಣರ ಮನೆಯಲ್ಲಿ, ಆರಾಧನೆಗಳಲ್ಲಿ ಹೈಗ್ರೀವ ಅಂತ ಪದಾರ್ಥ ಮಾಡತಾರಲ್ಲ ಕಡಿಮೆ ಖರ್ಚಿನ ಮೂಲವಾಗಿ ಅಲ್ಲಿಯೂ ಹಾಂಗ, ಗೋಧಿ ಹುಗ್ಗಿಯಲ್ಲಿಯೂ ಅಲ್ಪ ಪ್ರಮಾಣದಾಗ ನಾನಾ ಇರುತ್ತೀನಿ.

ಇದು ನನ್ನ ಸಿಹಿ ಅವತಾರ ಆಯ್ತು ನನ್ನ ಖಾರದ ಅವತಾರ ಹೇಳಬೇಕಲ್ಲ. ತೃಣಮಪಿ ನ ಚಲತಿ ಇದು ನನಗ ಒಗ್ಗತ್ತ ಅಂತ ನಾನು ಅಭಿಮಾನದಿಂದ ಹೇಳಿಕೊಳ್ಳತ್ತೀನಿ. ಬುರಬುರಿ, ಭಜಿ, ಮಿರ್ಚಿ, ಉಳ್ಳಾಗಡ್ಡಿ, ಮಸಾಲಿ ಒಡೆ, ಆಲು ಬೊಂಡಾ, ಬೋಂಡಾ ಸೂಪು, ಚಕ್ಕೋಲಿ, ಖಾರ ಬೂಂದಿ, ಡಾಣಿ, ಖಾರಾ, ವಡಾ ಪಾವ್, ಪಕೋಡಾ ಅದರಲ್ಲಿ ನಾನಾ ನಮೂನಿ ವೆರ್‍ಯಾಟಿದ್ದು. ಹೈದ್ರಾಬಾದ ಕರ್ನಾಟಕದ ಕೆಲವು ಭಾಗಗಳು ಫೇಮಸ್ಸು ಆಗಿರೋದು ಈ ಕರಿದ ಖಾದ್ಯದ ಕಾರಣಕ್ಕ. ಒಂದ ಎರಡ ನಾನಿರದ ಖಾರದ ಭಾಗವೇ ಇಲ್ಲ. ಮಿರ್ಚಿ ಹಾಕಿಕೊತ್ತ ಎಷ್ಟು ಕುಟುಂಬಗಳು ಬದುಕು ಕಟ್ಟಿಕೊಂಡಿಲ್ಲ. ಜಾತ್ರೆಗೆ ಫಳಾರದ ಅಂಗಡಿಯಲ್ಲಿ ನಾನಾ ಹೈಲೈಟು. ಯಾವದರ ವ್ಯಾಪಾರ ಮಾಡಿ ಕೆಟ್ಟಿರಬಹುದು ಮಿರ್ಚಿ ಭಜಿ ಮಾಡಿ ಹಾಳಾದರು ಇದ್ದರ ಅಂದ್ರ ಕರಕೊಂಡು ಬಂದು ತೋರಸ್ರಿ. ಮದುವೆ ಮುಂಜುವಿ, ಸಂಭ್ರಮದ ಸಮಾರಂಭ, ಹಬ್ಬ ಹರಿದಿನ ಇರಲಿ ನನ್ನ ಎಣ್ಣೆಯಲ್ಲಿ ಕರಿಯದ ಹೊರತು ಆ ದಿನದ ಊಟಕ್ಕೆ ತೃಪ್ತಿನೇ ಇರದು. ನನ್ನ ಒಲ್ಲೆ ಅಂತಾ ದೂಡಾ ನರಪ್ರಾಣಿ ಯಾವುದರ ಅದನೂ....? ರಸ್ತೆಯಲ್ಲಿ ಹೋಗತಿರತೀರಿ ಕಾದ ಎಣ್ಣೆಯಲ್ಲಿ ನನ್ನ ಕರಿತಿರೋದನ್ನ ನೋಡಿ ಹಾಗ ಹೋಗ್ತಿರೇನೂ. ನನ್ನ ಕರಿಯುವಿಕೆಗೆ ನೀವು ಕರಗುತಿರೋ ಇಲ್ಲೋ? ಒಗ್ಗರಣಿಗೆ ಅಥವಾ ಚೂಡಾಕ್ಕ ನಾನು ಇದ್ರ ಅದರ ಖದರ್.

ಕೋಸಂಬರಿ ಅನ್ನೋ ಖಾದ್ಯ ಸವೆದು ಅನುಭವಿಸಬೇಕು. ವಿಶೇಷವಾಗಿ ಬ್ರಾಹ್ಮಣ ಹೆಣ್ಣುಮಕ್ಕಳು ಗೌರಿ ಕೂಡಿಸಿದಾಗ, ರಾಮನವಮಿಯಾಗ ಕೋಸಂಬ್ರಿ ಅಂತ ಮಾಡಿರತಾರ. ಹೆಸರು ಬೇಳೆದು ಹಾಗೂ ಕಡಲೇ ಬೇಳೆದು. ನನ್ನನ್ನು ನೀರಲ್ಲಿ ನೆನೆ ಹಾಕಿ ಅರ್ಧಂಬರ್ಧ ರುಬ್ಬಿ ಅದಕ್ಕೆ ಕೊಬ್ಬರಿ ಮಾವಿನಕಾಯಿ ಸೌತೆಕಾಯಿ ಹಾಕಿ ಒಗ್ಗರಣಿ ಕೊಟ್ಟ ಕೋಸಂಬ್ರಿನ ತಿಂದೇ ಸವಿಬೇಕು. ಇನ್ನೂ ಅಡಿಗಿ ಮಾಡಕ ಬ್ಯಾಸರಾಗಿದ್ದಾಗ ಬೇಗನೆ ಅನ್ನಕ್ಕ ರೊಟ್ಟಿಗೆ ಸಾಧನಿ ಮಾಡಾಕ ಝುಣಕ ಪೊಳಜ ಅಂತ ನನ್ನಿಂದ ತಯಾರಾಗತ್ತ. ಹೂರಣ ಮಾಡಿದ ದಿನ ನನ್ನ ಕಟ್ಟು ಇಳಿಸಿದ ನೀರಿನಿಂದನ ಸಾರು ಮಾಡಿರೋದು ಅದರ ಟೇಸ್ಟ ಬೇರೆ.

ಇನ್ನೂ ನನ್ನ ಬೈಪ್ರೊಡಕ್ಟಗಳು. ನನ್ನ ನೆನಸಿದರ ಹುಸಳಿ ಕಾಳ ಆಗತಿನಿ, ದಾಲ ಆಗತಿನಿ ನೆನೆಸಿ ತಿಂದ್ರ ಬಾಡಿ ಮೆಂಟನೆ ಮಾಡಕ ಒಳ್ಳೆ ಶಕ್ತಿ ಒದಗಸ್ತಿನಿ. ಹುರದರ ಹುರಕಡ್ಲಿ, ಪುಟಾಣಿ ಆಗತಿನಿ. ಮಕ್ಕಳು ನನ್ನ ಮುಕ್ಕೇ ಬಿಡತಾವ. ಪುಟಾಣಿ ಎಲ್ಲದಕ್ಕೂ ಬೇಕೆ ಬೇಕು,

ಮಂಡಾಳು ಕಲಿಸಿದ್ರ, ಅವಲಕ್ಕಿ ಕಲಿಸಿದ್ರ, ರುಚಿ ಹೆಚ್ಚಳಕ್ಕ ನಾನ ಬೇಕು, ಇನ್ನೂ ನನ್ನ ಹುರದು ತಿಂದ ಒಳ್ಳೆ ಸ್ನ್ಯಾಕ್ಸ್. ಇನ್ನೂ ಪುಡಿ ಮಾಡಿದರ ಅಲ್ಲಿ ಆಗುವ ಅವತಾರನಾ ಬೇರೆ. ಗಿಲಗಂಚಿಗೆ ನಾನ ಬೇಕು. ಏನೆ ದೋಸೆ, ಉತ್ತಪ್ಪ, ಇಡ್ಲಿ, ವಡಾ ಮಾಡಿದರೆ ಅದಕ್ಕೆ ಚಟ್ನಿ ಬೇಕೇ ಬೇಕು. ಆ ಚಟ್ನಿಗೆ ನಾನಿದ್ರೆ ಟೇಸ್ಟು.. ವಗ್ಗರಣಿ ಹಾಕ್ತಿರಿ ನಾನಾ ನಮೂನಿ ಅದಕ್ಕೂ ಕಲಸಾಕ ಹಿಟ್ಟು ನಾನಾ ಬೇಕು. ಹುರಕಡ್ಲಿ ಹಿಟ್ಟಾಕಿ ಕಲಸದ ವಗ್ಗರಣಿನ ಯಾರಾದರೂ ಮುಟ್ಟತಿರೇನ್ರಿ? ಗಿರಮಿಟ್ಟ ಮಾಡಿದ್ರೂ ಬೇಕು. ಖಾರಾ ಆದ್ರೂ ಕಳಿಲಿಕ್ಕೆ ಬೇಕು ಉಪ್ಪು ಆದ್ರೂ ಮರಸಲಿಕ್ಕೆ ಬೇಕು.

ನನ್ನ ಚರ್ಮ ಅರ್ಥಾತ್ ಹೊಟ್ಟು ಕೂಡಾ ಪಶುಗಳಿಗೆ ಪೌಷ್ಠಿಕ ಆಹಾರ. ನನ್ನ ಹೊಲದಲ್ಲಿ ಹಾಗ ಒಗೆದರು ಒಳ್ಳೆ ಗೊಬ್ಬರ. ನಾನು ಒಳ್ಳೆ ಔಷಧಿ ಕಣ್ರೀ. ಮುಳ್ಳು ನಟ್ಟಾಗ ಅದೂ ಹೊರಗೆ ಬರದೆ ಹೋದಾಗ ತೆಗೆಯಲು ನನ್ನನ್ನು ಬಾಯಲ್ಲಿ ಅಗೆದು ಕಡಿದು ನಟ್ಟ ಜಾಗಕ್ಕೆ ಹಚ್ಚಿದರೆ ಮುಳ್ಳು ಹೊರಗೆ ಬರಲು ಕಾರಣನಾಗುವವನು ನಾನೇ. ತೂಕ ಹೆಚ್ಚು ಮಾಡಿಕೊಳ್ಳಲಿಕ್ಕೆ, ಬಿಕ್ಕಳಿಕೆಗೆ ಕಡಿವಾಣ ಹಾಕಲಿಕ್ಕೆ, ನಿಶ್ಯಕ್ತಿಗೆ, ನಗಡಿಗೆ, ಮುಖದ ಸೌಂದರ್ಯ ಹೆಚ್ಚಲಿಕ್ಕೆ ಬೇಕರಿ ನಾನ. ಅಲ್ಲದ ಹುಟ್ಟಿದ ಕೂಸಿಗೆ ಸ್ನಾನ ಮಾಡಸೋದು ಯಾವುದರಿಂದರಿ? ಇವತ್ತಿಗೂ ಸಾಬೂನು ಬಳಸದ ಹಿರಿಯರು ಬಳಸುತ್ತಿರೋದು ಏನನ್ನ!

ಇಂತಿಪ್ಪ ಶ್ರೇಷ್ಠತೆಯನ್ನು ಮೆರೆಯುತ್ತಿರುವ ನನಗೆ ಪಾಪಿ ಮಾನವರು ದೂರುತ್ತಿರುವ ಪರಿ ಎಂತಹದು. ನನ್ನ ಅನಿವಾರ್ಯತೆ ಎಷ್ಟಿದೆ ಅಂತ ಗೊತ್ತಿದ್ದರೂ ಮಾಡುತ್ತಿರುವ ದೂಷಣೆ ಎಂತಹದು? ನಾನು ನಂಜು ವಿಷಕಾರಿ ಎಂದು ಜನ ಬಗೆಯುತ್ತಲ್ಲ. ನನ್ನಿಂದ ವಾತಾ ಬೊಜ್ಜು ಬರುತ್ತೆ ಎನ್ನುತ್ತಾರಲ್ಲ. ಗಾಯಗೊಂಡವರು, ಆಪರೇಷನ್‌ಗೆ ಒಳಗಾಗದವರಿಗೆ ತಿನ್ನಲೇ ಬಾರದೆಂದು ನನ್ನನ್ನು ದೂಷಿಸಿ ಹೇಳುತ್ತಾರಲ್ಲ. ಇದು ನ್ಯಾಯವೇ. ನಾನಿಲ್ಲದೆ ನಿಮ್ಮ ಊಟಕ್ಕೆ ರುಚಿನೇ ಇಲ್ಲ ಎಂದು ಗೊತ್ತಿದ್ದರೂ ಆ ಒಂದು ಮುಲಾಜಿಗಾದರೂ ನನಗೆ ಗೌರವಿಸುವುದು ಬೇಡ, ಹಾಗೆ ತೆಪ್ಪಗಿದ್ದರೆ ಸಾಕಲ್ಲವೇ. ನನ್ನನ್ನ ಈ ಪರಿಯಿಂದ ಬೈಯ್ಯುವ ಮಾನವರನ್ನು ಕಂಡರೆ ಮನಸ್ಸು ಹತಾಶೆಗೊಳ್ಳುತ್ತೆ. ಆದರೆ ಏನು ಮಾಡಲಿ ಸುಮ್ಮನಿದ್ದೇನೆ. ನನ್ನ ಬಗ್ಗೆ ಅರಿಯುತ್ತಾರೆ ಎನ್ನುವ ಆಶಾಭಾವದಲ್ಲಿ. ಏನೇ ಇರಲಿ ನಿಮ್ಮಂತ ಕ್ರೂರಿ ನಾನಾಲ್ಲ. ನನ್ನನ್ನು ಅತಿಯಾಗಿ ಸೇವಿಸಿದಾಗಲೇ ನಿಮಗೆ ತೊಂದರೆ ಹಾಗೆ ತಿನ್ನಿರೆಂದು ಹೇಳಿರುವೆನಾ? ಅತಿಯಾದರೆ ಅಮೃತ ಕೂಡ ವಿಷವಂತೆ. ನಿಮ್ಮ ತಪ್ಪನ್ನು ನನ್ನ ಮೇಲೆ ಹೋರಿಸದಿರಿ. ನಾನು ಮಾನವ ಕುಲಕ್ಕೆ ಸಂತಸವನ್ನು ನೀಡುವ ಖಾದ್ಯವಾಗಿಯೇ ಉಳಿಯುತ್ತೇನೆ. ಆದರೆ ನಿಮ್ಮಿಂದ ಗೌರವದ ಎರಡು ಮಾತುಗಳನ್ನು ನಿರೀಕ್ಷಿಸುತ್ತೇನೆ. ಬರಲಾ? ಮನೆಯವರು ಹೋಳಿಗೆ ಮಾಡಲಿಕ್ಕೆ ನನ್ನನ್ನು ಎತ್ತಿಕೊಳ್ಳುತ್ತಿದ್ದಾರೆ. ನನ್ನ ಖಾದ್ಯವನ್ನು ತಿನ್ನುವಾಗ ನನ್ನ ಬಗ್ಗೆ ಕರುಣೆ ಅಭಿಮಾನ ಇರಲಿ ಎಂದಷ್ಟೆ ಬೇಡಿಕೊಳ್ಳುವೆ.

☆

# ಅಪರಂಜಿಗೆ ಹಾರ್ದಿಕ ಶುಭಾಶಯಗಳು

## ಡಾ. ಎಚ್.ಎಸ್. ಮುರಳಿ

ನೇತ್ರ ವೈದ್ಯರು

**ದಿ ಐ ಕ್ಲಿನಿಕ್**

ಅಣ್ಣಯ್ಯ ಕಾಂಪ್ಲೆಕ್ಸ್

ಹೊಸಳ್ಳಿ ರಸ್ತೆ, ಮಂಡ್ಯ

ಫೋನ್: 224834

ಸಮಯ: ಬೆಳಗ್ಗೆ 9 ರಿಂದ 1 ಗಂಟೆ

**ಮಾಲಸ ಐ ಕ್ಲಿನಿಕ್**

ಬಸ್ ಸ್ಟಾಂಡ್ ಸರ್ಕಲ್

ಚಾಮುಂಡೀಪುರಂ

ಮೈಸೂರು 570 004

ಫೋನ್: 2332225

ಸಮಯ: ಸಂಜೆ 5 ರಿಂದ 8 ಗಂಟೆ

ಮೊಬೈಲ್: 94487 40093

# 'ಹರಕು ಮಾರಿಯುವ' ಉವಾಚ

**- ಎಚ್. ಶಾಂತರಾಜ ಐತಾಳ**

**ನ**ಮ್ಮ ಕಾಕಾಂಚಲ ರಾಜ್ಯದ ಮುಖ್ಯಮಂತ್ರಿಗಳು ಭಾರೀ ಬೆರಕಿ ಬಿಡ್ರಿ. ಮಂದಿ ಅವರನ್ನ ಶಾಣ್ಯಾ ಅಂತಾರು. ಅನ್ನವಲ್ಲರ‍್ಯಾಕೆ? ಆದರ ಖರೇ ಹೇಳ್ತಿನಿ ಕೇಳ್ರಿ, ಅಂವಾ ಶಾಣ್ಯಾ ಅಲ್ಲ. ಬೆರಕೀ ಅಂದ್ರ ಅಗ್ದಿ ಬೆರಕೀನಾ - ಯದಕ್ಕ ಹೀಂಗ ಹೇಳಾಕ ಹತ್ತೀನಪ್ಪಾ ಅಂತ ಕೇಳ್ರಿ. ಈಗ ನೋಡ್ರಿ, ನಮಗೆಲ್ಲ ಪೌಣೆ ಶೆ ಭಾಗ್ಯಾ ಯೋಜನೆ ನೀಡ್ಯಾರಲ್ರಿ. ಅಕ್ಕಿ ಭಾಗ್ಯ, ಅನ್ನಭಾಗ್ಯ, ಗೋಧಿ ಭಾಗ್ಯ, ಶೇಂದಿ ಭಾಗ್ಯ ತಾಳಿಭಾಗ್ಯ, ಕೋಳಿ ಭಾಗ್ಯ ಯಾವುದು ಬೇಕು ಹೇಳ್ರಿ, ಎಲ್ಲಾ ಭಾಗ್ಯ ಐತಿ, ಆದ್ರ ಹಕೀಕತ್ತು ಇಲ್ಲೇ ಇರಾದು ನೋಡ್ರಿ.

ಈಗ ಅನ್ನಭಾಗ್ಯ ಅಂತಾರಲ್ರಿ. ಹಗಲೆಲ್ಲ ಅಕ್ಕಿ ಕೊಡ್ತಾರು. ಆದ್ರ ಇದನ್ನ ಹಂಗೇ ತಿನ್ನಾಕ ಆಗ್ತತೇನ್ರಿ? ಅದನ್ನ ಬೇಯಿಸಿ, ಅನ್ನ ಮಾಡಾಕ - ಕಟಗಿ ಯಾವನು ಕೊಡ್ತಾನು? ಅಂತೂ ಮ್ಯಾಚಿಸ್ ತಂದು ಒಲಿ ಹಚ್ಚಿ ಅನ್ನಾ ಮಾಡ್ತೀವಪ್ಪ. ಅದಕ್ಕ ಪಲ್ಲೇ ಸಬ್ಜಿ, ಸಾರು ಯಾವನು ಕೊಡ್ತಾನು ಕೇಳ್ರಿ, ನಿಂ ಸಿ.ಎಂ.ಗೆ? ಆತಲ್ರಿ? ಇನ್ನು ನನ್ನ ಚಿಗವ್ವ ದಂತ ಭಾಗ್ಯ ಯೋಜನಾದೊಳಗೆ ಒಂದು ಹಲ್ಲು ಸೆಟ್ ಪಡದಾಳ್ರಿ. ಇದರಾಗ ಏನು ಭಾಗ್ಯ ಬಂತು? ತಿಂಗಳಾ ತಿಂಗಳಾ ಬ್ರಷ್, ಪೇಸ್ಟ್ ಅಂತಾ ಪಚಾಸ್ ರೂಪಾಯಿ ಕೈ ಬಿಡತಾವ್ರಿ, ಇವನಾಪ್ನ. ಅಲ್ರೀ, ಹಲ್ಲು ಸೆಟ್ ಕೊಡಾಂವ ಅದರ ಜತೆಗೆ ಅದನ್ನ ಮೇಂಟೇನ್ ಮಾಡಾಕ ರೊಕ್ಕನಾದ್ರೂ ಕೊಡದಿದ್ರ ಹೆಂಗೆ ನೀವೇ ಹೇಳ್ರಲ್ಲಾ. ಅದ್ಕಾ ನಾ ಏನಂತೀನಪಾ ಅಂದ್ರ, ಅಕ್ಕಿ ಭಾಗ್ಯ ಕೊಟ್ರೆ ಛಲೋ ಆತು - ಕಟಿಗೀ ಭಾಗ್ಯಾನೂ ಕೊಡ್ರಿ - ಹಂಗೇ ಟೂತ್ ಬ್ರಷ್ ಭಾಗ್ಯನೂ ಬರ್ಲಿ.

ಇನ್ನ ಶೇಂದೀ ಭಾಗ್ಯ ರಗಡ್ ಕುಲಗೆಟ್ಟು ಹೊಗ್ಯೆತ್ರಿ. ಮೊನ್ನಿ ಮೆಳ್ಳಗಣ್ಣು ಕಿಸಬಾಯಿ ದಾಸಪ್ಪ ಏನ ಹೇಳಾಕ ಹತ್ಯಾನು ತಿಳಿತೇನ್ರೀ? ಅಂವಾ ಶೇಂದೀ ಅಂಗಡಿಗೆ ಹೋಗ್ಯಾನ. ಶೇಂದಿ ಭಾಗ್ಯ ಯೋಜನಾದೊಳಗ ನನಗೊಂದೀಟು ಛಲೋ ಬ್ರಾಂಡ ವಿಸ್ಕೀ ಕೊಡ್ರಪ್ಪಾ ಅಂತ ಕೇಳ್ಯಾನ. ಆದ್ರ ಅಂಗಡಿಯಂವ ಕೊಡವಲ್ಲ. ಇಂವ ಬಿಡವಲ್ಲ. ಮೆಳ್ಳೆಗಣ್ಣು ಸಣ್ಣದು ಮಾಡಿ ಕಿಸಬಾಯಿ ದೊಡ್ಡದು ಮಾಡಿ ದಾಸಪ್ಪ ಶೇಂದಿ ಅಂಗಡಿ ಸಾವಕಾರಂಗ ಧಮಕಿ ಹಾಕ್ಯಾನಂತ ತಗೋರಿ. 'ಇಡೀ ಕಾಕಾಂಚಲ ರಾಜ್ಯದ ಎಲ್ಲಾ ಜಿಲ್ಲಾದೊಳಗೆ ಶೇಂದಿ ಭಾಗ್ಯ ಯೋಜನೆ ಜಾರಿ ಮಾಡ್ಯಾರು. ಎಲ್ಲಾ ಜಿಲ್ಲಾದೊಳಗೆ ಅಗ್ದೀ ಚಲೋ ಮಾಲ ಕೊಡ್ರೀ ಅಂತ ಮುಖ್ಯ ಮಂತ್ರಿಗಳೇ ಹೇಳ್ಯಾರ. ಶೇಂದಿ ಕುಡಿದು ಮೆರೆಯಿರಿ; ಹೊಲಾ ಗದ್ದೆ ತೊರೆಯಿರಿ! - ಅಂತ ಎಲ್ಲ ಕಡೆ ಕರಪತ್ರ ಸೈತ ಕೊಟ್ಟಾರಲ್ರಿ. ಹನುಮಪ್ಪ ಕೊಟ್ರೂ, ಪೂಜಾರಪ್ಪ ಅಡ್ಡಗಾಲು ಇಟ್ಟಂಗಾಯ್ತು ನೋಡಪ್ಪ. ಯದಕ್ಕ ಹೀಂಗ ಮಾಡ್ತೀರಿ ನೀವೆಲ್ಲ' ಅಂತ ಹೇಳ್ಕೋತ ಕಾಯಿದೇಶೀರ ಮಾತಾಡ್ಯನಂತ.

ಅದಕ್ಕ ಅಂಗಡಿಯಂವ ನಕ್ಕೋತ ಅಂದ್ನಂತ ನೋಡ್ರಿ - ಅಲ್ಲಿ ಬಾಜೂಕ ನಿಂತಿದ್ನಲ್ಲ ಸುಣ್ಣಂದೂರು ಕರಿಯಪ್ಪ ಅಂವ ಎಲ್ಲ ಕೇಳಿಸ್ಕಂಡು ಹೇಳ್ಯಾನ - ಶೇಂದಿ ಸಾವುಕಾರ ಏನಂತ

ಹೇಳಿದ ಗುರ್ತೇನು? – 'ನೋಡಪ್ಪಾ – ಮೆಳ್ಳೆಗಣ್ಣಾ!' ನೀ ಅಂದ್ಕೊಂಡಾಗ ಎಲ್ಲ ಸುರಳೀತ ಇಲ್ಲ ತಗಿ. ಶೇಂದಿ ಭಾಗ್ಯದೊಳಗೆ ನನಗೇನು ಸ್ಯಾಂಕ್ಶನ್ ಆಗ್ಯೆತಿ ಅದರಾಗ ನೂರು ಬಾಟ್ಲಿಗೆ ಎಂಬತ್ತು ಬಾಟ್ಲಿ ಸಚಿವರು, ಅಧಿಕಾರಿಗಳು ತಮಗೇ ಉಳಸ್ಕೊಳ್ತಾರು. ಉಳುಕಿದ್ದೆಷ್ಟಾತಪಾ? ಬರೋಬ್ಬರಿ ಇಪ್ಪತ್ತು ಬಾಟ್ಲಿ ಹೌದಿಲ್ಲೊ. ಇದನ್ನ ಸೈತ ಶಾಸಕರು ಪಾಶಕರು ಬಿಡಾ ಹಂಗಿಲ್ಲ. ನೀ ಯೋಚ್ನೆ ಮಾಡಬ್ಯಾಡ, ತಮ್ಮಾ, ಇಲ್ಲೇನು ಉಳದೆತಿ ಅದನ್ನು ನಿನಗಾ ನಾ ಕೊಡಾಂವ. ಇಷ್ಟು ಹೇಳಿ ಮೆಳ್ಳೆಗಣ್ಣು ಕಿಸಬಾಯಿ ದಾಸಪ್ಪಂಗ ಅರ್ಧ ಶೀಶಿ ಸಾರಾಯಿ ಕೊಟ್ಟಾನಂತ ನೋಡ್ರಿ. ದಾಸಪ್ಪಂಗ ಕಲಬೆರಿಕಿ ದಾರೂ ಕುಡದು ನಶಿ ಏರಿ ಬಾಜುಕ್ಕ ಬಿದ್ದಾಂವ ನಿನ್ನೆ ಸಂಜಿ ಮುಂದ ಎದ್ದು ಮಾಲಕೋತ ಮನಿಗ ಹೋದ್ನಂತ. ಇದಕ್ಕೇನಂತೀರಿ ಹೇಳ್ರಿ. ಶೇಂದಿ ಭಾಗ್ಯದಾಗ ಯಾರು ಉದ್ಧಾರಾದಂಗಾತು? ನಾ ಏನ ಹೇಳಾಕತ್ತೀನಪ್ಪಾ ಅಂತಂದ್ರ ಶೇಂದಿ ಭಾಗ್ಯದಾಗ ತೊಟ್ಟೆ ಸರಾಯಿ ಸಿಗೋ ಹಂಗ ಆಗಬೇಕು. ಈ ತೊಟ್ಟೆ ಸಾರಾಯಿದಾಗ ಸಿಗ್ತತಲ್ಲ ಆ ಮಜ ವಿಲಾಯ್ತಿ ಬಾಟ್ಲಿ ಕುಡದ್ರೂ ಬರಾ ಹಂಗಿಲ್ಲ ತಗಿ – ಹೊಲಗದ್ದೇನೂ ಮಾರಬೌದು – ಹೆಂಡ್ರು ಮಕ್ಕಳನ್ನೂ ಮರಿಬೌದು.

ಕಾಕಾಂಚಲ ರಾಜ್ಯದಾಗ ಮಂದಿಗೆ ಭಾರೀ ಫಾಯದೆ. ಯಾವ ಭಾಗ್ಯ ಯೋಜನೆ ವಳಗೆ ಬಂತು ಹೇಳ್ರಲ್ಲಾ? ಅದೇ ತಾಳಿ ಭಾಗ್ಯ ಯೋಜನ ವಳೆಗೆ. ನಮ್ಮ ಹನುಮಂತಪ್ಪಾ ಮೂರ್ನಾಮ ಲಗಣಾಗಿ ಮೂವತ್ತು ವರ್ಷಾ ಕಳೆದಿತ್ತು ನೋಡ್ರಿ! ಹ್ವಾದ್ವಾರ ಅದ್ಯಾವುದೋ ಕಚೇರಿ ಪಚೇರಿ ಸುತ್ಕೊಂಡು ಬಂದ. ಎಂತೆಂತದೋ ಕೆತ್ತೆ ಬಜೆ ಮಾಡಿ ತನ್ನ ಹಳೇ ಹೇಣ್ತಿಗೆ ಈಗ ಮತ್ತು ತಾಳಿ ಕಟ್ಟಿ ಮದ್ವಿ ಆಗಾಂವ ಅಂತ ಹೇಳಿ ಮೂರು ಸಾವಿರ ಗಿಟ್ಟಿಸಿಕೊಂಡು ಬಂದಾ ನೋಡ್ರಿ. ಇನ್ನ ನಮ್ಮೂರಿನ ತೋಟದ ಮನಿ ಬಿನ್ನಾಣಗಿತ್ತಿ ಬೀರಮ್ಮ, ಹೀಂಗ ಮಾಡಿ ಮೂರ್ಸಲ ರೊಕ್ಕಾ ಪಡದಾಳಂತ್ರಿ. ಏನೇನು ತ್ರಾಸ ಇಲ್ರಿ. ಎಲ್ಲ ಅಗ್ದಿ ಸರಳ ಐತ್ರಿ. ಒಂದು ಗಂಡು, ಒಂದು ಹೆಣ್ಣು ರಿಜಿಸ್ಟ್ರಿ ಆಪೀಸಕ್ಕಹೋಗಿ ನಾವಿಬ್ರು ಲಗಣ ಅಕ್ಕೀವ್ರೀ ನಮಗ ಶಾದಿ ಭಾಗ್ಯ ಕೊಡ್ರಿ – ಅಂತ ಹೇಳಿ ಆಯಪ್ಪಂಗೊಂದೀಟು ದಕ್ಷಿಣಾ ಕೊಟ್ಟು ಬಿಟ್ರ ತೀರ್ತು. ತೀನ್ ಹಜಾರ್ ಕಿಶೀ ವಳಗ ಮದವೀ ಮಾಡಕೋ ಅಂತ ರೊಕ್ಕಾ ಕೊಟ್ಟೀರಿ. ಖರೆ, ಆದ್ರ ಮತ್ತ ಏನ ಮಾಡಬೇಕ್ರಿ ಈ ಮದುಮಕ್ಳು? ಮನಿವಳಗ ಗಪ್ಪ ಕುಂದ್ರು ಅಂತ ಹೇಳ್ತಾರೇನು ನಿಂ ಸಿ.ಎಂ.? ಅಲ್ರೀ, ಹನಿಮೂನ್, ಪನಿಮೂನ್ ಏನೂ ಮಾಡಾ ಹಂಗಿಲ್ಲೇನು? ಅದಕ್ಕ ಖರ್ಚು ಬರಾ ಹಂಗಿಲ್ಲೇನು? ಅದಕ್ಕಾ ನಾ ಏನ್ ಹೇಳಾಕ ಹತ್ತೀನಪಾ ಅಂದ್ರೆ, ಶಾದಿ ಭಾಗ್ಯ ಯೋಜನಾದೊಳಗೆ ಲಗಣ ಆತಪಾ ಅಂದ್ರ ಸಾಕು, ಹಿಂದಾಗಡಿ ಆ ಜೋಡಿಗೆ ಹತ್ತತ್ತು ಸಾವಿರ ಹನಿಮೂನ್ ಭಾಗ್ಯ ಯೋಜನಾದೊಳಗೆ ರೊಕ್ಕ ಸಿಗಬೇಕ್ರಿ. ಚೈನಿ ಮಾಡಿ ಬರಲೇಳ್ರಿ, ನಿನಾಪ್ನ!

ನಾವು ಬಿಲ್‌ಕುಲ್ ಮನೀ ಬಿಟ್ಟು ಹೋಗಾವ್ರಲ್ಲ ಅಂತ ಯಾಂವ ಮಳ್ಳ ಚಾಷ್ಟೀ ಮಾಡ್ತಾನಪಾ ಅಂತಂದ್ರ, ಅಂವಗ ಹೆಂಗಾರ ಮಾಡಿ ಆ ರೊಕ್ಕ ಸಿಗಾ ಹಂಗ ಮಾಡ್ರಿ. ಹನಿಮೂನ್ ಭಾಗ್ಯ ಬೇಡ – ಒಗೀರಿ ಅತ್ತಾಗ – ಹಾಸಿಗಿ ಭಾಗ್ಯ ಯೋಜನೆ ಮಾಡ್ರಿ. ಆ

ರೊಕ್ಕಾ ಅಂವಗ ಕೊಡ್ರಿ. ಯಾಂವ ಬ್ಯಾಡ ಅಂತಾನು ಹೇಳ್ರಲ್ಲಾ. ಡನ್‌ಲಪ್ಪಂದೋ, ಇನ್ಯಾವುದೋ ಅಪ್ಪಂದೋ ಹಾಸಿಗಿ, ಚಾದರ ಎಲ್ಲ ತರಲೇಳ್ರಿ. ಮಸ್ತ ಮಜಾ ಆಗ್ತತೇಳ್ರಿ ಹಾಸಿಗಿ ಭಾಗ್ಯ ಯೋಜನಾ ಬಂದು ಬಿಟ್ರೆ.

ನಾನು ಹರಿಶ್ಚಂದ್ರನ ಕುಲದೊಳಗ ಹುಟ್ಟೀನಿ. ನಾ ಬಿಟ್ಟೇ ರೊಕ್ಕಾ ತಗೊಳಾಂವ ಅಲ್ಲ. ನಾ ಸೋಳಾ ಆಣಿ ಸಾಫ್ ಸೀದಾ ಮನಷ್ಯ ಅಂತ ಯಾವನಾದ್ರು ಶಾಣ್ಯಾತನ ಮಾಡಾಕ ಹತ್ತಿದ್ನಪಾ ಅಂದ್ರ ಏನ ಮಾಡಾಕಾಗ್ತತೇಳ್ರಿ. ಆದ್ರ ಈ ಭಾಗ್ಯ ಯೋಜನಾ ಸಕ್ಸಸ್ ಆಗಬೇಕಾದ್ರ ಹೆಂಗಾರ ಮಾಡಿ, ಈ ಹರಿಶ್ಚಂದ್ರಪ್ಪಂಗೂ ರೊಕ್ಕಾ ಸಿಗಾ ಹಂಗ ಮಾಡಬೇಕ್ರಿ.

ಹೂಂ! ಹೌದೇಳ್ರಿ. ಅಗ್ದಿ ಚಲೋ ಐಡಿಯಾಂತಂದ್ರ ಈ ಹರಿಶ್ಚಂದ್ರಪ್ಪಗೊಳಿಗೆ ಸ್ಮಶಾನ ಭಾಗ್ಯ ಯೋಜನಾ - ಅಂತ ಬ್ಯಾರೇನೇ ಯೋಜನೆ ಶುರು ಮಾಡ್ರಪ್ಪಾ ಅಂತ ಸಿ.ಎಂ. ಸಾಹೇಬ್ರನ್ನ ಭೇಟಿ ಆಗಿ ಸಮಾಜಾಯಿಷಿ ಬಿಟ್ರ. ಎಲ್ಲ ಪಾಡಾಗತೈತಿ! ಕಾಕಾಂಚಲ ರಾಜ್ಯ ಆದರ್ಶ ನಾಡಾಗತೈತಿ - 'ಹುಟ್ಟಿನಿಂದ ಚಟ್ಟದವರೆಗೂ ಭಾಗ್ಯ ಯೋಜನೆಗಳನ್ನು ಅಳವಡಿಸಿದ ಏಕೈಕ ರಾಜ್ಯ 'ಕಾಕಾಂಚಲ' ಆಗತ್ತಿ - ಇದಕ್ಕಿಂತಾ ಹೆಚ್ಚಿಗಿ ಇನ್ನೇನು ಬೇಕ್ರಿ?

ನನ್ನ ಬಾಜೂ ಮನಿಯಾಗ ಒಬ್ಬ ಅದಾನ್ರಿ ಕೆಪ್ಪೇಶಿ ಅಂತ, ಹರಕು ಮಾರಿಯವ ಬಿಡ್ರಿ. ಅಂವ ಏನ್ ಹೇಳಾಕ ಹತ್ಯಾನ ಖಬರೈತೇನ್ರಿ? 'ಈ ಭಾಗ್ಯ ಯೋಜನೆಗಳೆಲ್ಲ ಯದಕ್ಕೆ ಬೇಕು? ಏನು ಫಾಯ್ದೆ ಆದಂಗಾತು? ಊರ್ನಾಗ ಮಂದಿ ಎಲ್ಲ ಸೋಂಬೇರಿ ಶಿಂಗಣ್ಣಗಳಾ ಆಗ್ಯಾರ. ಇವೆಲ್ಲ ಭಾಗ್ಯ ಯೋಜನಾ ಅಲ್ಲಲೇ - ನಮ್ಮ ರಾಜ್ಯಕ್ಕೆ ಬೆನ್ನ ಹತ್ತಿದ ಬೇತಾಳ ಯೋಜನೆಗಳಿವು - ದೌರ್ಭಾಗ್ಯ ಯೋಜನೆ ಅಂತ ಕರಿಯಾದೇ ಛಲೋ' - ಅಂತಾನ್ರಿ. ಧಿಮಾಕ ತೋರಿಸತಾನ ಹುಚ್ಚು ಖೋಡಿನ ತಂದು!

☆

---

## ನಾನು ಯಾರು?

ಒಂದು ವಿಮಾನ ನಿಲ್ದಾಣಲ್ಲಿ ಗದ್ದಲವೋ ಗದ್ದಲ. ಒಂದು ವಿಮಾನ ಯಾನ ರದ್ದಾಗಿತ್ತು. ಅದರ ಪ್ರಯಾಣಿಕರನ್ನು ಇನ್ನೊಂದು ಫ್ಲೈಟ್‌ನಲ್ಲಿ ಕಳಸಬೇಕಿತ್ತು. ಹೊಸ ರಿಸರ್ವೇಷನ್‌ಗಾಗಿ ಪ್ರಯಾಣಿಕರು ಸಾಲಿನಲ್ಲಿ ನಿಂತಿದ್ದರು. ಆಗೊಬ್ಬ ತರಾತುರಿಯಿಂದ ಕೌಂಟರ್ ಬಳಿ ನುಗ್ಗಿ "ನನಗೆ ಈ ಫ್ಲೈಟ್‌ನಲ್ಲಿ ಸೀಟ್ ಬೇಕೇ ಬೇಕು. ಅದೂ ಫಸ್ಟ್ ಕ್ಲಾಸ್‌ನಲ್ಲಿ. ರಿಸರ್ವೇಷನ್ ತಕ್ಷಣ ಮಾಡಿಕೊಡಿ" ಎಂದು ಜಬರದಸ್ತಿ ಮಾಡಿದ.

ಆಗ ಪರಿಚಾರಿಕೆ "ಸಾರಿ ಸರ್, ನೀವು ಲೈನಿನಲ್ಲಿ ಬರಬೇಕು" ಎಂದಳು.

ಕೋಪಗೊಂಡ ಅವನು "ನಾನು ಯಾರು ಗೊತ್ತೆ?" ಎಂದು ಜೋರಾಗಿ ಕೇಳಿದ.

ಆಗ ಆಕೆ ತಕ್ಷಣ ಮೈಕ್‌ನಲ್ಲಿ "ಯುವರ್ ಅಟೆನ್‌ಷನ್ ಪ್ಲೀಸ್, ಇಲ್ಲೊಬ್ಬರಿಗೆ ತಾವು ಯಾರೆಂದು ಗೊತ್ತಿಲ್ಲ. ಯಾರಾದರೂ ಬಂದು ಅವರನ್ನು ಗುರುತಿಸಿ ಹೇಳುವಿರಾ ಪ್ಲೀಸ್.." ಎಂದು ಅನೌನ್ಸ್ ಮಾಡಿದಾಗ ಅವನು ಪೆಚ್ಚು ಮೋರೆ ಹಾಕೊಕೊಂಡು ಹಿಂದೆ ಸರಿದು ಸರತಿ ಸಾಲಿನಲ್ಲಿ ನಿಂತ.

*(ಸಂಗ್ರಹ)*

ಫೋಟೊ ಪ್ರಹಸನ

# ವಾಟ್ಸಪ್ ಪಂಚಾಂಗ

- ಪ್ರಶಾಂತ ಆಡೂರ

ಈ ಸುಡಗಡ ವಾಟ್ಸಪ್ ಒಂದ ಯಾರ ಕಂಡ ಹಿಡದರೋ ಏನೋ ಇದರ ಸಂಬಂಧ ಜೀವನ ಸಾಕ ಸಾಕಾಗಿ ಹೋಗೆದ. ಅದರಾಗ ಅರ್ಧಾ ಫೇಸಬುಕ್‌ನಿಂದ ಹಳ್ಳಾ ಹಿಡದಿದ್ವಿ ಇನ್ನ ಅರ್ಧಾ ಈ ವಾಟ್ಸಪ್‌ನಿಂದ ಹಳ್ಳಾ ಹಿಡದ ಬಿಟ್ಟೇವಿ. ಇನ್ನೊಂದ ಮಜಾ ಅಂದರ ವಾಟ್ಸಪ್ ನೀವ ಕಂಪನಿ ಒಳಗ ಉಪಯೋಗ ಮಾಡಬಹುದು. ಅಲ್ಲಾ, ಉಪಯೋಗ ಮಾಡಬಹುದು ಏನ ಕಂಪನಿ ಒಳಗ ಅದನ್ನ ಕಂಪಲ್ಸರಿ ಮಾಡಿ ಬಿಟ್ಟಾರ, ಯಾಕಂದರ ಅರ್ಧಾ ಕಂಪನಿ ಕೆಲಸ ಇವತ್ತ ವಾಟ್ಸಪ್‌ನಾಗ ನಡಿತದ. ಹಿಂಗಾಗಿ ನನ್ನ ಕಡೆ ಸ್ಮಾರ್ಟ ಫೋನ ಇಲ್ಲಾ ಅಂತ ನಾ ಇಷ್ಟ ದಿವಸ ಈ ವಾಟ್ಸಪ್ ನಿಂದ ದೂರ ಇದ್ದೆ. ಆದರ ಕಂಪನಿಯವರ ತಮ್ಮ ರೊಕ್ಕದಲೆ ನಂಗ ಒಂದ ಸ್ಮಾರ್ಟ ಫೋನ ಕೊಡಸಿ ವಾಟ್ಸಪ್ ಹಾಕಸಿಸಿ ಕೆಲಸಾ ತೊಗೊಳಿ ಕತ್ತಾರ. ಏನ್ಮಾಡ್ತೀರಿ?

ಅದರಾಗ ಈ ವಾಟ್ಸಪ್ ಗ್ರೂಪ್ ಅಂತ ಮಾಡಿ ಮಾರ್ಕೆಟಿಂಗ್, ಪ್ರಡಕ್ಶನ್, ಪರ್ಚೇಸ್ ಎಲ್ಲಾ ಡಿಪಾರ್ಟ್‌ಮೆಂಟ್‌ಗೆ ಒಂದೊಂದ ಗ್ರೂಪ್ ಮಾಡಿ ಮ್ಯಾಲೆ ಟಾಪ್ ಮ್ಯಾನೇಜ್‌ಮೆಂಟ್ ಅಂತ ಮತ್ತೊಂದ ಗ್ರೂಪ್ ಮಾಡಿ ನಮ್ಮ ಜೀವಾ ತಿನ್ನಲಿಕತ್ತಾರ.

ಹಂಗ ಒಮ್ಮೆ ವಾಟ್ಸಪ್ ಅದ ಅಂದ ಮ್ಯಾಲೆ ದೋಸ್ತರ ಸುಮ್ಮನ ಕೂಡ್ತಾರ? ಅವರ ನಮಗ ಕೇಳಂಗಿಲ್ಲಾ ಹೇಳಂಗಿಲ್ಲಾ ನೂರಾ ಎಂಟ ಗ್ರೂಪ್ ಒಳಗ ಹಾಕಿ ಉಸಿರಾಡಸಲಿಕ್ಕೂ ಟೈಮ್ ಸಿಗಲಾರದಂಗ ಮಾಡಿ ಬಿಟ್ಟಾರ. ಮ್ಯಾಲೆ ರಿಲೇಟಿವ್ಸ್ ಗ್ರೂಪ್ ಬ್ಯಾರೆ, ಅದ ಹೆಂಡ್ತಿ ಕಡೆ ಸಂಬಂಧದ್ದ ಒಂದ ಗ್ರೂಪ್ ನಮ್ಮ ಕಡೆದ ಒಂದ ಗ್ರೂಪ್, ಮತ್ತ ಅದರಾಗ ಬರೇ ನಮ್ಮ ಗೋತ್ರದವರದ ಒಂದ ಗ್ರೂಪ್, ನಮ್ಮ ಮಠದ್ದ ಒಂದು ಗ್ರೂಪ್, ಓಣ್ಯಾಗಿನ ಸಂಘದ್ದ ಒಂದ ಗ್ರೂಪ್. ಇವತ್ತ ಒಂದಿಷ್ಟ ಮಂದಿಗಂತೂ ಲೈಫ್ ಅಂದರ ವಾಟ್ಸಪ್, ಅದಿಲ್ಲಾ ಅಂದರ ನಡೆಯಂಗೇಲಾ. ಇಪ್ಪತ್ತನಾಲ್ಕ ತಾಸು ಅದರಾಗ ಇರ್ತಾರ. ಅದ ಏನೇನ ಕಳಸ್ತಾರ ಇದರಾಗ ಅಂತೇನಿ. ಯಾವದ ಇಂಪಾರ್ಟೆಂಟ್ ಯಾವದಲ್ಲಾ ಅಂತ ಒಬ್ಬರೂ ಅರ್ಥ ಮಾಡ್ಕೋಳಂಗಿಲ್ಲಾ. ಅದರಾಗ ಒಂದಿಷ್ಟ ಅಂತ ಒಬ್ಬರ ಕಳಸಿದ್ದನ್ನ ಮತ್ತೊಬ್ಬರ ಕಳಸ್ತಿರ್ತಾರ.

ಹಂತಾದರಾಗ ನಮ್ಮ ದೋಸ್ತ ಒಬ್ಬೊಂವ ಮೊನ್ನೆ ಯುಗಾದಿ ಆದಾಗಿಂದ ದಿವಸಾ ಮುಂಜಾನೆ ಇಂದಿನ ಪಂಚಾಂಗ ಅಂತ ಅವತ್ತಿಂದ ತಿಥಿ, ರಾಹುಕಾಲ, ಗೂಳಿ ಕಾಲ ಎಲ್ಲಾ ವಾಟ್ಸಪ್‌ನಾಗ ಕಳಸಲಿಕತ್ತಾನ. ಅಗದಿ ಛಂದಾಗಿ 'ನಮಸ್ಕಾರ, ಶುಭೋದಯ, ಇಂದು ಸೋಮವಾರ, ಅಗಸ್ಟ 17, 2015 ಶ್ರೀ ಮನ್ಮಥನಾಮ ಸಂವತ್ಸರ, ದಕ್ಷಿಣಾಯಣಾ, ವರ್ಷ ಋತು, ಶ್ರಾವಣ ಮಾಸೆ, ಶುಕ್ಲಪಕ್ಷೆ, ತದಿಗೆ ತಿಥಿ, ಉತ್ತರಾ ನಕ್ಷತ್ರಾ, ರಾಹುಕಾಲ 7.30

ಇಂದ 9ರ ವರೆಗೆ' ಅಂತ ಬರದ ಕಳಸ್ತಿದ್ದಾ. ಅವಂದ ವಾಟ್ಸಪ್ ಒಳಗ ಮೆಸೆಜ್ ಬಂತ ಅಂದರ ಸಾಕ ಅದ ನಮಗ ಗ್ಯಾರಂಟೀ ರಾಹುಕಾಲ ಇದ್ದಂಗ ಆ ಮಾತ ಬ್ಯಾರೆ.

ಅಲ್ಲಾ ಇಂವಾ ಯಾವಾಗಿಂದ ಇಷ್ಟ ಸುಸಂಸ್ಕೃತ ಆದಾ, ತಾ ನೋಡಿದರ ವಾರದಾಗ ಮೂರ ದಿವಸ ಪಬ್ ನಾಗ ಇರ್ತಾನ ಅಂತ ನಾ ವಿಚಾರ ಮಾಡಿ ಅವಂಗ ಕೇಳಿದರ ಅಂವಾ ಯಾರೋ ಕಳಸಿದ್ದನ್ನ ಹಿಂದ ಮುಂದ ನೋಡಲಾರದ ದಿವಸಾ ಫಾರ್ವರ್ಡ್ ಮಾಡ್ತಾನ ಅಂತ ಗೊತ್ತಾತ. ಅಲ್ಲಾ ಈ ಫಾರ್ವರ್ಡ್ ಮಾಡೋದು ಒಂದ ವಾಟ್ಸಪ್ ಒಳಗ ದೊಡ್ಡ ಚಟಾನ ಬಿಡ್ರಿ. ಒಂದ ಸರತೆ ಅಂವಾ ತನ್ನ ರಿಲೇಟಿವ್ಸ್ ಗ್ರೂಪ್‌ಗೆ ಕಳಸೊ ಮೆಸೆಜ್ ತಪ್ಪಿ ನನಗ ಬಂದ ಬಿಡ್ತ. ಅದರಾಗ ಅಂವಾ ತನ್ನ ಕಸೀನನ್ ಮದ್ವಿ ಸೆಡ್ಯುಲ್ ಬರದ ಕಳಸಿದ್ದಾ.

ಗುರುವಾರ ಸಜ್ಜಿಗೆ ಮುಹೂರ್ತ, ಶುಕ್ರವಾರ ದೇವರ ಊಟ, ಶನಿವಾರ ಸೋಡ ಮುಂಜವಿ, ಸೋಮವಾರ ಬೀಗರ ಊರಿಗೆ ಪ್ರಯಾಣ, ಮಂಗಳವಾರ ಮದುವಿ. ಬುಧವಾರ ರೆಸ್ಟ್, ಗುರುವಾರ ರಿಸೆಪ್ಷನ್, ಶುಕ್ರವಾರ ಗೊಂದ್ಲ, ಶನಿವಾರ ಸತ್ಯನಾರಾಯಣ ಪೂಜಾ ಫಾಲೊವ್ಡ ಬೈ ಪ್ರಸ್ತ.... ರವಿವಾರ ಬೀಗರ ಮನಿ ಒಳಗ ಸತ್ಯನಾರಾಯಣ ಪೂಜಾ ಕಮ್ ರಿಸೆಪ್ಶನ್... ಹಿಂಗ ಒಂದ ಕಥಿನ ಬರದ ಕಳಸಿದ್ದಾ. ನನಗ ತಲಿಕೆಟ್ಟ ಸಂಬಂಧ ಇಲ್ಲಾ ಸಾಟಿ ಇಲ್ಲಾ ನನಗ ಯಾಕ ಕಳಸ್ಯಾನ ಅಂತ ಅದಕ್ಕ ನಾ ನಂದೊಂದ ಕಥಿ ಸೇರಿಸಿ ಬರದ ಕಳಸಿದೆ. ನಾ ಅವನ ಮೆಸೆಜ್ ಮುಂದ 'ಶನಿವಾರ ಸತ್ಯನಾರಾಯಣ ಪೂಜಾ ಫಾಲೊವ್ಡ ಬೈ ಪ್ರಸ್ತ.... ಮುಂದ ಎರಡುವರಿ ತಿಂಗಳ ಬಿಟ್ಟ ಕಳ್ಳ ಕುಬಸ.... ಐದರಾಗ ತವರಮನಿ ಕುಬಸಾ.... ಎಂಟರಾಗ ಅತ್ತಿಮನಿ ಕುಬಸಾ.... ನಡಬರಕ ಮೂರ ತಿಂಗಳ ಸಾರ್ವಜನಿಕ ಕುಬಸ.... ಎಂಟರಾಗ ಹಡಿಲಿಕ್ಕೆ ತವರ ಮನಿಗೆ ಒಂಬತ್ತರಾಗ ಡಿಲೇವರಿ... ಕೂಸಿಗೆ ಒಂದ ತಿಂಗಳಾದ ಮ್ಯಾಲೆ ನಾಮಕರಣ ಹುಡಗಿ ತವರಮನಿ ಒಳಗ, ಐದರಾಗ ಹೆತ್ತಿಬಣಾ.... ಅಂತ ಬರದ ವಾಪಸ ಕಳಸಿ ಲಾಸ್ಟಿಗೆ 'ಪ್ಲೀಸ್ ಸೆಂಡ್ ದಿಸ್ ಮೆಸೇಜ್ ಟು 11 ಪೀಪಲ್ ಅಂಡ್ ಯು ವಿಲ್ ಗೆಟ್ ಗುಡ್ ಲಕ್ ಬೈ ನೈಟ್' ಅಂತ ಬರದಿದ್ದೆ.

ಮುಂದ ಒಂದ ತಾಸಿಗೆ ಆ ಮೆಸೆಜ್ ಮತ್ತ ನನಗೆ ಬಂತ. ಆ ಮಗಾ ನಾ ಏನ ಬರದಿದ್ದೆ ಅನ್ನೋದನ್ನೂ ನೋಡಲಾರದ ಲಾಸ್ಟ ಲೈನ ಒಂದ ನೋಡಿ ಓದಿ ಭಡಾ ಭಡಾ ಆಡ್ಯಾ ಬರದಾನ ಅಂದರ ಇಂಪಾರ್ಟೆಂಟ್ ಮೆಸೆಜ್ ಇರ್ತದ ತೊಗೊ ಅಂತ ಹನ್ನೊಂದ ಮಂದಿಗೇನ ಹನ್ನೊಂದ ಗ್ರೂಪಿಗೆ ಫಾರ್ವರ್ಡ್ ಮಾಡಿ ಬಿಟ್ಟಿದ್ದಾ. ಏನ್ಮಾಡ್ತೀರಿ ಹಿಂತಾವರಿಗೆ. ಯಾರ ಕಂಡ ಹಿಡದರೋ ಏನೋ ಈ ಸುಡಗಾಡ ವಾಟ್ಸಪ್ ಅಂತ ಖರೇನ ಒಮ್ಮೊಮ್ಮೆ ತಲಿ ಆ ಸುಡಗಾಡ ಮೊಬೈಲ್ ತೊಗೊಂಡ ಜಜ್ಜಕೊಬೇಕು ಅನಸ್ತದ. ನಾವ ಇವತ್ತ ಟೆಕ್ನಾಲಜಿ ಹೆಸರಿಲೆ ನಮ್ಮ ಜೀವನ ಮಿಸರಬಲ್ ಮಾಡ್ಕೋಳಿಕತ್ತೇವಿ ಅಂತ ನನಗಂತೂ ಅನಸಲಿಕತ್ತದ. ನಿಮಗ ಹೆಂಗ ಅನಸ್ತದ ನೋಡ್ರಿ. ಹಂಗ ನೀವು ವಾಟ್ಸಪ್ ಹುಳಾನ ಇದ್ದರ ನನ್ನ ಆರ್ಟಿಕಲ್ ಒಂದ ಹತ್ತ ಮಂದಿಗೆ ಫಾರ್ವರ್ಡ್‌ರ ಮಾಡ್ರಿ, ಹೋಗ್ಲಿ ಇದನ್ನರ ನಾಲ್ಕ ಮಂದಿ ಓದ್ಲಿ.

☆